

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮಾರ್ಚ್ 13 ಸೋಮವಾರ 2023


ಸಂಪುಟ: 43 | ಸಂಚಿಕೆ: 323 | ಪುಟಗಳು: 10

₹4

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com







ಪ್ರಧಾನಿ ನರೇಂದ್ರ ಮೋದಿಯವರಿಂದ
ಮೈಸೂರು–ಬೆಂಗಳೂರು ದಶಪಥ ಎಕ್ಸ್‌ಪ್ರೆಸ್ ವೇ ಲೋಕಾರ್ಪಣೆ

- ●ಶ್ರೀರಂಗಪಟ್ಟಣ–ಗುಡ್ಡೆಹೊಸೂರು ಚತುಷ್ಪಥ ರಸ್ತೆಗೆ ಶಂಕುಸ್ಥಾಪನೆ
- ●ಡಬಲ್ ಇಂಜಿನ್ ಸರ್ಕಾರ ಇಲ್ಲದಿದ್ದರೆ ಎಕ್ಸ್‌ಪ್ರೆಸ್ ಹೈವೇ ಸಾಧ್ಯವಾಗುತ್ತಿರಲಿಲ್ಲ
- ●ಮೈಸೂರು, ರಾಮನಗರ, ಮದ್ದೂರಲ್ಲಿ ಕೈಗಾರಿಕೋದ್ಯಮ, ಪ್ರವಾಸೋದ್ಯಮ ಅಭಿವೃದ್ಧಿ
- ●ಸಂಚಾರ ದಟ್ಟಣೆಯಿಂದ ರೋಸಿ ಹೋಗಿದ್ದವರಿಗೆ ದಶಪಥ ರಸ್ತೆ ಉಡುಗೊರೆ



ಬೆಂಗಳೂರು–ಮೈಸೂರು ದಶಪಥ ಎಕ್ಸ್‌ಪ್ರೆಸ್ ವೇ ಅನ್ನು ಭಾನುವಾರ ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು. ಮಂಡ್ಯ ಸಂಸದೆ ಸುಮಲತಾ ಅಂಬರೀಷ್, ಅಬಕಾರಿ ಸಚಿವ ಗೋಪಾಲಯ್ಯ, ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ, ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ, ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಚಿತ್ರದಲ್ಲಿದ್ದಾರೆ.

ಮಂಡ್ಯ, ಮಾ.12(ಮೋಹನ್ ರಾಜ್)– ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಭಾನುವಾರ ಮಂಡ್ಯ ಜಿಲ್ಲೆಯ ಗೆಜ್ಜಲಗೆರೆ ಕಾಲೋನಿಯಲ್ಲಿ ಬೆಂಗಳೂರು–ಮೈಸೂರು ದಶಪಥ ಎಕ್ಸ್‌ಪ್ರೆಸ್ ವೇ ಅನ್ನು ಲೋಕಾರ್ಪಣೆ ಮಾಡಿದರು. ಇದೇ ವೇಳೆ ಶ್ರೀರಂಗ ಪಟ್ಟಣ–ಗುಡ್ಡೆಹೊಸೂರು ಚತುಷ್ಪಥ ರಸ್ತೆಗೆ ಶಂಕುಸ್ಥಾಪನೆ ನೆರವೇರಿಸಿದರು.



ಈ ವೇಳೆ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದ ಮೋದಿ, ಭುವನೇಶ್ವರಿ ದೇವತೆ, ಆದಿಚುಂಚನಗಿರಿ ಮತ್ತು ಮೇಲುಕೋಟೆಯ ಗುರುಗಳಿಗೆ ನಮನ ಸಲ್ಲಿಸುವ ಮೂಲಕ ಭಾಷಣವನ್ನು ಪ್ರಾರಂಭಿಸಿದರು. ರಾಜ್ಯದ ವಿವಿಧ ಭಾಗಗಳಲ್ಲಿ ಕರ್ನಾಟಕದ ಜನರ ನಡುವೆ ಇರಲು ಅವಕಾಶ ಸಿಕ್ಕಿರುವುದಕ್ಕೆ ಸಂತಸ ವ್ಯಕ್ತಪಡಿಸುತ್ತಿರುವುದಾಗಿ ಹೇಳಿದ ಅವರು, 'ಭಾರತಮಾಲಾ' ಮತ್ತು 'ಸಾಗರ ಮಾಲಾ' ದಂತಹ ಉಪಕ್ರಮಗಳು ಭಾರತದ ಭೂ ದೃಶ್ಯವನ್ನು ಪರಿವರ್ತಿಸುತ್ತಿವೆ. ಈ ವರ್ಷದ ಬಜೆಟ್‌ನಲ್ಲಿ ದೇಶದ ಮೂಲಸೌಕರ್ಯ ಅಭಿವೃದ್ಧಿಗೆ 10 ಲಕ್ಷ ಕೋಟಿಗೂ ಹೆಚ್ಚು ಅನುದಾನ ನೀಡಲಾಗಿದೆ ಎಂದರು. ಕೇಂದ್ರ ಹಾಗೂ ರಾಜ್ಯದಲ್ಲಿ ಡಬಲ್ ಇಂಜಿನ್ ಸರ್ಕಾರ ಇಲ್ಲದಿದ್ದರೆ ತಂತ್ರಜ್ಞಾನಗಳ ನಗರ ಬೆಂಗಳೂರಿಗೂ ಪರಂಪರೆಯ ನಗರ ಮೈಸೂರಿಗೂ ನೇರ ರಸ್ತೆ ಸಂಪರ್ಕ ಸಾಧ್ಯವಾಗುತ್ತಿರಲಿಲ್ಲ. ಬೆಂಗಳೂರು–ಮೈಸೂರು ನಗರದ ಜನತೆಯ ಬಹು ದಶಕಗಳ ಬೇಡಿಕೆ ಈಡೇರಿಸಿದ ಕೀರ್ತಿ ನಮ್ಮ ಸರ್ಕಾರಕ್ಕೆ ಸಲ್ಲಬೇಕು ಎಂದು ಪ್ರಧಾನಿ ▶ 8ನೇ ಪುಟಕ್ಕೆ

ಜೆಡಿಎಸ್ ಭದ್ರಕೋಟೆಯಲ್ಲಿ ಮೋದಿ ರೋಡ್ ಶೋ ಮೂಲಕ ಶಕ್ತಿ ಪ್ರದರ್ಶನ

ಮಂಡ್ಯ, ಮಾ.12(ಮೋಹನ್‌ರಾಜ್)– ಸಕ್ಕರೆ ನಾಡು ಮಂಡ್ಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಬರೋಬ್ಬರಿ ಒಂದೂವರೆ ಕಿಲೋ ಮೀಟರ್ ಅಬ್ಬರದ ರೋಡ್ ಶೋ ನಡೆಸುವ ಮೂಲಕ ಜೆಡಿಎಸ್ ಭದ್ರಕೋಟೆಯಲ್ಲಿ ಶಕ್ತಿ ಪ್ರದರ್ಶನ ಮಾಡಿದರು.

ನವದೆಹಲಿಯಿಂದ ವಿಶೇಷ ವಿಮಾನದ ಮೂಲಕ ಬೆಳಗ್ಗೆ 10.30ರ ಸುಮಾರಿಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಬಂದ ಮೋದಿ ಅಲ್ಲಿಂದ, ಸೇನಾ ಹೆಲಿಕಾಪ್ಟರ್‌ನಲ್ಲಿ ಮಂಡ್ಯ ನಗರದ ಪಿಇಎಸ್ ಕಾಲೇಜು ಆವರಣದಲ್ಲಿರುವ ಕೆಎಸ್‌ಸಿಎ ಕ್ರಿಕೆಟ್ ಮೈದಾನಕ್ಕೆ ಬಂದಿಳಿದರು. ಸಿಎಂ ಬಸವರಾಜ ಬೊಮ್ಮಾಯಿ ಪ್ರಧಾನಿ ಮೋದಿ ಅವರನ್ನು ಸ್ವಾಗತಿಸಿದರು, ಪೊಲೀಸ್ ಗೌರವ ವಂದನೆ ಪಡೆದ ಪ್ರಧಾನಿ, ಅಲ್ಲಿಂದ ರಸ್ತೆ ಮೂಲಕ ಐಬಿ ವೃತ್ತಕ್ಕೆ ಬಂದರು.

ಐಬಿ ವೃತ್ತದಿಂದ ರೋಡ್ ಶೋ ಆರಂಭ: ಬೆಳಗ್ಗೆ 11 ಗಂಟೆ ಸುಮಾರಿಗೆ ರೋಡ್ ಶೋ ಆರಂಭಿಸಿದ ಪ್ರಧಾನಿ ಮೋದಿ, ರಸ್ತೆಯ ಅಕ್ಕಪಕ್ಕದಲ್ಲಿ ನಿಂತಿದ್ದ ಜನರ ಬಳಿ ಕೈ ಬೀಸುತ್ತಾ ತೆರಳಿದರು. ರೋಡ್ ಶೋ ಆರಂಭವಾಗುತ್ತಿದ್ದಂತೆ ಐಬಿ ಎದುರಿನ ಹರಿಪ್ರಿಯಾ ಹೋಟೆಲ್ ಬಳಿ ಸಾವಿರಾರು ಜನ ಜಮಾಯಿಸಿ, ಮೋದಿ ಪರ ಘೋಷಣೆ ಕೂಗುತ್ತಾ ಕೈ ಬೀಸಿದರು.

ಹೂವಿನಿಂದ ಮುಚ್ಚಿ ಹೋದ ಮೋದಿ ಕಾರು: ಹಳದಿ ಬಣ್ಣದ ಸಾವಂತಿಗೆ ಹೂವನ್ನು ರಸ್ತೆಯುದ್ದಕ್ಕೂ ಎರಚಿದ ಪರಿಣಾಮ ಮೋದಿ, ಎಸ್‌ಪಿಜಿ ಅಧಿಕಾರಿಗಳು ಹಾಗೂ ಕಾರು ಸಂಪೂರ್ಣ ಹಳದಿಮಯವಾಗಿತ್ತು. ಎಸ್‌ಪಿಜಿ ಅಧಿಕಾರಿಗಳು ಹೂವನ್ನು ಕಾರಿನಿಂದ ತೆಗೆಯುತ್ತಾ ಮುಂದೆ ನಡೆದರು. ಹರಿಪ್ರಿಯಾ ಹೋಟೆಲ್ ಮಾರ್ಗವಾಗಿ, ಕೇಂದ್ರ ಬಸ್ ನಿಲ್ದಾಣ, ಸಂಜಯ ವೃತ್ತದಲ್ಲಿ ಸಾವಿರಾರು ಜನರು ಮೋದಿಯನ್ನು ಬರಮಾಡಿಕೊಂಡರು.

ರೈತ ಸಭಾಂಗಣದ ಮುಂದೆ ಕಟೀಲು ಸ್ವಾಗತ: ರೈತ ಸಭಾಂಗಣದ ಮುಂದೆ ಮೋದಿ ರೋಡ್ ಶೋ ಬಂದಾಗ ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲು, ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್ ಮೋದಿ ಅವರನ್ನು ಬರಮಾಡಿಕೊಂಡರು. ಬಳಿಕ ಮೋದಿ ತೆರೆದ ವಾಹನದಲ್ಲಿ ತಮ್ಮ ರೋಡ್ ಶೋ ಮುಂದುವರೆಸಿದರು. ಅಲ್ಲಿಂದ ನಗರಸಭೆ ಕಚೇರಿ, ಮಹಾವೀರ ವೃತ್ತ, ಸಿಲ್ವರ್ ಜ್ಯೂಬಿಲಿ ಪಾರ್ಕ್ ಮೂಲಕ ನಂದಾ ಚಿತ್ರಮಂದಿರದ ಮುಂದೆ ಮೋದಿ ರೋಡ್ ಶೋ ಮುಕ್ತಾಯವಾಯಿತು.

ಹನಕೆರೆ ಬಳಿ ಮೋದಿ ವಾಕಿಂಗ್: ನಂದಾ ಚಿತ್ರಮಂದಿರದಿಂದ ಕಾನ್ವೆ ಮೂಲಕ ಸಾಗಿದ ಮೋದಿ ಹನಕೆರೆ ಬಳಿ ಕಾರಿನಿಂದ ಇಳಿದು ರಸ್ತೆಯಲ್ಲಿ ಕೆಲ ದೂರ ನಡೆದರು. ▶ 8ನೇ ಪುಟಕ್ಕೆ



ಸಕಲ ಸರ್ಕಾರಿ ಗೌರವಗಳೊಂದಿಗೆ ಧ್ರುವನಾರಾಯಣ್ ಅಂತ್ಯಕ್ರಿಯೆ

- ●ತಂದೆ–ತಾಯಿ ಸಮಾಧಿ ಬಳಿ ಮಣ್ಣಲ್ಲಿ ಮಣ್ಣಾದ ಧ್ರುವತಾರೆ
- ●ಗಣ್ಯರು, ಕಾರ್ಯಕರ್ತರು, ಅಭಿಮಾನಿಗಳು, ಗ್ರಾಮಸ್ಥರಿಂದ ಅಂತಿಮ ನಮನ





ಚಾಮರಾಜನಗರ, ಮಾ.12(ಎಸ್‌ಎಸ್)– ಶನಿವಾರ ಬೆಳಗ್ಗೆ ಮೈಸೂರಿನಲ್ಲಿ ಹಠಾತ್ ನಿಧನರಾದ ಮಾಜಿ ಸಂಸದರೂ ಆದ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ಆರ್.ಧ್ರುವನಾರಾಯಣ್ ಅವರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ಸಕಲ ಸರ್ಕಾರಿ ಗೌರವಗಳೊಂದಿಗೆ ಅವರ ಹುಟ್ಟೂರು ಚಾಮರಾಜನಗರ ತಾಲೂಕಿನ ಹೆಗ್ಗವಾಡಿ ಗ್ರಾಮದಲ್ಲಿ ನೆರವೇರಿತು.

ಪೊಲೀಸರು ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿ, ರಾಷ್ಟ್ರಗೀತೆ ಮೊಳಗಿಸಿ ಒಂದು ನಿಮಿಷ ಮೌನಾಚರಣೆ ಮಾಡುವ ಮೂಲಕ ಅಗಲಿದ ನಾಯಕನಿಗೆ ಸರ್ಕಾರಿ ಗೌರವ ಸಲ್ಲಿಸಿದರು. ಭಾನುವಾರ ಮಧ್ಯಾಹ್ನ 2.20ರ ಸಮಯದಲ್ಲಿ ಧ್ರುವನಾರಾಯಣ್ ಅವರ ಮನೆಯ ಹಿಂಭಾಗವಿರುವ ಅವರ ತೋಟದಲ್ಲಿ ತಂದೆ ರಂಗಸ್ವಾಮಿ ಹಾಗೂ ತಾಯಿ ಸಿದ್ದಮ್ಮ ಅವರ ಸಮಾಧಿ ಬಳಿ ಹಿಂದೂ ಧಾರ್ಮಿಕ ವಿಧಿ– ವಿಧಾನಗಳೊಂದಿಗೆ ಅಂತ್ಯಕ್ರಿಯೆ ನೆರವೇರಿತು. ಇದಕ್ಕೂ ಮೊದಲು ಧ್ರುವನಾರಾಯಣ್ ಅವರ ಪುತ್ರರಾದ ಧೀರಜ್, ದರ್ಶನ್ ಅವರು ಧ್ರುವನಾರಾಯಣ್ ಅವರ ಪಾರ್ಥಿವ ಶರೀರಕ್ಕೆ ಪೂಜೆ ಸಲ್ಲಿಸಿದರು. ನಂತರ ವಿಧಿ–ವಿಧಾನಗಳೊಂದಿಗೆ ಅಂತ್ಯಕ್ರಿಯೆ ನೆರವೇರಿಸಿದರು. ಇದರೊಂದಿಗೆ ಅಭಿವೃದ್ಧಿಯ ಹರಿಕಾರ, ಸರಳ ಸಜ್ಜನಿಕೆಯ ರಾಜಕಾರಣಿ ಧ್ರುವನಾರಾಯಣ್ ಮಣ್ಣಿನಲ್ಲಿ ಲೀನರಾದರು.

ಸಾವಿರಾರು ಜನರಿಂದ ದರ್ಶನ: ಧ್ರುವನಾರಾಯಣ್ ಅವರ ಹುಟ್ಟೂರು ಹೆಗ್ಗವಾಡಿಯ ಅವರ ಮನೆ ಹಿಂಭಾಗದಲ್ಲಿನ ಸ್ಥಳದಲ್ಲಿ ಮಧ್ಯರಾತ್ರಿ 2.10ರಿಂದ ಭಾನುವಾರ ಮಧ್ಯಾಹ್ನ 12.30ರವರೆಗೂ ▶ 8ನೇ ಪುಟಕ್ಕೆ

ಶಿವಳ್ಳಿ ಹೋಟೆಲ್‌ನಲ್ಲಿ ಕೇಸರಿಬಾತ್ ಸವಿದ ಗಡ್ಕರಿ

ಉಪಾಹಾರ ಸೇವಿಸುವಾಗಲೂ ರಸ್ತೆ ಅಭಿವೃದ್ಧಿ ಯೋಜನೆಗಳ ಪ್ರಸ್ತಾಪಿಸಿದ ಪ್ರತಾಪ್ ಸಿಂಹ



ಮಂಡ್ಯ, ಮಾ.12–ಬೆಂಗಳೂರು–ಮೈಸೂರು ದಶಪಥ ಹೆದ್ದಾರಿ ರೂವಾರಿಯಾಗಿರುವ ಸಂಸದ ಪ್ರತಾಪ್‌ಸಿಂಹ ಹೋಟೆಲ್‌ನಲ್ಲಿ ಉಪಾಹಾರ ಸವಿಯುವ ಸಂದರ್ಭದಲ್ಲೂ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರ ಬಳಿ ಹಲವು ಪ್ರಸ್ತಾವನೆಗಳನ್ನು ಮುಂದಿಟ್ಟಿದ್ದಾರೆ.

ಹೆದ್ದಾರಿ ಉದ್ಘಾಟನೆ ಬಳಿಕ ಪ್ರಧಾನಿ ಮೋದಿ ಅವರು ಹೆಲಿಕಾಪ್ಟರ್‌ನಲ್ಲಿ ಮೈಸೂರು ವಿಮಾನ ನಿಲ್ದಾಣದತ್ತ ಪ್ರಯಾಣ ಬೆಳೆಸಿದರು. ಆ ವೇಳೆ ಕೇಂದ್ರ ಸಚಿವ ನಿತಿನ್ ಗಡ್ಕರಿ, ಸಂಸದ ಪ್ರತಾಪ್ ಸಿಂಹ, ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಕಾರ್ಯದರ್ಶಿ ಅಲ್ಕಾ ಉಪಾಧ್ಯಾಯ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಛೇರ್ಮನ್ ಸಂತೋಷ್ ಕುಮಾರ್ ಯಾದವ್ ಮತ್ತಿತರರು ಕಾರಿನಲ್ಲಿ ಶಿವಳ್ಳಿ ಹೋಟೆಲ್‌ಗೆ ತೆರಳಿ, ಲಘು ಉಪಾಹಾರ ಸೇವಿಸಿದರು.

ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಸಂಸದ ಪ್ರತಾಪ್ ಸಿಂಹ, ಶಿವಳ್ಳಿ ಹೋಟೆಲ್‌ನಲ್ಲಿ ಸಚಿವರಾದ ಗಡ್ಕರಿ ಅವರಿಗೆ ತುಂಬಾ ಇಷ್ಟವಾದ ಕೇಸರಿಬಾತ್ ಜೊತೆಗೆ ಮೈಸೂರು ಮಸಾಲೆ ದೋಸೆ ಹಾಗೂ ಪೊಂಗಲ್ ಸವಿದೆವು. ಆ ವೇಳೆ ಮೈಸೂರು–ಕುಶಾಲನಗರ ಹೆದ್ದಾರಿ ಕಾಮಗಾರಿ ಕ್ಷಿಪ್ರಗತಿಯಲ್ಲಿ ಆಗಬೇಕು. ಮೈಸೂರು–ನಂಜನಗೂಡು ಹೆದ್ದಾರಿಯನ್ನು 6 ಪಥಗಳಾಗಿ ವಿಸ್ತರಿಸಿ ಅಭಿವೃದ್ಧಿಪಡಿಸಬೇಕು. ಮೈಸೂರು–ಹೆಚ್.ಡಿ.ಕೋಟೆ–ಮಾನಂದವಾಡಿ, ಮೈಸೂರು–ಮಳವಳ್ಳಿ, ಕಿರಂಗೂರು–ಪಾಂಡವಪುರ–ನಾಗಮಂಗಲ ರಸ್ತೆ ಅಭಿವೃದ್ಧಿ ಆಗಬೇಕೆಂದು ಪ್ರಸ್ತಾಪಿಸಿದೆ. ಇದಕ್ಕೂ ಮೊದಲೇ ಹೆದ್ದಾರಿಗೆ ಸಂಬಂಧಿಸಿದ ಯಾವುದೇ ಯೋಜನೆಗಳಿದ್ದರೂ ತಿಳಿಸು, ಅನುಮೋದನೆ ನೀಡೋಣವೆಂದು ಹೇಳಿದ್ದ ಗಡ್ಕರಿಯವರು, ನನ್ನ ಪ್ರಸ್ತಾವನೆಗೆ ಸಕಾರಾತ್ಮಕವಾಗಿ ಸ್ಪಂದಿಸಿದರು ಎಂದರು. ಅದ್ಧೂರಿ ಕಾರ್ಯಕ್ರಮದ ಬಳಿಕ ಕೊಂಚ ರಿಲ್ಯಾಕ್ಸ್ ಆಗಿ ರುಚಿಕರ ಉಪಾಹಾರ ಸೇವಿಸುವ ಸಂದರ್ಭದಲ್ಲೂ ಪ್ರತಾಪ್ ಸಿಂಹ, ತಮ್ಮ ಕ್ಷೇತ್ರದ ಹಲವು ರಸ್ತೆಗಳ ಅಭಿವೃದ್ಧಿ ಪ್ರಸ್ತಾವನೆಯನ್ನು ಸಚಿವರಿಗೆ ಸಲ್ಲಿಸುವ ಮೂಲಕ ತಮ್ಮ ಕಾರ್ಯಬದ್ಧತೆ ಮೆರೆದಿದ್ದಾರೆ. ಇದಕ್ಕೆ ಪೂರಕವಾಗಿ ಸಚಿವರೂ ಸ್ಪಂದಿಸಿರುವುದು ಗಮನಾರ್ಹವಾಗಿದೆ.

ಆರ್‌ಎಸ್‌ಎಸ್ ಕಾರ್ಯಕರ್ತರ ಕಾಲಿಗೆ ನಮಸ್ಕರಿಸಿದ ಪ್ರಧಾನಿ ನರೇಂದ್ರ ಮೋದಿ!





ಧಾರವಾಡ, ಮಾ. 12– ಆರ್‌ಎಸ್‌ಎಸ್ ಕಾರ್ಯಕರ್ತರ ಕಾಲಿಗೆ ಪ್ರಧಾನಿ ಮೋದಿ ತಲೆಬಾಗಿ ನಮಸ್ಕರಿಸಿದ ಅಪರೂಪದ ಘಟನೆ ಧಾರವಾಡದಲ್ಲಿ ಭಾನುವಾರ ನಡೆದಿದೆ.

ಇಲ್ಲಿನ ಐಐಟಿ ಕ್ಯಾಂಪಸ್ ಉದ್ಘಾಟನಾ ವೇದಿಕೆಗೆ ತೆರಳುವಾಗ ಹುಬ್ಬಳ್ಳಿ ಮೂಲದ ಆರ್‌ಎಸ್‌ಎಸ್ ಕಾರ್ಯಕರ್ತ ಚೇತನ್ ರಾವ್ ಹಾಗೂ ಮತ್ತೋರ್ವ ಕಾರ್ಯಕರ್ತನ ಕಾಲಿಗೆ ಮೋದಿ ನಮಸ್ಕರಿಸಿದ್ದಾರೆ. ಪ್ರಧಾನಿಯವರು ವೇದಿಕೆಗೆ ತೆರಳುವ ಮುನ್ನ ಅವರನ್ನು ಕೆಲವು ಪ್ರತಿನಿಧಿಗಳಿಂದ ಸ್ವಾಗತಿಸಲು ವ್ಯವಸ್ಥೆ ಮಾಡಲಾಗಿತ್ತು. ಆಗ ಆರ್‌ಎಸ್‌ಎಸ್ ಕಾರ್ಯಕರ್ತರು ಮೋದಿಯವರ ಕಾಲಿಗೆ ನಮಸ್ಕರಿಸಲು ಮುಂದಾಗಿದ್ದಾರೆ. ಆದರೆ, ಮೋದಿಯವರು ಈ ವೇಳೆ ಕಾರ್ಯಕರ್ತರ ಕಾಲಿಗೆ ಪ್ರತಿ ನಮಸ್ಕಾರ ಮಾಡಿದ್ದಾರೆ. ಕಾರ್ಯಕರ್ತರು ನಾಯಕರ ಕಾಲಿಗೆ ನಮಸ್ಕರಿಸುವುದು ಸರ್ವೇ ಸಾಮಾನ್ಯ. ಆದರೆ, ದೇಶದ ಪ್ರಧಾನಿಯಾಗಿರುವ ಮೋದಿಯವರೇ ಕಾರ್ಯಕರ್ತರ ಕಾಲಿಗೆ ನಮಸ್ಕರಿಸಿರುವುದು ಅಚ್ಚರಿ ಮೂಡಿಸಿದೆ. ಪ್ರಧಾನಿಯವರ ಈ ನಡವಳಿಕೆಗೆ ವ್ಯಾಪಕವಾಗಿ ಮೆಚ್ಚುಗೆ ವ್ಯಕ್ತವಾಗಿದೆ.

ದಶಪಥ ಎಕ್ಸ್‌ಪ್ರೆಸ್ ವೇ ಕೆಲವರ ಪಾಲಿಗೆ ದೊಡ್ಡ ಎಟಿಎಂ

ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಟ್ವೀಟ್



ಬೆಂಗಳೂರು, ಮಾ.12– ಇಂದು (ಭಾನುವಾರ) ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಬಹುನಿರೀಕ್ಷಿತ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಅನ್ನು ಲೋಕಾರ್ಪಣೆ ಮಾಡಿದ್ದಾರೆ. ಆದರೆ, ಈ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಟ್ವೀಟ್ ಮಾಡಿರುವ ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ದಶಪಥ ಎಕ್ಸ್‌ಪ್ರೆಸ್ ವೇ ಕೆಲವರ ಪಾಲಿಗೆ ದೊಡ್ಡ ಎಟಿಎಂ ಆಗಿದೆ ಎಂದು ಟ್ವೀಟ್ ಮಾಡಿದ್ದಾರೆ. ಸರಣಿ ಟ್ವೀಟ್ ಮಾಡಿರುವ ಅವರು, 'ಇದು ಅತ್ಯಂತ ಮುಖ್ಯ ವಿಷಯ. ಬೆಂಗಳೂರು–ಮೈಸೂರು ನಗರಗಳ ನಡುವೆ ನಿರ್ಮಿಸಿರುವ ದಶಪಥ ಹೆದ್ದಾರಿ ಯಾರಿಗೆ ಉಪಯೋಗ? ಹಣ ಮಾಡಲು ಯಾರಿಗೆ ರಹದಾರಿ? ಎನ್ನುವುದು ನನ್ನ ಪ್ರಶ್ನೆ. ರಾಮನಗರ, ಮಂಡ್ಯ ಜಿಲ್ಲೆಗಳ ಜನರಿಗೆ, ಅದರಲ್ಲೂ ಬೆಂಗಳೂರು–ಮೈಸೂರು ನಡುವೆ ಆ ಹೆದ್ದಾರಿ ಉದ್ದಕ್ಕೂ ಜೀವಿಸುತ್ತಿರುವ ಜನರಿಗೆ ಇದರಿಂದ ನಯಾಪೈಸೆ ಉಪಯೋಗ ಇದೆಯಾ? ಇಲ್ಲ ಎಂದು ಹೇಳಿದ್ದಾರೆ.

ಸ್ಥಳೀಯರಿಗೆ ದಶಪಥ ರಸ್ತೆಯಿಂದ ಉಪಯೋಗ ಇದೆಯಾ ಎಂದು ಇನ್ನೂ ಒಳಹೊಕ್ಕು ಲೆಕ್ಕ ಹಾಕಿದರೆ, ಉತ್ತರ ದೊಡ್ಡ ಸೊನ್ನೆ. ಕೇವಲ ಬೆಂಗಳೂರಿನಿಂದ ಮೈಸೂರಿಗೆ ಶರವೇಗದಲ್ಲಿ ನೇರವಾಗಿ ಸಂಚರಿಸುವವರಿಗೆ ಮಾತ್ರ ಲಾಭ. ಹಾಗಾದರೆ, ರಾಮನಗರ, ಚನ್ನಪಟ್ಟಣ, ಮದ್ದೂರು, ಶ್ರೀರಂಗಪಟ್ಟಣದವರಿಗೆ ಉಪಯೋಗ ಇದೆಯಾ? ಎಳ್ಳಷ್ಟೂ ಇಲ್ಲ. ಈ ಸತ್ಯವನ್ನು ನಾವೆಲ್ಲರೂ ಅರಿಯಬೇಕಿದೆ ಎಂದಿದ್ದಾರೆ.

ಕೆಲವರ ಪಾಲಿಗೆ ದೊಡ್ಡ ಎಟಿಎಂ ಆಗಿಬಿಟ್ಟ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೆದ್ದಾರಿಯ ಅಸಲಿ ಅಂಶಗಳನ್ನು ಪಟ್ಟಿ ಮಾಡಿದರೆ ಕನ್ನಡಿಗರಿಗೆ ನಿರಾಶೆ, ನೋವು, ಹತಾಶೆ ಖಂಡಿತಾ ಎಂದು ಅದಕ್ಕೆ ಕಾರಣಗಳನ್ನು ಟ್ವೀಟ್‌ನಲ್ಲಿ ಎಚ್‌ಡಿಕೆ ತಿಳಿಸಿದ್ದಾರೆ.

ಶ್ರೀರಂಗಪಟ್ಟಣ–ಗುಡ್ಡೆಹೊಸೂರು ಚತುಷ್ಪಥ ಹೆದ್ದಾರಿ ವೈಶಿಷ್ಟ್ಯವಿದು



ಮಂಡ್ಯ, ಮಾ.12–ಶ್ರೀರಂಗಪಟ್ಟಣ ಮತ್ತು ಕೊಡಗಿನ ಗುಡ್ಡೆಹೊಸೂರುವರೆಗಿನ 92.3 ಕಿಮೀ. ಉದ್ದದ ಚತುಷ್ಪಥ ಹೆದ್ದಾರಿ ನಿರ್ಮಾಣ ಕಾಮಗಾರಿಗೆ ಪ್ರಧಾನಿ ನರೇಂದ್ರಮೋದಿ ಅವರು ಭಾನುವಾರ ಮಂಡ್ಯದಲ್ಲಿ ಚಾಲನೆ ನೀಡಿದ್ದಾರೆ.

ಈ ಯೋಜನೆಗೆ ಈಗಾಗಲೇ ಟೆಂಡರ್ ಪ್ರಕ್ರಿಯೆಗಳು ನಡೆದಿದ್ದು, ಪ್ಯಾಕೇಜ್‌ಗಳಲ್ಲಿ ಕೈಗೊಳ್ಳಲಾಗುವ ಈ ಯೋಜನೆಗೆ 11 ಕಂಪನಿಗಳು ತಮ್ಮ ಬಿಡ್‌ಗಳನ್ನು ಸಲ್ಲಿಸಿರುವುದಾಗಿ ಹೇಳಲಾಗಿದೆ. ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI)ವು ಶೀಘ್ರದಲ್ಲೇ ಅಂತಿಮ ಟೆಂಡರ್‌ದಾರರನ್ನು ಘೋಷಿಸುವ ನಿರೀಕ್ಷೆಯಿದೆ. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಫೆ.8ರಂದು ರಾಷ್ಟ್ರೀಯ ಹೆದ್ದಾರಿಯ (NH–275) ಮೈಸೂರಿನಿಂದ ಕುಶಾಲನಗರ ಭಾಗಕ್ಕೆ ಅನುದಾನವನ್ನು ಘೋಷಿಸಿದ್ದು, ಪ್ರಥಮ ಹಂತದಲ್ಲಿ ಸುಮಾರು 909.86 ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದಾರೆ. ಈ ಯೋಜನೆಯು ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಯಲ್ಲಿ ಪ್ರಾರಂಭವಾಗಿ ಕುಶಾಲನಗರ ಸಮೀಪದ ಗುಡ್ಡೆಹೊಸೂರು ಬಳಿ ಕೊನೆಗೊಳ್ಳುತ್ತದೆ. ಹೆದ್ದಾರಿ ಪ್ರಾಧಿಕಾರದ ಮೂಲಗಳ ಪ್ರಕಾರ, ಪಶ್ಚಿಮವಾಹಿನಿ ಮತ್ತು ಗುಡ್ಡೆಹೊಸೂರು ನಡುವಿನ 92.3 ಕಿಮೀ ರಸ್ತೆಯನ್ನು ಭಾರತಮಾಲಾ ಪರಿಯೋಜನಾ ಹಂತ–1 ಕಾರ್ಯಕ್ರಮದ ಅಡಿಯಲ್ಲಿ ನಿರ್ಮಿಸಲಾಗುತ್ತಿದ್ದು, ಈ ಮೆಗಾ ಯೋಜನೆಯು 2026 ರಲ್ಲಿ ಪೂರ್ಣಗೊಳ್ಳಬೇಕಿದೆ.

ಕಡಿಮೆಯಾಗಲಿದೆ ಪ್ರಯಾಣದ ಸಮಯ: ಈ ಯೋಜನೆಯು ಪ್ರಸಕ್ತ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಹೆದ್ದಾರಿ (NH-275)ಗೆ ಸಮಾನಾಂತರವಾಗಿ ರೂಪುಗೊಳ್ಳಲಿದ್ದು, ಗುಡ್ಡೆಹೊಸೂರನ್ನು ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಯಲ್ಲಿ 119 ಕಿಮೀ.ಉದ್ದದ ಮೈಸೂರು– ಬೆಂಗಳೂರು ಎಕ್ಸ್‌ಪ್ರೆಸ್‌ವೇಗೆ ಸಂಪರ್ಕ ಕಲ್ಪಿಸುತ್ತದೆ. ಇದು ಈಗಿರುವ ಮಡಿಕೇರಿ–ಬೆಂಗಳೂರು ನಡುವಿನ ಸುಮಾರು 7 ಗಂಟೆಗಳ ಪ್ರಯಾಣದ ಅವಧಿಯನ್ನು ಅರ್ಧದಷ್ಟು ಕಡಿಮೆ ಮಾಡುವ ನಿರೀಕ್ಷೆಯಿದೆ.

ನಾಲ್ಕು ಪ್ಯಾಕೇಜ್‌ಗಳಲ್ಲಿ ಕಾಮಗಾರಿ: ಗುಡ್ಡೆಹೊಸೂರಿನಿಂದ ಕುಶಾಲನಗರ ಬೈಪಾಸ್– ಹಾಸನ–ಪಿರಿಯಾಪಟ್ಟಣ ರಸ್ತೆ ಜಂಕ್ಷನ್‌ವರೆಗೆ (22 ಕಿಮೀ ಮತ್ತು ಅಂದಾಜು ವೆಚ್ಚ ರೂ. 617.14 ಕೋಟಿ)

ಹೆಮ್ಮಿಗೆ ಗ್ರಾಮದ ಹಾಸನ– ಪಿರಿಯಾಪಟ್ಟಣ ರಸ್ತೆ ಜಂಕ್ಷನ್‌ನಿಂದ ರಾಮನಾಥಪುರ –ತೆರಕಣಾಂಬಿ ರಸ್ತೆ ಕೆ.ಆರ್. ನಗರ ಜಂಕ್ಷನ್ (24.1 ಕಿ.ಮೀ ಮತ್ತು ಅಂದಾಜು ವೆಚ್ಚ ರೂ. 589.50 ಕೋಟಿ) ರಾಮನಾಥಪುರ–ತೆರಕಣಾಂಬಿ ರಸ್ತೆಯಿಂದ ಹುಣಸೂರಿನ ಕೆ.ಆರ್.ನಗರ ಜಂಕ್ಷನ್‌ನಿಂದ ಯಲಚಹಳ್ಳಿ ಬಳಿ ಇಲವಾಲ–ಕೆ.ಆರ್. ನಗರ ರಸ್ತೆ ಜಂಕ್ಷನ್ (26.5 ಕಿ.ಮೀ ಮತ್ತು ಅಂದಾಜು ವೆಚ್ಚ ರೂ. 659.48 ಕೋಟಿ)

ಯಲಚಹಳ್ಳಿ ಸಮೀಪದ ಇಲವಾಲ ಕೆ.ಆರ್. ನಗರ ರಸ್ತೆ ಜಂಕ್ಷನ್‌ನಿಂದ ಶ್ರೀರಂಗಪಟ್ಟಣ ಬೈಪಾಸ್ ಪಶ್ಚಿಮವಾಹಿನಿ ಬಳಿ (18.985 ಕಿ.ಮೀ ಅಂದಾಜು ವೆಚ್ಚ 662.83 ಕೋಟಿ ರೂ.)

ಎಕ್ಸ್‌ಪ್ರೆಸ್‌ವೇ ಬೆಂಗಳೂರಿನಿಂದ ಕುಶಾಲನಗರಕ್ಕೆ ಸುಗಮ ಸಂಪರ್ಕ ಮತ್ತು ತಡೆರಹಿತ ಪ್ರಯಾಣವನ್ನು ಒದಗಿಸುತ್ತದೆ. ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಹೆದ್ದಾರಿ 275, ಈಗಾಗಲೇ ಅದರ ಸ್ಯಾಚುರೇಶನ್ ಪಾಯಿಂಟ್ ಅನ್ನು ತಲುಪಿರುವುದರಿಂದ ಅದಕ್ಕೆ ಸಮಾನಾಂತರವಾಗಿ ಹೊಸ ಚತುಷ್ಪಥ ರಸ್ತೆ ನಿರ್ಮಾಣವಾಗುವುದರಿಂದ ಜನರಿಗೆ ಹೆಚ್ಚಿನ ಪ್ರಯೋಜನವಾ ಗಲಿದೆ ಎನ್ನುತ್ತಾರೆ ಪ್ರಾಧಿಕಾರದ ಅಧಿಕಾರಿಗಳು.

ಉದ್ಘಾಟನೆ ಬೆನ್ನಲ್ಲೇ ದಶಪಥ ಹೆದ್ದಾರಿಯಲ್ಲಿ ಕಾರು ಅಪಘಾತ

ಮೂವರಿಗೆ ಗಾಯ




ಮದ್ದೂರು, ಮಾ.12– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದ ಕೆಲವೇ ಗಂಟೆಯಲ್ಲಿ ಭೀಕರ ಅಪಘಾತದಲ್ಲಿ ಕಾರು ಪಲ್ಟಿಯಾಗಿದ್ದು, ಆಶ್ಚರ್ಯಕರ ರೀತಿಯಲ್ಲಿ ಕಾರಿನಲ್ಲಿದ್ದ ಮೂವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.


ಮದ್ದೂರು ಪಟ್ಟಣದ ಶಿಂಷಾ ನದಿ ಸೇತುವೆ ಬಳಿಯ ಫ್ಲೈ ಓವರ್ ರಸ್ತೆಯಲ್ಲಿ ಈ ಘಟನೆ ನಡೆದಿದ್ದು, ಕಾರಿನಲ್ಲಿದ್ದ ಏರ್ ಬ್ಯಾಗ್ ಓಪನ್ ಆಗಿದ್ದರಿಂದ ಮೂವರಿಗೂ ಸಣ್ಣಪುಟ್ಟ ಗಾಯಗಳಾಗಿವೆ. ಕಾರಿನಲ್ಲಿದ್ದವರನ್ನು ಸ್ಥಳೀಯರು ರಕ್ಷಣೆ ಮಾಡಿದ್ದು, ಮದ್ದೂರು ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

ರಸ್ತೆಯಲ್ಲಿ ಬಿದ್ದಿದ್ದ ಚಿನ್ನದ ಸರ ಪಾದಚಾರಿ ಪಾಲು; ದೃಶ್ಯ ಸಿಸಿ ಟಿವಿಯಲ್ಲಿ ಸೆರೆ


ಹಿಂದಿರುಗಿಸುವಂತೆ ಸರ ಕಳೆದುಕೊಂಡ ಮಹಿಳೆ ಮನವಿ, ಪೊಲೀಸ್ ಠಾಣೆಗೆ ದೂರು



ಆಯ ತಪ್ಪಿ ಕೆಳಕ್ಕೆ ಬಿದ್ದ ಮಹಿಳೆ



ವ್ಯಕ್ತಿ ಸರವನ್ನು ತೆಗೆದುಕೊಳ್ಳುತ್ತಿರುವುದು



ಸರದೊಂದಿಗೆ ಹೋಗುತ್ತಿರುವ ವ್ಯಕ್ತಿ


ಮೈಸೂರು, ಮಾ.12(ಆರ್‌ಕೆ)–ಆಯ ತಪ್ಪಿ ಬಿದ್ದ ಮಹಿಳೆಯ ಕೊರಳಿಂದ ಕಳಚಿ ರಸ್ತೆಗೆ ಬಿದ್ದಿದ್ದ ಚಿನ್ನದ ಮಾಂಗಲ್ಯ ಸರವನ್ನು ಪಾದಚಾರಿ ತೆಗೆದುಕೊಂಡು ಹೋದ ದೃಶ್ಯಾವಳಿ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದು, ಈ ಘಟನೆ ಫೆಬ್ರವರಿ 26ರಂದು ಮೈಸೂರಿನ ಜಯಲಕ್ಷ್ಮೀಪುರಂನಲ್ಲಿ ನಡೆದಿದೆ. ಮೈಸೂರಿನ ಜಯಲಕ್ಷ್ಮೀಪುರಂ 3ನೇ ಬ್ಲಾಕ್, 6ನೇ ಮೇನ್ ನಿವಾಸಿ ಡಾ. ನಾಗರಾಜ್ ಅವರ ಪತ್ನಿ ಡಾ. ಶೋಭಾ ಹೆಬ್ಬಾರ್ ಚಿನ್ನದ ಮಾಂಗಲ್ಯ ಸರ ಕಳೆದುಕೊಂಡವರಾಗಿದ್ದು, ತೆಗೆದುಕೊಂಡು ಹೋಗಿರುವ ತಮ್ಮ ಮಾಂಗಲ್ಯ ಸರವನ್ನು ಹಿಂದಿರುಗಿಸುವಂತೆ ಮನವಿ ಮಾಡಿರುವ ವೈದ್ಯೆ, ಈ ಬಗ್ಗೆ ಸಿಸಿ ಟಿವಿ ದೃಶ್ಯಾವಳಿಗಳೊಂದಿಗೆ ಜಯಲಕ್ಷ್ಮೀಪುರಂ ಠಾಣೆಗೆ ದೂರು ನೀಡಿದ್ದಾರೆ.

ಘಟನೆಯ ವಿವರ: ಫೆಬ್ರವರಿ 26ರಂದು ಬೆಳಗ್ಗೆ 8.25 ಗಂಟೆ ವೇಳೆ ಮನೆ ಮುಂದಿನ ರಸ್ತೆ ಬದಿಯ ಗಿಡಗಳಿಗೆ ನೀರು ಹಾಕುತ್ತಿದ್ದ ಡಾ. ಶೋಭಾ ಅವರು ಆಯತಪ್ಪಿ ನೆಲಕ್ಕುರುಳಿದ್ದರು. ಆ ವೇಳೆ ಅವರ ಕೊರಳಿನಲ್ಲಿದ್ದ 25 ಗ್ರಾಂ ತೂಕದ ಮಾಂಗಲ್ಯ ಸರ ಕಳಚಿ ರಸ್ತೆಗೆ ಬಿದ್ದಿತ್ತು. ಆ ವೇಳೆ ಚಿನ್ನದ ಸರ ಕಳಚಿರುವುದು ಡಾ. ಶೋಭಾ ಅವರ ಗಮನಕ್ಕೆ ಬಂದಿರಲಿಲ್ಲ. ಅವರು ತಡವರಿಸಿಕೊಂಡು ಮನೆ ಒಳಗೆ ಹೋಗುತ್ತಿದ್ದಂತೆಯೇ ಬೆಳಗ್ಗೆ 8.50 ಗಂಟೆ ವೇಳೆ ಸುಮಾರು 35 ರಿಂದ 40 ವರ್ಷದ ವ್ಯಕ್ತಿ ನಡೆದುಕೊಂಡು ಬಂದು ರಸ್ತೆ ಬದಿ ಬಿದ್ದಿದ್ದ ಚಿನ್ನದ ಸರವನ್ನು ಅತ್ತಿಂದಿತ್ತ ನೋಡಿ, ಯಾರೂ ಕಾಣದ ಕಾರಣ ನೆಲದಿಂದ ತೆಗೆದುಕೊಂಡು ಜೇಬಿಗಿರಿಸಿಕೊಂಡು ಹೋಗಿದ್ದ. ಈ ಎಲ್ಲಾ ದೃಶ್ಯಾವಳಿಗಳು ಪಕ್ಕದ ಮನೆಯಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದವು.

ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಡಾ. ಶೋಭಾ ಅವರು, ನಾನು ಕೆಳಕ್ಕೆ ಬಿದ್ದಾಗ ಕೊರಳಿನ ಚಿನ್ನದ ಸರ ಕಳಚಿ ಬಿದ್ದಿರುವುದು ಆ ಕ್ಷಣ ಗೊತ್ತಾಗಲಿಲ್ಲ. ಮನೆ ಒಳಗೆ ಹೋದ ಸ್ವಲ್ಪ ಹೊತ್ತಿನಲ್ಲಿ ಸರ ನಾಪತ್ತೆಯಾಗಿರುವುದು ತಿಳಿಯಿತು. ನಂತರ ನಾನು ಪಕ್ಕದ ಮನೆಯವರನ್ನು ಕೇಳಿಕೊಂಡು ಸಿಸಿ ಟಿವಿ ಕ್ಯಾಮರಾ ಫುಟೇಜ್ ಪಡೆದುಕೊಂಡಾಗ ವ್ಯಕ್ತಿ ಚಿನ್ನದ ಸರ ತೆಗೆದುಕೊಂಡು ಹೋಗಿರುವುದು ದೃಢಪಟ್ಟಿತು ಎಂದು ತಿಳಿಸಿದರು.

ಅದನ್ನು ಹಿಂತಿರುಗಿಸಬಹುದೆಂದು ಆ ವ್ಯಕ್ತಿಗಾಗಿ ಕೆಲ ದಿನ ಕಾದಿದ್ದೆ. ಆತ ಬಾರದ ಕಾರಣ ಮಾರ್ಚ್ 8ರಂದು ನಾನು ಜಯಲಕ್ಷ್ಮೀಪುರಂ ಠಾಣೆಗೆ ತೆರಳಿ ದೂರು ನೀಡಿದೆ. ಈಗಲೂ ಆತ ಪತ್ತೆಯಾದರೆ ನನ್ನ ಚಿನ್ನದ ಮಾಂಗಲ್ಯ ಸರವನ್ನು ಕೊಡಿಸಿಕೊಡುವಂತೆ ಮನವಿ ಮಾಡಿದ್ದೇನೆ ಎಂದ ಡಾ. ಶೋಭಾ ಮೊಬೈಲ್ ಸಂಖ್ಯೆ 94492–74083 ಅಥವಾ 96325–48150ಗಳ ಮೂಲಕ ಸಂಪರ್ಕಿಸಬಹುದೆಂದು ತಿಳಿಸಿದ್ದಾರೆ.

ನಿಧನ



ಕೆಂಪಯ್ಯ

ಮೈಸೂರು, ಮಾ.12–ಮೈಸೂರಿನ ಯರಗನಹಳ್ಳಿ ನಿವಾಸಿ ಕೆಂಪಯ್ಯ (80) ಭಾನುವಾರ ನಿಧನರಾದರು. ಮೃತರು ಇಬ್ಬರು ಪುತ್ರರು ಮತ್ತು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಯರಗನಹಳ್ಳಿ ರುದ್ರ ಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಾಮಾಜಿಕ ಬಹಿಷ್ಕಾರದ ವಿರುದ್ಧ ಕಠಿಣ ಕ್ರಮ ಕೈಗೊಳ್ಳದೇ ನಿರ್ಲಕ್ಷಿಸಲಾಗುತ್ತಿದೆ

ಮೈಸೂರು, ಮಾ.12(ಎಂಟಿವೈ)–ರಾಜ್ಯದ ಹಲವೆಡೆ ಸಾಮಾಜಿಕ ಬಹಿಷ್ಕಾರದಂತಹ ಗಂಭೀರ ಪ್ರಕರಣಗಳು ಎಗ್ಗಿಲ್ಲದೆ ನಡೆಯುತ್ತಿದ್ದರೂ ಕಠಿಣ ಕ್ರಮ ಕೈಗೊಳ್ಳದೇ ನಿರ್ಲಕ್ಷಿಸಲಾಗುತ್ತಿದೆ ಎಂದು ವಿದ್ಯಾವರ್ಧಕ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಕೆ.ಎಲ್.ಚಂದ್ರಶೇಖರ ಐಜೂರು ವಿಷಾದಿಸಿದ್ದಾರೆ.

ಮೈಸೂರಿನ ಗೋಕುಲಂನಲ್ಲಿನ ಕಾಂಟೂರು ರಸ್ತೆಯ ಶ್ಯಾಗಲೆ ಹೌಸ್‌ನಲ್ಲಿ ನಾಗರಿಕ ಸ್ವಾತಂತ್ರ್ಯಕ್ಕಾಗಿ ಜನರ ಒಕ್ಕೂಟ (ಪಿಯುಸಿಎಲ್) ಮತ್ತು ಮಾನವ ಮಂಟಪ, ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ಒಕ್ಕೂಟ ಹಾಗೂ ಶ್ಯಾಗಲೆ ಶಿವರುದ್ರಮ್ಮ ಟ್ರಸ್ಟ್‌ನಿಂದ ಆಯೋಜಿಸಿದ್ದ ಬಹಿಷ್ಕಾರಕ್ಕೊಳಗಾದ ನೊಂದ ದಂಪತಿಗೆ ನೈತಿಕ ಬೆಂಬಲ ಕಾರ್ಯಕ್ರಮದಲ್ಲಿ 'ಸಾಮಾಜಿಕ ಬಹಿಷ್ಕಾರ' ಕುರಿತಂತೆ ಮಾತನಾಡಿದ ಅವರು, ಸಾಮಾಜಿಕ ಬಹಿಷ್ಕಾರದ ಪ್ರಕರಣಗಳನ್ನು ತಾಲೂಕು ಮತ್ತು ಜಿಲ್ಲಾಡಳಿತ ಸಂಧಾನ ಸಭೆ ಮೂಲಕ ಇತ್ಯರ್ಥ ಮಾಡುತ್ತಿವೆ. ಕೆಲವು ಪ್ರಕರಣಗಳಲ್ಲಿ ಇಡೀ ಗ್ರಾಮವೇ ದುಷ್ಕೃತ್ಯ ಎಸಗಿರುವುದರಿಂದ ಕಾನೂನು ಕ್ರಮ ತೆಗೆದುಕೊಳ್ಳುವುದು ಕಠಿಣವಾಗಬಹುದು. ಇಂತಹ ಪ್ರಕರಣಗಳಲ್ಲಿ ಕಾನೂನಿನ ವ್ಯವಸ್ಥೆಯ ಅಸಹಾಯಕತೆ ಎದ್ದು ಕಾಣುತ್ತದೆ. ನ್ಯಾಯದಾನದ ವ್ಯವಸ್ಥೆಯಲ್ಲಿ ವಿಳಂಬ ಧೋರಣೆ, ಬದಲಾಗುವ ಅಭಿಯೋಜಕರು ಮತ್ತು ದೂರುಗಳಿಗೆ ಪ್ರತಿಯಾಗಿ ದಾಖಲಾಗುವ ಸುಳ್ಳು ದೂರುಗಳು ಈಗಾಗಲೇ ನೊಂದಿರುವ ಬಲಿಪಶುಗಳನ್ನು ಅದೇ ಸ್ಥಾನದಲ್ಲಿ ಮುಂದುವರೆಯುವಂತೆ ಮಾಡುತ್ತದೆ ಎಂದರು.

ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನದಂತಹ ಜಿಲ್ಲೆಗಳು ಮಠಗಳ ಹಾಗೂ ಮೇಲ್ವರ್ಗದ ಶ್ರೇಷ್ಠತೆ ಸಾರುವವರ ಹಿಡಿತದಲ್ಲಿ ಸಿಲುಕಿವೆ. ಇದರಿಂದ ಅಂತರ್ಜಾತಿ ವಿವಾಹ, ಜಾತಿಗಳ ನಡುವಿನ ಸಂಬಂಧಗಳ ನಿರ್ಧಾರಗಳಲ್ಲಿ ತನ್ನದೇ ಆದ ಪಾತ್ರವಹಿಸುತ್ತಿವೆ. ಅಲ್ಲದೇ, ಶೋಷಕ ಧೋರಣೆಯ ಬಲಾಢ್ಯ ಜಾತಿಗಳ ಜನರು ವೈಯಕ್ತಿಕವಾಗಿ ಹಲ್ಲೆ ಮಾಡಿ ಶೋಷಣೆ ಮಾಡುವ ಮನಸ್ಥಿತಿ ಅನುಸರಿಸುತ್ತಿದ್ದಾರೆ. ಈ ಮನಸ್ಥಿತಿ ಇದೀಗ ಉಳಿದ ಸಣ್ಣ ಜಾತಿಗಳಲ್ಲೂ ಕಂಡು ಬರುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ನಗರ ಪ್ರದೇಶದಲ್ಲಿ ಧಾವಂತ ಮತ್ತು ವ್ಯಾವಹಾರಿಕ ಜೀವನವು ಅಸ್ಪೃಶ್ಯರು ಮತ್ತು ಇತರರನ್ನು ಒಟ್ಟಿಗೆ ಬದುಕುವಂತೆ ಮಾಡುತ್ತಿದೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಅಸ್ಪೃಶ್ಯರ ಮನೆ, ಮೇಲ್ವರ್ಗದವರ ಮನೆ ನಡುವೆ ಇರುವುದಿಲ್ಲ. ಚಲನೆಯಿಲ್ಲದ ಜಾತಿ ವ್ಯವಸ್ಥೆ ಗ್ರಾಮಾಂತರ ಪ್ರದೇಶದಲ್ಲಿ ಜೀವಂತವಾಗಿದೆ. ಸಾಮಾಜಿಕ ಬಹಿಷ್ಕಾರದ ರೂಪದಲ್ಲಿ ಹೊರಬೀಳುತ್ತಿದೆ. ಕಾನೂನಿನಲ್ಲಿ ಬದಲಾವಣೆ ಮತ್ತು ಸಾಮಾಜಿಕ ಜಾಗೃತಿಯಿಂದ ಇಂತಹ ಅಮಾನವೀಯ ಕೃತ್ಯಗಳನ್ನು ತಡೆಗಟ್ಟಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಪಿಯುಸಿಎಲ್ ಅಧ್ಯಕ್ಷ ಡಾ.ಕೆ ಕಾಳಚನ್ನೇಗೌಡ ಮಾತನಾಡಿ, ಬ್ರಾಹ್ಮಣ್ಯವು ಬದುಕಿನ ಎಲ್ಲ ಸ್ತರಗಳಲ್ಲೂ ಸಮಸ್ಯೆಯನ್ನು ಹುಟ್ಟುಹಾಕುತ್ತಿದೆ. ಒಬ್ಬ ವ್ಯಕ್ತಿ ವೈದ್ಯರು, ಎಂಜಿನಿಯರ್ ಅಥವಾ ಐಎಎಸ್ ಅಧಿಕಾರಿಯಾಗಿದ್ದರೂ ತನ್ನ ಮನೆಯಲ್ಲಿ ಹೇರುವ ಜಾತಿ ಆಧಾರಿತ ಒತ್ತಡಗಳನ್ನು ಎದುರಿಸಲು ಹಿಂದೇಟು ಹಾಕುವ ಪರಿಸ್ಥಿತಿ ನಿರ್ಮಿಸುತ್ತದೆ. ಈ ಸಮಸ್ಯೆ ಇಂದು ಸಮುದಾಯವನ್ನೇ ಪೂರ್ಣ ಪ್ರಮಾಣದಲ್ಲಿ ಆವರಿಸಿದೆ. ಕುಣಿಗಲ್ಲಿಯಲ್ಲಿ ಅಂತರಜಾತಿ ವಿವಾಹವಾದವರಿಗೆ 6 ಲಕ್ಷ ದಂಡ ವಿಧಿಸಿ, ಸಾಮಾಜಿಕ ಬಹಿಷ್ಕಾರ ಹಾಕಿರುವ ಕ್ರಮ ನೂತನ ಉದಾಹರಣೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಅಂತರಜಾತಿ ವಿವಾಹವಾಗಿ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗಿ ದಂಡ ಪಾವತಿಸಿರುವ ದಂಪತಿಗಳು ತಾವು ಅನುಭವಿಸಿದ ಬಹಿಷ್ಕಾರದ ನೋವನ್ನು ವಿವರಿಸಿದರು.

ಈ ಸಂದರ್ಭದಲ್ಲಿ ಪಿಯುಸಿಎಲ್ ಉಪಾಧ್ಯಕ್ಷ ಕಮಲ್ ಗೋಪಿನಾಥ್, ಪ್ರಧಾನ ಕಾರ್ಯದರ್ಶಿ ವಿ.ಪುರುಷೋತ್ತಮ, ಸಹ ಕಾರ್ಯದರ್ಶಿ ಪ್ರೊ. ಕುಮಾರಸ್ವಾಮಿ ಕೂಡ್ಲಾಪುರ, ಖಜಾಂಚಿ ಡಾ.ಇ.ರತಿರಾವ್, ಮಂಡ್ಯ ಜಿಲ್ಲಾ ದಲಿತ ಹಕ್ಕುಗಳ ಸಮಿತಿ ಅಧ್ಯಕ್ಷ ಕೃಷ್ಣ, ಮಾನವ ಮಂಟಪದ ಧನಂಜಯ, ಒಕ್ಕೂಟದ ಸಬಿಹಾ ಭೂಮಿಗೌಡ, ನಾ.ದಿವಾಕರ, ಪಂಡಿತಾರಾಧ್ಯ, ವಿ.ಎನ್.ಲಕ್ಷ್ಮಿನಾರಾಯಣ, ಡಾ.ರಂಗಸ್ವಾಮಿ, ಅಂಬೇಡ್ಕರ್ ಅಧ್ಯಯನ ಕೇಂದ್ರದ ಅತಿಥಿ ಉಪನ್ಯಾಸಕಿ ಡಾ.ಪದ್ಮಶ್ರೀ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ


13.3.2023 ಸೋಮವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ, 05.03.2023ರಿಂದ 17.03.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಅನುರಾಧ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ಜೀವನ್ ಜೋತ್ ವೆಲ್ಫೇರ್ ಫೆಡರೇಷನ್, ವಡೋದರ (ಗುಜರಾತ್) :** ಕ್ರಾಫ್ಟ್ ಬಜಾರ್, ಕರಕುಶಲ ವಸ್ತುಪ್ರದರ್ಶನ ಮತ್ತು ಮಾರಾಟ ಮೇಳ, ಸ್ಥಳ: ಜೆಎಸ್‌ಎಸ್ ಮೈಸೂರ್ ಹರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10 ರಿಂದ ರಾತ್ರಿ 9ರವರೆಗೆ.

■ **ಸಹರಾ ಆರ್ಟ್ ಅಂಡ್ ಕ್ರಾಫ್ಟ್ ಶಾಪಿಂಗ್ ಫೆಸ್ಟಿವಲ್ :** ಹ್ಯಾಂಡಿಕ್ರಾಫ್ಟ್ ಮತ್ತು ಹ್ಯಾಂಡ್‌ಲೂಮ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಮೈದಾನ, ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗ, ಬೆಳಗ್ಗೆ 10.30 ರಿಂದ ರಾತ್ರಿ 9.30 ರವರೆಗೆ.

■ **ಜೆಎಸ್‌ಎಸ್ ಆಸ್ಪತ್ರೆ :** ಕೇಂದ್ರ ಸರ್ಕಾರದ ಆರೋಗ್ಯ ಯೋಜನೆ (ಸಿಜಿಎಚ್‌ಎಸ್)ಗೆ ಚಾಲನೆ ಮತ್ತು ಕೌಂಟರ್ ಉದ್ಘಾಟನೆ, ಮುಖ್ಯ ಅತಿಥಿಗಳು: ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷ ಎಸ್.ಪಿ. ಷಡಕ್ಷರಸ್ವಾಮಿ, ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತ ವಿನಿತ್‌ಕುಮಾರ್, ನಿವೃತ್ತ ಕೇಂದ್ರ ಸರ್ಕಾರದ ನೌಕರರ ಸಂಘದ ಕಾರ್ಯದರ್ಶಿ ಪಿ.ಎಂ. ಪರಮೇಶ್ವರಯ್ಯ, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಆವರಣ, ಮೊದಲ ಮಹಡಿ, ಬೆಳಗ್ಗೆ 11 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ – ಡಾ. ಟಿ.ಎನ್. ವಾಸುದೇವಮೂರ್ತಿ, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ನೃತ್ಯ ಶಿಲ್ಪ ಯಾತ್ರೆ: ಲೇಖನ ಮತ್ತು ಪ್ರಸ್ತುತಿ– ಡಾ.ಬಿ.ಎನ್. ಮನೋರಮ, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಅಮೃತಾ ನಿತಿನ್ ಶಾಸ್ತ್ರಿ, ಕೆ.ಪಿ. ರೇವತಿ, ಪಿ.ಸುರಭೀ, ವ್ಯಾಖ್ಯಾನ– ಮೊರಬದ ಮಲ್ಲಿಕಾರ್ಜುನ, 7.25 ಭಾವಗೀತೆ: ಪಂಚಮ್ ಹಳಿಬಂಡಿ, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ) ಪ್ರೊ.ಎಸ್.ವಿ. ರಂಗಣ್ಣನವರ ಬದುಕು ಬರಹ ಕುರಿತ ವಿಚಾರ ಸಂಕಿರಣದಲ್ಲಿ ಡಾ. ಸಿ.ಪಿ. ಕೃಷ್ಣಕುಮಾರ್ (CPK) ಅವರು ಮಾಡಿದ್ದ ಭಾಷಣದಿಂದ ಆಯ್ದ ಭಾಗಗಳು, 10.00 ಲಯ ಸಂಭ್ರಮ– ಕಾವ್ಯ ಗಾಯನದಲ್ಲಿ ಲಯ ವಾದ್ಯಗಳ ಬಳಕೆಯ ಅವಕಾಶ– ಕೃಷ್ಣಗಿರಿ ರಾಮಚಂದ್ರ, ಪ್ರಸ್ತುತಿ– ಹೆಚ್.ಎಲ್.ಶಿವಶಂಕರಸ್ವಾಮಿ.

ಮಧ್ಯಾಹ್ನ: 12.30 ದೇವರನಾಮ, 12.45 ನಮ್ಮ ಆರೋಗ್ಯ 'ಗ್ಲಾಕೋಮಾ' ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಡಾ.ಎಸ್.ಬಾಲಸುಬ್ರಹ್ಮಣ್ಯ ಅವರೊಂದಿಗೆ ಮಾತುಕತೆ, 1.20 ಭಾವಗೀತೆ– ಇಂದ್ರಾಣಿ ಅನಂತ ರಾಂ, 3.00 ಎ.ಎಸ್.ಪದ್ಮ– ವೀಣಾವಾದನ.

ಸಂಜೆ: 4.00 ಮಹಿಳಾರಂಗ 'ಚರ್ಚೆ', ವಿಷಯ– ಓದುವ ಸುಖ ಏಕೆ ಬೇಕು. ಭಾಗವಹಿಸುವವರು ಬಿ.ಆರ್. ನಾಗರತ್ನ, ಪೂರ್ಣಿಮಾ ಕಾಸರಗೋಡು, ಪಾರ್ವತಿ ವಟ್ಟಂ, ರೂಪಶ್ರೀ.

ರಾತ್ರಿ: 9.15 ಸೆಲ್ಫಿ ತಗೋಳೋಣ ಬನ್ನಿ: ವಿನೋದ ಭಾಷಣ– ಪ್ರವೀಣ್ ಕುಮಾರ್ ಮಾವಿನಕಾಡು, 9.34 ಹಳ್ಳಿ ಹಾಡು: ಯರಗನಹಳ್ಳಿ ಮತ್ತು ಸಣ್ಣಮ್ಮ ಮತ್ತು ಸಂಗಡಿಗರು, ಪ್ರಸ್ತುತಿ– ಅಬ್ದುಲ್ ರಶೀದ್, 10.30 ಸವಿನೆನಪು.

■ **ಶ್ರೀ ನಟರಾಜ ಪ್ರತಿಷ್ಠಾನ, ಮೈಸೂರು ಶರಣ ಮಂಡಳಿ :** ಶ್ರೇಷ್ಠ ಚಿಂತಕ ಪ್ರೊ. ಮಲೆಯೂರು ಗುರುಸ್ವಾಮಿ, ಸಜ್ಜನ ರಾಜಕಾರಣಿ ಆರ್. ಧ್ರುವನಾರಾಯಣ ಅವರುಗಳಿಗೆ ಶ್ರದ್ಧಾಂಜಲಿ ನುಡಿ ನಮನ, ದಿವ್ಯ ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಚಿದಾನಂದ ಮಹಾಸ್ವಾಮಿಗಳು, ಪುಷ್ಪಾರ್ಚನೆ: ವಿಧಾನಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮೈಸೂರು ಶರಣ ಮಂಡಳಿ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ, ಕಾಂಗ್ರೆಸ್ ಮುಖಂಡ ಹೆಚ್.ಎಂ. ಗಣೇಶ್‌ಪ್ರಸಾದ್, ಸ್ಥಳ: ನಟರಾಜ ಸಭಾ ಭವನ, ಬೆಳಗ್ಗೆ 11 ಗಂಟೆಗೆ.



ಪ್ರಧಾನಿ ಮೋದಿ ಅವರಿಗೆ ಸಿಎಂ ಬೊಮ್ಮಾಯಿ, ಸಚಿವ ಎಸ್.ಟಿ.ಸೋಮಶೇಖರ್ ಶಾಲು ಹೊದಿಸಿ ಸನ್ಮಾನಿಸಿದರು.



ಸಂಸದೆ ಸುಮಲತಾ ಮಂಡ್ಯದ ಆರ್ಗಾನಿಕ್ ಬೆಲ್ಲವನ್ನು ಪ್ರಧಾನಿಗೆ ನೀಡಿದರು.



ಮೈಸೂರು ವಿಮಾನ ನಿಲ್ದಾಣದಲ್ಲಿ ಪ್ರಧಾನಿ ಅವರನ್ನು ಶಾಸಕರಾದ ಎಸ್.ಎ.ರಾಮದಾಸ್ ಹಾಗೂ ನಾಗೇಂದ್ರ ಸ್ವಾಗತಿಸುತ್ತಿರುವುದು

ಕಾಂಗ್ರೆಸ್ ಬಡವರ ಬಗ್ಗೆ ಸಂವೇದನೆ ತೋರಿಲ್ಲ... ಬಡವರ ಹಣ ಹೇಗೆ ಲೂಟಿ ಮಾಡಬೇಕೆಂಬುದೇ ಅವರ ತಲೆಯಲ್ಲಿತ್ತು

ಕಾಂಗ್ರೆಸ್ ವಿರುದ್ಧ ಪ್ರಧಾನಿ ಮೋದಿ ವಾಗ್ದಾಳಿ





ಮಂಡ್ಯ, ಮಾ.12(ಮೋಹನ್‌ರಾಜ್)– 2014ರ ಹಿಂದೆ ದೇಶವನ್ನು ಆಳಿದ ಕಾಂಗ್ರೆಸ್ ಸರ್ಕಾರ ಬಡವರ ಬಗ್ಗೆ ಯಾವ ರೀತಿಯೂ ಸಂವೇದನೆ ತೋರಿಲ್ಲ. ಬಡವರ ದುಃಖ, ನೋವುಗಳಿಗೆ ಸ್ಪಂದಿಸಿಲ್ಲ. ಬಡವರ ಬಗ್ಗೆ ಅವರಿಗೆ ಅರಿವು ಸಹ ಇರಲಿಲ್ಲ. ಬಡವರ ಹಣವನ್ನು ಹೇಗೆ ಲೂಟಿ ಮಾಡಬೇಕೆಂಬುದಷ್ಟೇ ಅವರ ತಲೆಯಲ್ಲಿತ್ತು ಎಂದು ಪ್ರಧಾನಿ ನರೇಂದ್ರ ಮೋದಿ ಕಿಡಿಕಾರಿದರು.

ಭಾನುವಾರ ಮಂಡ್ಯ ತಾಲೂಕಿನ ಹನಕೆರೆ ಬಳಿ ಬೆಂಗಳೂರು–ಮೈಸೂರು ದಶಪಥ ಎಕ್ಸ್‌ಪ್ರೆಸ್ ವೇ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಆದರೆ 2014ರ ಬಳಿಕ ದೇಶದಲ್ಲಿ ಅಧಿಕಾರಕ್ಕೆ ಬಂದ ನಮ್ಮ ಸರ್ಕಾರ ಬಡವರ ಪರ ನಿಂತಿದೆ. ಬಡವರಿಗೆ ಬೇಕಾದ ಅಗತ್ಯ ಸೇವೆಗಳನ್ನು ಮಾಡುತ್ತಿದೆ. ನೀವು ನಮಗೆ ಕೊಟ್ಟ ಮತಕ್ಕೆ ನ್ಯಾಯವನ್ನು ಒದಗಿಸುತ್ತಿರುವುದು ಬಿಜೆಪಿ ಸರ್ಕಾರ ಮಾತ್ರ. ದೇಶದಲ್ಲಿ ಬಡವರಿಗೆ ಸ್ವಂತ ಮನೆ, ಕುಡಿಯುವ ನೀರು, ಉಜ್ವಲ ಗ್ಯಾಸ್, ವಿದ್ಯುತ್, ಆಸ್ಪತ್ರೆ ಸೇರಿದಂತೆ ಅಗತ್ಯಕ್ಕೆ ಬೇಕಾದ ಮೂಲ ಸೌಕರ್ಯವನ್ನು ಕಲ್ಪಿಸಿ ಕೊಟ್ಟಿದೆ. ಇನ್ನು ಬೇಕಾದ ಎಲ್ಲಾ ಸೌಲಭ್ಯಗಳನ್ನು ಸರ್ಕಾರ ಒದಗಿಸಲು ಸಿದ್ಧವಿದೆ ಎಂದು ಘೋಷಿಸಿದರು. ಕಿತ್ತು ತಿನ್ನುವ ಬಡತನದಿಂದ ಕಂಗೆಟ್ಟಿದ್ದ ರಾಷ್ಟ್ರದ ಅದೆಷ್ಟೋ ಕುಟುಂಬಗಳಿಗೆ ಕಳೆದ 9 ವರ್ಷದಲ್ಲಿ ಬಿಜೆಪಿ ಸರ್ಕಾರ ಜೀವನವನ್ನು ರೂಪಿಸಿ ಕೊಟ್ಟಿದೆ. ಹೊಸ ಹೊಸ ಯೋಜನೆಗಳನ್ನು ಬಡವರ ಮನೆ ಮನೆಗೆ ತಲುಪಿಸಿದೆ. ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಎಂದರೆ ಅದು ನಮ್ಮ ಸರ್ಕಾರದಿಂದ ಮಾತ್ರ ಸಾಧ್ಯ. 9 ಕೋಟಿಗೂ ಅಧಿಕ ಬಡವರಿಗೆ ಮನೆ ಕಟ್ಟಿಸಿ ಕೊಟ್ಟ ಕೀರ್ತಿ ಬಿಜೆಪಿಗೆ ಸಲ್ಲಬೇಕು ಎಂದರು.

ಕೃಷಿ ಕ್ಷೇತ್ರಕ್ಕೂ ನೂರಾರು ಯೋಜನೆ: ಕೃಷಿ ಕ್ಷೇತ್ರಕ್ಕೂ ಆದ್ಯತೆ ನೀಡಿರುವ ಡಬಲ್ ಇಂಜಿನ್ ಸರ್ಕಾರ, ರಾಜ್ಯದಲ್ಲಿ ಜಲಜೀವನ್ ಯೋಜನೆಯಡಿ 40 ಲಕ್ಷ ಕುಟುಂಬಕ್ಕೆ ನೀರಿನ ಸೌಲಭ್ಯ ಒದಗಿಸಿದೆ. ಭದ್ರ ಮೇಲ್ದಂಡೆ ಯೋಜನೆಯಡಿ 5300 ಕೋಟಿ ವೆಚ್ಚದಲ್ಲಿ ನೀರಾವರಿ ಸಮಸ್ಯೆಗೆ ಪರಿಹಾರ ಒದಗಿಸಿದೆ. ರೈತರ ಸಣ್ಣ–ಸಣ್ಣ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಒದಗಿಸಿದ್ದು, ರಾಜ್ಯದ ರೈತರಿಗೆ 12 ಸಾವಿರ ಕೋಟಿ ಹಣ ನೇರವಾಗಿ ಜಮೆಯಾಗುವಂತೆ ಮಾಡಿದ್ದು ನಮ್ಮ ಸರ್ಕಾರ. ಈ ಯೋಜನೆಯಲ್ಲಿ ಮಂಡ್ಯ ಜಿಲ್ಲೆಯ ಮೂರು ಮುಕ್ಕಾಲು ಲಕ್ಷ ಜನರಿಗೆ 600 ಕೋಟಿಗಿಂತ ಅಧಿಕ ಹಣ ಅಕೌಂಟಿಗೆ ಜಮಾ ಆಗಿದೆ ಎಂದು ಹೇಳಿದರು.

ಎಥೆನಾಲ್ ಉತ್ಪಾದನೆಯಿಂದ ಕಬ್ಬು ಬೆಳೆಗಾರರಿಗೆ ಲಾಭ: ರಾಜ್ಯದಲ್ಲಿ ಸಂಕಷ್ಟದಲ್ಲಿದ್ದ ರೈತರಿಗೆ ಎಥನಾಲ್ ಉತ್ಪಾದನೆಯಿಂದ ಸರ್ಕಾರ ಲಾಭ ಮಾಡಿಕೊಟ್ಟಿದೆ. ಕಬ್ಬಿನಿಂದ ಸಕ್ಕರೆ ಉತ್ಪಾದನೆ ಜೊತೆಗೆ ಎಥೆನಾಲ್ ಉತ್ಪಾದನೆಗೂ ಆದ್ಯತೆ ನೀಡಿರುವ ಪರಿಣಾಮ ಕಬ್ಬು ಬೆಳೆಗಾರರು ಸುಸ್ಥಿತಿಯಲ್ಲಿದ್ದಾರೆ. ಕೇಂದ್ರ ಸರ್ಕಾರ ಕಬ್ಬು ಬೆಳೆಗಾರರಿಗಾಗಿ ಸಕ್ಕರೆ ಸಹಕಾರ ಕ್ಷೇತ್ರಕ್ಕೆ ಪ್ರೋತ್ಸಾಹ ಹಣ ನೀಡಲು ತೀರ್ಮಾನಿಸಿದೆ. ತೆರಿಗೆಯಲ್ಲೂ ರಿಯಾಯಿತಿ ಕೊಡುತ್ತಿದೆ. ಜೊತೆಗೆ ದೇಶದಲ್ಲಿ ವಿದೇಶಿ ಹೂಡಿಕೆಗೆ ಹೆಚ್ಚಿನ ಬೇಡಿಕೆ ಇದೆ. ಕೊರೊನಾ ಹೊಡೆತ ಮುಗಿದ ಬಳಿಕವೂ ದೇಶದಲ್ಲಿ 4 ಲಕ್ಷ ಕೋಟಿಯನ್ನು ವಿದೇಶಿಗರು ಬಂಡವಾಳ ಹೂಡಿಕೆ ಮಾಡಿದ್ದಾರೆ ಎಂದರು.

ಕಾಂಗ್ರೆಸ್‌ಗೆ ಮೋದಿ ಸಮಾಧಿ ಕನಸು, ನನಗೆ ಜನರ ಅಭಿವೃದ್ಧಿ ಕನಸು: ಒಂದು ಕಡೆ ಡಬಲ್ ಇಂಜಿನ್ ಸರ್ಕಾರ ರಾಜ್ಯ ಹಾಗೂ ದೇಶದ ಅಭಿವೃದ್ಧಿಗೆ ಹೊಸ ಹೊಸ ಯೋಜನೆ ತರಲು ಕನಸು ಕಾಣುತ್ತಿದ್ದರೆ, ಇತ್ತ ಕಾಂಗ್ರೆಸ್ ಮೋದಿ ಸಮಾಧಿ ಮಾಡುವ ಕನಸು ಕಾಣುತ್ತಿದೆ. ದೇಶದಲ್ಲಿ ಬಡತನ ನಿವಾರಣೆ ಮಾಡುವ ಕೆಲಸದಲ್ಲಿ ಮೋದಿ ನಿರತರಾಗಿದ್ದರೆ, ಮೋದಿಯ ಸಮಾಧಿ ಅಗೆಯುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ. ದೇಶದ ಬಡವರು, ಮಹಿಳೆಯರು, ಜನರ ಆಶೀರ್ವಾದ ನನ್ನ ರಕ್ಷಾ ಕವಚವಾಗಿ ನಿಂತಿದ್ದು, ನನಗೆ ಯಾರ ಭಯವೂ ಇಲ್ಲ ಎಂದು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಇದಕ್ಕೂ ಮುನ್ನ ನರೇಂದ್ರ ಮೋದಿ ಅವರಿಗೆ ಹಸಿರು ಶಾಲು ಹೊದಿಸಿ, ಮಲ್ಲಿಗೆ ಹಾರ ಹಾಕಿ, ಮೈಸೂರು ಪೇಟ ತೊಡಿಸಿ ಸನ್ಮಾನಿಸಿದರೆ, ಸಂಸದೆ ಸುಮಲತಾ ಅಂಬರೀಷ್ ಮಂಡ್ಯದ ವಿಶಿಷ್ಟ ಆರ್ಗಾನಿಕ್ ಬೆಲ್ಲ ನೀಡಿ ಸತ್ಕರಿಸಿದರು.

ದಶಪಥ ಹೆದ್ದಾರಿ ನಿರ್ಮಾಣದ ಕ್ರೆಡಿಟ್ ಮೋದಿಗೇ ಸಲ್ಲಬೇಕು: ಬೊಮ್ಮಾಯಿ



ಮಂಡ್ಯ, ಮಾ.12(ಮೋಹನ್‌ರಾಜ್)–ಮೊದಲ ಹಂತದ ಬೆಂಗಳೂರು– ಮೈಸೂರು ನೂತನ ದಶಪಥ ಹೆದ್ದಾರಿ ಅಚ್ಚುಕಟ್ಟಾಗಿ ನಿರ್ಮಾಣಗೊಂಡಿದ್ದು, ಎರಡನೇ ಹಂತದ ಕೆಲಸ ಶರವೇಗದಲ್ಲಿ ನಡೆಯುತ್ತಿದೆ. ಹೆದ್ದಾರಿ ನಿರ್ಮಾಣದ ಸಂಪೂರ್ಣ ಕ್ರೆಡಿಟ್ ಪ್ರಧಾನಿ ಮೋದಿ ಅವರಿಗೇ ಸಲ್ಲಬೇಕೆಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಪ್ರಾಯಿಸಿದರು.

ಭಾನುವಾರ ಮಂಡ್ಯದ ಗೆಜ್ಜಲಗೆರೆಯಲ್ಲಿ ಬೆಂಗಳೂರು–ಮೈಸೂರು ದಶಪಥ ಹೆದ್ದಾರಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬೆಂಗಳೂರು–ಮೈಸೂರು 6 ಪಥದ ರಸ್ತೆಯಾಗಬೇಕೆಂಬುದು 90ರ ದಶಕದ ಬೇಡಿಕೆಯಾಗಿತ್ತು. 2014ರಲ್ಲಿ ಪ್ರಧಾನಿ ಮೋದಿ ಅಧಿಕಾರಕ್ಕೆ ಬಂದ ಮೇಲೆ ಡಿಪಿಆರ್ ಮಾಡಲು ಚಾಲನೆ ನೀಡಿದರು. 2016ರಲ್ಲಿ ರಾಷ್ಟ್ರೀಯ ರಸ್ತೆ ಪ್ರಾಧಿಕಾರಕ್ಕೆ ವರ್ಗಾವಣೆ ಮಾಡಿ, ಹಣವನ್ನು ಮಂಜೂರು ಮಾಡಿದರು. ಆರಂಭಿಕ ಹಣವಾಗಿ 4000 ಕೋಟಿ ಮೀಸಲಿಟ್ಟು 2019ರಲ್ಲಿ ಅಭಿವೃದ್ಧಿ ಕಾಮಗಾರಿ ಆರಂಭಿಸಿ, 2023ಕ್ಕೆ ಅಂತಿಮ ಘಟ್ಟಕ್ಕೆ ಬಂದಿದೆ. ಮೈಸೂರಲ್ಲಿ ರಸ್ತೆ ಕಾಮಗಾರಿಗೆ ಅಡಿಗಲ್ಲು ಹಾಕಿದ್ದು ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ, ಆದರೆ ಕೆಲವರು ರಸ್ತೆ ಕಾಮಗಾರಿ ಆರಂಭಿಸಿದ್ದು ನಾವು ಎಂದು ಪುಕ್ಕಟೆ ಪ್ರಚಾರ ತೆಗೆದುಕೊಳ್ಳುತ್ತಿದ್ದಾರೆಂದು ಟೀಕಿಸಿದರು.

ವಿಶ್ವ ನಾಯಕ ಮೋದಿ: ಪ್ರಧಾನಿ ನರೇಂದ್ರ ಮೋದಿ ಅವರನ್ನು ವಿಶ್ವವೇ ಮೆಚ್ಚುತ್ತದೆ. ಮಿತ್ರ ರಾಷ್ಟ್ರಗಳು ಮೋದಿ ನಾಯಕತ್ವದ ಬಗ್ಗೆ ಶ್ಲಾಘನೆ ವ್ಯಕ್ತಪಡಿಸಿದರೆ, ಮಿತ್ರವಲ್ಲದ ರಾಷ್ಟ್ರಗಳಾದ ಪಾಕಿಸ್ತಾನ, ಚೀನಾದಲ್ಲಿ ಅಲ್ಲಿನ ಜನ ಮೋದಿ ನಾಯಕತ್ವವನ್ನು ಕೊಂಡಾಡುತ್ತಾರೆ. ಜಿ–20 ರಾಷ್ಟ್ರಗಳು ಮೋದಿ ನಾಯಕತ್ವಕ್ಕೆ ಬಹುಪರಾಕ್ ಹಾಕಿದೆ. ದೊಡ್ಡಣ್ಣ ಅಮೇರಿಕಾದಂತಹ ರಾಷ್ಟ್ರವೇ ಮೋದಿಯನ್ನು ಒಪ್ಪಿದ ಮೇಲೆ ಇನ್ನಾರು ಒಪ್ಪಬೇಕೆಂದು ಪ್ರಶ್ನಿಸಿದರು.

ಡಬಲ್ ಇಂಜಿನ್ ಸರ್ಕಾರದಿಂದ ಅಭಿವೃದ್ಧಿ: ಅಭಿವೃದ್ಧಿಗೆ ಕೇಂದ್ರದ ಜೊತೆಗೆ ರಾಜ್ಯ ಸರ್ಕಾರ ಕೈ ಜೋಡಿಸಿ, ಡಬಲ್ ಇಂಜಿನ್ ಸರ್ಕಾರ ಜೋಡೆತ್ತಿನಂತೆ ರಾಜ್ಯದ ಅಭಿವೃದ್ಧಿಗೆ ಒತ್ತು ನೀಡಿದೆ. ಕಿಸಾನ್ ಸಮ್ಮಾನ್ ಯೋಜನೆಯಲ್ಲಿ 16,500 ಕೋಟಿ ಹಣ 53 ಲಕ್ಷ ರೈತರಿಗೆ ತಲುಪಿದೆ. ರಾಜ್ಯದ ಈ ಮಹತ್ವದ ಯೋಜನೆಗೆ ಕೇಂದ್ರ ಸರ್ಕಾರ ಪ್ರೋತ್ಸಾಹವಾಗಿ 4500 ಕೋಟಿ ನೀಡಿದೆ. ಪ್ರಧಾನಿ ಅವಾಸ್ ಯೋಜನೆ ರಾಜ್ಯದ 17 ಲಕ್ಷ ರೈತರಿಗೆ ಮಂಜೂರಾಗಿದ್ದು, ರಾಜ್ಯದ 1.25 ಲಕ್ಷ ಜನತೆಗೆ ಆಯುಷ್ಮಾನ್ ಕಾರ್ಡ್ ವಿತರಣೆಯಾಗಿದೆ. ರಾಜ್ಯದಲ್ಲಿ 64 ಸಾವಿರ ಕೋಟಿ ಹಣದಿಂದ 600 ಕಿಲೋಮೀಟರ್ ಹೈವೇ ನಿರ್ಮಾಣವಾಗಿದೆ ಎಂದರು.

ಮೈಷುಗರ್ ಪುನರಾರಂಭಿಸಿದ್ದು ಬಿಜೆಪಿ: ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಮುಚ್ಚಿ ಹೋಗಿದ್ದ ಮೈಷುಗರ್ ಸಕ್ಕರೆ ಕಾರ್ಖಾನೆಯನ್ನು ಪುನರಾರಂಭಿಸಿದ್ದು, ಬಿಜೆಪಿ ಸರ್ಕಾರ. ಮುಚ್ಚಿ ಹೋಗಿದ್ದ ಮೈಷುಗರ್‌ಗೆ 100 ಕೋಟಿ ಹಣ ನೀಡಿ ಕಾರ್ಖಾನೆ ತೆರೆಯಲಾಯಿತು. ಜೊತೆಗೆ ಎಥನಾಲ್ ಘಟಕ ಸಹ ತೆರೆಯಲಾಯಿತು. ಜೊತೆಗೆ ನೀರಾವರಿ ಕ್ಷೇತ್ರಕ್ಕೂ ಆದ್ಯತೆ ನೀಡಿ ಜಿಲ್ಲೆಯ ಸಾವಿರಾರು ರೈತರ ಪ್ರಮುಖ ಬೇಡಿಕೆಯಾಗಿದ್ದ ನೀರಾವರಿ ಕ್ಷೇತ್ರಕ್ಕೆ ಭರಪೂರ ಕೊಡುಗೆಯನ್ನು ನೀಡಲಾಗಿದೆ. 30 ವರ್ಷದಲ್ಲಿ ಆಗದ ಅಭಿವೃದ್ಧಿಯನ್ನು ಬಿಜೆಪಿ ಸರ್ಕಾರ ಈ ಅವಧಿ ಹಾಗೂ ಹಿಂದಿನ ಅವಧಿಯಲ್ಲಿ ಮಾಡಿದೆ ಎಂದು ಹೇಳಿದರು.

ರಿಪೋರ್ಟ್ ಕಾರ್ಡ್ ಹಿಡಿದು ನಾವು ಮತದಾರರ ಬಳಿಗೆ ಹೋಗುತ್ತಿದ್ದೇವೆ. ನಮ್ಮ ಸರ್ಕಾರದ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದು, ಮಂಡ್ಯ ಜಿಲ್ಲೆಗೂ ಅನೇಕ ಕೊಡುಗೆ ನೀಡಿದ್ದೇವೆ. ಮುಂದಿನ ಬಾರಿ ಬಿಜೆಪಿ ಪಕ್ಷಕ್ಕೆ ಜನ ಆಶೀರ್ವಾದ ಮಾಡಬೇಕೆಂದು ಮನವಿ ಮಾಡಿದರು.

ಮೋದಿಗೆ ಮನವಿ ಸಲ್ಲಿಸಲು ಮುಂದಾದ ಹೋರಾಟಗಾರರು ಪೊಲೀಸ್ ವಶಕ್ಕೆ

ಮಂಡ್ಯ, ಮಾ.12– ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಸಲ್ಲಿಸಲು ಬಂದಿದ್ದ ಮಹಿಳಾ ಮುನ್ನಡೆ ಮತ್ತು ಜನಶಕ್ತಿ ಸಂಘಟನೆ ಸದಸ್ಯರನ್ನು ಮಂಡ್ಯ ಗ್ರಾಮಾಂತರ ಪೊಲೀಸರು ವಶಕ್ಕೆ ಪಡೆದರು.

ಮೋದಿ ಅವರು ರೋಡ್ ಶೋ ತೆರಳುವ ಮಾರ್ಗ, ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆ ಬಳಿ ಜನಶಕ್ತಿ ಸದಸ್ಯರು ಸೇರಿದ್ದರು.

ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ನಿಲ್ಲಬೇಕು. ಕಾರ್ಮಿಕರ ಕೆಲಸದ ಅವಧಿ ಹೆಚ್ಚಿಸಿರುವುದನ್ನು ರದ್ದುಪಡಿಸಬೇಕು. ನಿವೇಶನ ರಹಿತರಿಗೆ ಹಕ್ಕುಪತ್ರ ವಿತರಣೆ ಮಾಡಬೇಕು ಎಂದು ಸದಸ್ಯರು ಘೋಷಣೆ ಕೂಗಿದರು.

ಈ ಸಂದರ್ಭ ಪೊಲೀಸರು ಪ್ರತಿಭಟನಾಕಾರರನ್ನು ತಳ್ಳಿ, ಮನವಿ ಪತ್ರ ಹರಿದು ಹಾಕಿದರು. ಪ್ರತಿಭಟನಾಕಾರರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ಪೊಲೀಸರು ಬಲವಂತವಾಗಿ ಪ್ರತಿಭಟನಾಕಾರರನ್ನು ವಾಹನದೊಳಗೆ ತಳ್ಳಿಕೊಂಡು ಗ್ರಾಮಾಂತರ ಪೊಲೀಸ್ ಠಾಣೆಗೆ ಕರೆದೊಯ್ದರು.

ಭುಗಿಲೆದ್ದ ಆಕ್ರೋಶ: ರಾತ್ರೋರಾತ್ರಿ ವಿವಾದಾತ್ಮಕ ದ್ವಾರ ತೆರವು

ಮಂಡ್ಯ, ಮಾ.12– ಮೋದಿ ಸ್ವಾಗತಕ್ಕೆ ಹಾಕಲಾಗಿದ್ದ 4 ದ್ವಾರಗಳ ಪೈಕಿ ಉರಿಗೌಡ–ದೊಡ್ಡ ನಂಜೇಗೌಡರ ಮಹಾದ್ವಾರ ನಗರದ ಫ್ಯಾಕ್ಟರಿ ವೃತ್ತದಲ್ಲಿ ರಾರಾಜಿಸುತ್ತಿತ್ತು. ಇದರಿಂದ ಆಕ್ರೋಶಗೊಂಡ ಪ್ರಗತಿಪರ ಸಂಘಟನೆಗಳು, ಕಾಂಗ್ರೆಸ್ ಮತ್ತು ಜೆಡಿಎಸ್ ಮುಖಂಡರು ಆಕ್ರೋಶ ವ್ಯಕ್ತಪಡಿಸಿ, ಪ್ರತಿಭಟಿಸುವ ಎಚ್ಚರಿಕೆ ನೀಡಿದರು. ಇದರಿಂದ ಎಚ್ಚೆತ್ತ ಪೊಲೀಸರು ರಾತ್ರೋರಾತ್ರಿ ಉರಿಗೌಡ– ದೊಡ್ಡ ನಂಜೇಗೌಡರ ಮಹಾದ್ವಾರ ನಗರದ ಫ್ಯಾಕ್ಟರಿ ವೃತ್ತದಿಂದ ತೆರವು ಮಾಡಿದರು. ಜೊತೆಗೆ ನಗೆಪಾಟಲಿಗೆ ಗುರಿಯಾಗುವ ಭೀತಿಯಿಂದ ಪಾರಾಗಲು ರಾತ್ರೋರಾತ್ರಿ ಬಿಜೆಪಿ ಮುಖಂಡರು ಆ ದ್ವಾರದಲ್ಲಿ ಡಾ.ಬಾಲಗಂಗಾಧರನಾಥ ಸ್ವಾಮೀಜಿ ಮಹಾದ್ವಾರ ಎಂದು ಮರು ನಾಮಕರಣ ಮಾಡಿದರು.

ರಸ್ತೆಯಲ್ಲಿ ಸಂಚರಿಸಲು ಜನರ ಪರದಾಟ: ಬೆಳಗ್ಗೆ 6ಗಂಟೆಯಿಂದ ಮಂಡ್ಯ, ಮದ್ದೂರಿಗೆ ಪ್ರವೇಶವನ್ನು ಪೊಲೀಸರು ನಿರ್ಬಂಧಿಸಿದ್ದರು. ಮಂಡ್ಯದಲ್ಲಿ ಕೇವಲ ನಗರ ಹಾಗೂ ಸುತ್ತಮುತ್ತಲ ಗ್ರಾಮಸ್ಥರಿಗೆ ಸಂಚರಿಸಲು ಮಾತ್ರ ಅವಕಾಶ ನೀಡಲಾಗಿತ್ತು. ಕೆಲವರು ಬಸ್‌ಗಾಗಿ ಕಾದು ಬಸ್ ಇಲ್ಲದೇ ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು ಬ್ಯಾರಿಕೇಡ್ ಅಳವಡಿಸಿ ಎಲ್ಲಾ ರಸ್ತೆ ಸಂಪರ್ಕ, ಬಸ್ ನಿಲ್ದಾಣ ಸಂಪರ್ಕ ನಿಲ್ಲಿಸಿದ್ದರಿಂದ ಜನರು ಪರದಾಡಿದರು. ಜೊತೆಗೆ ಬೆಂಗಳೂರು–ಮೈಸೂರು ಹೆದ್ದಾರಿಯ ಸಮುದಾಯ ಭವನಗಳಲ್ಲಿ ನಡೆಯುತ್ತಿದ್ದ ಮದುವೆಗೆ ಹೋಗಲು ಜನ ಇನ್ನಿಲ್ಲದ ಕಸರತ್ತು ನಡೆಸಿದರು. ಜೊತೆಗೆ ಶುಭ ಸಮಾರಂಭವನ್ನು ಆಯೋಜಿಸಿದ್ದ ಜನ ಕಾರ್ಯಕ್ರಮ ನಡೆಸಲು ಭಾರೀ ಪರದಾಡುವಂತಾಯಿತು.



ಸಾಂಸ್ಕೃತಿಕ ಕಲಾ ತಂಡಗಳ ಅದ್ಭುತ ನೃತ್ಯವನ್ನು ವೀಕ್ಷಿಸುತ್ತಿರುವ ಸಂಸದ ಪ್ರತಾಪ್ ಸಿಂಹ್, ಸಚಿವ ಗೋಪಾಲಯ್ಯ ಹಾಗೂ ಇನ್ನಿತರರು

ಮೈಸೂರು ವಿಮಾನ ನಿಲ್ದಾಣದಲ್ಲಿ ಪ್ರಧಾನಿಗೆ ಆತ್ಮೀಯ ಸ್ವಾಗತ



ಮೈಸೂರು, ಮಾ.12(ಆರ್‌ಕೆ)– ಮಂಡ್ಯದಲ್ಲಿ ದಶಪಥ ರಾಷ್ಟ್ರೀಯ ಹೆದ್ದಾರಿ ಉದ್ಘಾಟಿಸಲೆಂದು ಮೈಸೂರಿಗೆ ಆಗಮಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಜಿಲ್ಲಾಡಳಿತವು ಭಾನುವಾರ ಆತ್ಮೀಯವಾಗಿ ಬರಮಾಡಿಕೊಂಡಿತು.

ಮೋದಿ ಅವರನ್ನು ಮೇಯರ್ ಶಿವಕುಮಾರ್, ಉಪ ಮೇಯರ್ ಡಾ. ಜಿ.ರೂಪಾ, ಜಿಲ್ಲಾಧಿಕಾರಿ ಡಾ. ಕೆವಿ.ರಾಜೇಂದ್ರ ಅವರು ಆತ್ಮೀಯವಾಗಿ ಸ್ವಾಗತಿಸಿ, ಬರಮಾಡಿಕೊಂಡರು. ಈ ವೇಳೆ ಕೇಂದ್ರ ರಸ್ತೆ ಮತ್ತು ಸಾರಿಗೆ ಸಚಿವ ನಿತಿನ್ ಗಡ್ಕರಿ, ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಷಿ, ಶಾಸಕರಾದ ಎಸ್.ಎ. ರಾಮದಾಸ್, ಎಲ್.ನಾಗೇಂದ್ರ, ಬಿ.ಹರ್ಷವರ್ಧನ್, ರಾಜ್ಯ ಮುಖ್ಯ ಕಾರ್ಯದರ್ಶಿ ವಂದಿತಾ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ಶರ್ಮ, ದಕ್ಷಿಣ ವಲಯ ಐಜಿಪಿ ಪ್ರವೀಣ್ ಮಧುಕರ್ ಪವಾರ್, ಮೈಸೂರು ನಗರ ಪೊಲೀಸ್ ಕಮಿಷ್ನರ್ ಬಿ.ರಮೇಶ್, ಎಸ್ಪಿ ಸೀಮಾ ಲಾಟ್ಕರ್ ಸೇರಿದಂತೆ ಹಲವರು ಮೈಸೂರು ವಿಮಾನ ನಿಲ್ದಾಣದಲ್ಲಿ ಹಾಜರಿದ್ದರು.

ನಂತರ ಬೆಳಗ್ಗೆ 11.10 ಗಂಟೆಗೆ ಹೆಲಿಕಾಪ್ಟರ್ ಮೂಲಕ ಮಂಡ್ಯಗೆ ತೆರಳಿದ ಪ್ರಧಾನಿಗಳು, ಗೆಜ್ಜಲಗೆರೆ ಬಳಿ ಆಯೋಜಿಸಿದ್ದ ಸಮಾರಂಭದಲ್ಲಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ರಾಷ್ಟ್ರೀಯ ಹೆದ್ದಾರಿ ಉದ್ಘಾಟಿಸಿದರು. ಬಳಿಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರೊಂದಿಗೆ ಹೆಲಿಕಾಪ್ಟರ್‌ನಲ್ಲಿ ಮಧ್ಯಾಹ್ನ 2.15 ಗಂಟೆಗೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಹಿಂದಿರುಗಿದ ನರೇಂದ್ರ ಮೋದಿ ಅವರು, ಮಧ್ಯಾಹ್ನ 2.25 ಗಂಟೆ ವೇಳೆ ವಿಮಾನದಲ್ಲಿ ಹುಬ್ಬಳ್ಳಿಗೆ ಪ್ರಯಾಣ ಬೆಳೆಸಿದರು.

ಆ ವೇಳೆ ಶಾಸಕರಾದ ಎಸ್.ಎ.ರಾಮದಾಸ್ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು. ಪ್ರಧಾನಿಗಳ ಆಗಮನದ ಹಿನ್ನೆಲೆಯಲ್ಲಿ ಮೈಸೂರು ವಿಮಾನ ನಿಲ್ದಾಣದಲ್ಲಿ 500 ಪೊಲೀಸ್ ಸಿಬ್ಬಂದಿಗಳನ್ನು ಬೆಳಗ್ಗೆ 6 ಗಂಟೆಯಿಂದಲೇ ನಿಯೋಜಿಸಿ, ಭಾರೀ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ನರೇಂದ್ರ ಮೋದಿ ಅವರು ಆಗಮಿಸಿದಾಗ ವಿಮಾನ ನಿಲ್ದಾಣದಲ್ಲಿ ಕೈಮುಗಿದು ಸ್ವಾಗತಿಸಿದ ಶಾಸಕ ರಾಮದಾಸ್ ಅವರನ್ನು ಕೈಕುಲುಕಿ ಯೋಗಕ್ಷೇಮ ವಿಚಾರಿಸಿದರು. ಅದೇ ರೀತಿ ನಾಗೇಂದ್ರ ಹಾಗೂ ಬಿ.ಹರ್ಷವರ್ಧನ್ ಅವರೂ ಸಹ ಕೈಮುಗಿದು ಶಿರಬಾಗಿ ಪ್ರಧಾನಿಗಳಿಗೆ ನಮಿಸಿದರು.

ಪ್ರಧಾನಿಗಳ ಆಗಮನದ ಹಿನ್ನೆಲೆಯಲ್ಲಿ ಮಂಡಕಳ್ಳಿ ವಿಮಾನ ನಿಲ್ದಾಣವಷ್ಟೇ ಅಲ್ಲದೆ ಮುನ್ನೆಚ್ಚರಿಕಾ ಕ್ರಮವಾಗಿ ನಂಜನಗೂಡು ರಸ್ತೆ, ರಿಂಗ್ ರಸ್ತೆಯಲ್ಲಿ ತಿ.ನರಸೀಪುರ ಜಂಕ್ಷನ್, ಬನ್ನೂರು ರಸ್ತೆ ಜಂಕ್ಷನ್, ಮಣಿಪಾಲ್ ಆಸ್ಪತ್ರೆ ಜಂಕ್ಷನ್, ಸಿದ್ದಲಿಂಗಪುರ ಮಾರ್ಗವಾಗಿ ಮಂಡ್ಯದವರೆಗೂ ಮೈಸೂರು–ಬೆಂಗಳೂರು ದಶಪಥ ರಾಷ್ಟ್ರೀಯ ಹೆದ್ದಾರಿಯಲ್ಲೂ ಸಿಬ್ಬಂದಿಗಳನ್ನು ನಿಯೋಜಿಸಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಪ್ರಧಾನಿಗಳು ಹೆಲಿಕಾಪ್ಟರ್ ಮೂಲಕವೇ ಮಂಡ್ಯಗೆ ಹೋಗಿ ಬಂದು ವಿಮಾನದಲ್ಲಿ ಹುಬ್ಬಳ್ಳಿಗೆ ತಲುಪಿದ ನಂತರ ಎಲ್ಲಾ ಪೊಲೀಸ್ ಸಿಬ್ಬಂದಿಗಳನ್ನು ವಾಪಸ್ ಕರೆಸಿಕೊಳ್ಳಲಾಯಿತು.



ನಕ್ಕರೆ ಅದೇ ಸ್ವರ್ಗ

ನೌಕರ : ಯಾಕೆ ಸರ್, ನೀವು ನಿಮ್ಮ ಆಫೀಸ್‌ನಲ್ಲಿ ಮದುವೆ ಆದ ಗಂಡಸರನ್ನೇ ಮಾತ್ರ ಕೆಲಸಕ್ಕೆ ಸೇರಿಸಿಕೊಳ್ತೀರಾ...?

ಬಾಸ್ : ಯಾಕೆಂದರೆ, ಮದುವೆಯಾದ ಗಂಡಸರು ಎಷ್ಟು ಬಯ್ದರೂ ಸುಮ್ಮನೆ ಬಾಯ್ ಮುಚ್ಚಿಕೊಂಡು ಕೇಳ್ತಾರೆ, ಮತ್ತೆ ಅವರಿಗೆ ಸಂಜೆ ಬೇಗ ಮನೆಗೆ ಹೋಗುವ ಆತುರ ಇರಲ್ಲ...!

ಮೈಸೂರು ಮಿತ್ರ

ಸೋಮವಾರ, 13 ಮಾರ್ಚ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಯಾರು ನಂಬಿಕೆಗೆ ಯೋಗ್ಯರಲ್ಲವೋ ಅವರಲ್ಲಿ ನಂಬಿಕೆ ಇಡಬೇಡಿ. ಯಾರು ನಂಬಿಕೆಗೆ ಸಂಪೂರ್ಣ ಯೋಗ್ಯರೋ ಅವರಲ್ಲೂ ಕುರುಡರಾಗಿ ನಂಬಿಕೆ ಇಡಬೇಡಿ. ಏಕೆಂದರೆ ಈ ವ್ಯಕ್ತಿಗಳು ನಂಬಿಕೆ ದ್ರೋಹ ಮಾಡಿದಾಗ ತಡೆಯಲಾಗದ ದುಃಖವಾಗುವುದು. – ವಿದುರ ನೀತಿ (ಮಹಾಭಾರತ)

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಗುವೂ ಚಿವುಟಿ, ತೊಟ್ಟಿಲು ತೂಗಿದ ಹಾಗೆ.

ನಿಮ್ಮ ಪತ್ರಗಳು

ಚುನಾವಣೆ ಬಂದಾಗ ಮಾತ್ರ ಮತದಾರರ ಜಪ!

ಮಾನ್ಯರೆ,

ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ಎಲ್ಲಾ ಪಕ್ಷಗಳು ಜಿದ್ದಿಗೆ ಬಿದ್ದಂತೆ ಮತದಾರರನ್ನು ಸೆಳೆಯಲು ಅನೇಕ ಕಸರತ್ತುಗಳನ್ನು ಮಾಡುತ್ತಿವೆ. ಟಿಕೆಟ್ ಖಾತ್ರಿ ಮಾಡಿಕೊಂಡು ಪಕ್ಷಾಂತರಗಳಂತೂ ಬಹಳ ಜೋರಾಗಿಯೇ ನಡೆಯುತ್ತಿದೆ, ಆಯಾ ಜಿಲ್ಲಾ ಕೇಂದ್ರಗಳಲ್ಲಿ ಪಕ್ಷಗಳ ಶಕ್ತಿ ಪ್ರದರ್ಶನಕ್ಕೋಸ್ಕರ ಬೃಹತ್ ಸಭೆ, ಸಮಾರಂಭ, ಸಮಾವೇಶಗಳನ್ನು ವಿಭಿನ್ನ ರೀತಿಯ ಜನಾಕರ್ಷಣೀಯ ಹೆಸರುಗಳಿಂದ ಆಯೋಜನೆಯನ್ನು ಮಾಡಿ, ಅದ್ದೂರಿ ಸ್ವಾಗತದ ವಾಹನಗಳ ಮೂಲಕ ರೋಡ್ ಶೋ ಮುಖಾಂತರ ಮತದಾರರ ಮನಸ್ಸನ್ನು ಗೆಲ್ಲಲು ರಣತಂತ್ರವನ್ನು ರೂಪಿಸುತ್ತಿವೆ. ಭಾಷಣದ ಮೂಲಕ ಮೋಡಿ ಮಾಡಿ ತಮ್ಮ ಪಕ್ಷವನ್ನು ಹೊಗಳಿ, ಅಭಿವೃದ್ಧಿ ಕಾರ್ಯಗಳ ವಿವರಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡಲಾಗುತ್ತಿದೆ. ಇತರ ಪಕ್ಷಗಳನ್ನು ಅಲ್ಲಗಳೆಯುತ್ತಾ, ಆ ನಾಯಕರ ವೈಯಕ್ತಿಕ ನಿಂದನೆ, ಭ್ರಷ್ಟಾಚಾರದ ಮುಖವಾಡವನ್ನು ಕಳಚಿ, ಟೀಕೆಗಳನ್ನು ಮಾಡುತ್ತಾ ಚಪ್ಪಾಳೆ ಗಿಟ್ಟಿಸುತ್ತಿದ್ದಾರೆ.

ತಮ್ಮ ಪಕ್ಷವನ್ನು ಶತಾಯಗತಾಯ ಅಧಿಕಾರಕ್ಕೆ ತರಲು ಸಾಕಷ್ಟು ಶ್ರಮಗಳನ್ನು ಎಲ್ಲಾ ಪಕ್ಷಗಳು ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ, ರೈತರು, ಮಹಿಳೆಯರು, ವ್ಯಾಪಾರಸ್ಥರು, ಯುವಕರನ್ನು ಸೆಳೆಯಲು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಅನೇಕ ಕಾರ್ಯಕ್ರಮಗಳ ಮೂಲಕ ಉಚಿತ ಯೋಜನೆಗಳನ್ನು ಪ್ರಚಾರ ಮಾಡಿ ಘೋಷಣೆಗಳನ್ನು ಪ್ರಕಟಣೆ ಮಾಡುತ್ತಾ ತಂತ್ರಗಾರಿಕೆಯನ್ನು ರೂಪಿಸುತ್ತಿದ್ದಾರೆ, ಮತದಾರರ ಬಗ್ಗೆ ಎಲ್ಲಿಲ್ಲದ ಬಲು ಪ್ರೀತಿ ಬಂದಿದೆ, ಒಮ್ಮೆಯೂ ಕ್ಷೇತ್ರದತ್ತ ಕಾಲಿಡದ, ಮತದಾರರ ಸಮಸ್ಯೆಗಳಿಗೆ ಸ್ಪಂದಿಸದ, ಅನೇಕ ಶಾಸಕರು, ಮಂತ್ರಿಗಳು, ಸಂಸದರು, ಈಗ ಮಾತ್ರ ಪ್ರತಿ ಗ್ರಾಮಗಳಿಗೆ ತೆರಳಿ ಚುನಾವಣೆಯಲ್ಲಿ ನಮಗೆ ಮತವನ್ನು ನೀಡಿ ಜಯಶೀಲರನ್ನಾಗಿ ಮಾಡಬೇಕೆಂದು ಪರಿಪರಿಯಾಗಿ ವಿನಂತಿಸಿಕೊಳ್ಳುತ್ತಿದ್ದಾರೆ, ಅಭ್ಯರ್ಥಿಗಳು ಜಯಶೀಲರಾದ ಮೇಲೆ ಮತದಾರರ ಕೈಗೆ ಸಿಗದೆ ನುಣುಚಿಕೊಳ್ಳುತ್ತಾರೆ. ಈ ಚುನಾವಣೆಯಲ್ಲಿ ತಮ್ಮ ಸಮಸ್ಯೆಗಳಿಗೆ ಸ್ಪಂದಿಸುವ, ಅಭಿವೃದ್ಧಿಯತ್ತ ಕೊಂಡೊಯ್ಯುವ ಪ್ರಾಮಾಣಿಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ಯಾವುದೇ ಹಣ, ಹೆಂಡ, ಉಡುಗೊರೆಗಳಂತಹ ಆಮಿಷಗಳಿಗೆ ಬಲಿಯಾಗಬೇಡಿ, ನಿಮ್ಮ ಮತ, ನಿಮ್ಮ ಹಕ್ಕು, ನಿಮ್ಮ ಕರ್ತವ್ಯವನ್ನು ಪಾಲಿಸಿ.

– ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾಲೂಕು

ವಿದ್ಯುತ್ ಬಿಲ್ ಪ್ರಧಾನ, ಬಾಕಿ ಬಿಲ್‌ಗಳು ನಿಧಾನ!

ಮಾನ್ಯರೆ,

ವಿದ್ಯುತ್ ಶಾಕ್ ವರ! ಆದಾಯಕ್ಕೆ ಬರ! ಈ ವಿದ್ಯುತ್ ಶಾಕ್ ಎಂಬ ಮಾನವ ನಿರ್ಮಿತ ವರವು ಇನ್ನು ಮುಂದೆ ಮುಂದಿನ ಪೀಳಿಗೆಗೆ ಬಾಲ–ವಯೋವೃದ್ಧರ ಆದಾಯಕ್ಕೆ ಬರವಾಗಿ ಪರಿಣಮಿಸಲಿದೆ. ಏಕೆಂದರೆ ಇದುವರೆಗೂ ನಮಗೆ ತಲುಪಿದ ಚೋಟಾ–ಮೋಟಾ ಶಾಕ್‌ನಂತಲ್ಲ. ಈ ಸಾರಿ ಜಬರ್‌ದಸ್ತ್, ವಿದ್ಯುತ್ ಶಾಕ್ ಹೊಡೆದಿರುತ್ತದೆ. ವಿದ್ಯುತ್ ಶುಲ್ಕ ದುಪ್ಪಟ್ಟು ಕಟ್ಟುವ ಪರಿಸ್ಥಿತಿ ಬರುವ ಸಾಧ್ಯತೆ ಇದೆ. ಸರಿಯಾದ ಸಮಯಕ್ಕೆ ಶುಲ್ಕ ಪಾವತಿ ಮಾಡದಿದ್ದರೆ ವಿದ್ಯುತ್ ಕಟ್. ಈ ಆಧುನಿಕ ಕಾಲದಲ್ಲಿ ವಿದ್ಯುತ್ ಒಂದು ಮೂಲಭೂತ ಅವಶ್ಯಕ ವಸ್ತುವಾಗಿದೆ. ಕಾರಣ ಮೊಬೈಲ್ ಚಾರ್ಜಿಂಗ್, ಮಿಕ್ಸಿ, ರಾತ್ರಿ ಬೆಳಕಿಗೆ, ಟಿವಿ. ಇದು ಒಂದು ಆಹಾರ, ನೀರು, ವಾಯುವಿನಂತೆ ಅತ್ಯವಶ್ಯಕ ವಸ್ತುವಾಗಿದೆ. ಆದ್ದರಿಂದ ಇನ್ನು ಮುಂದೆ ವಿದ್ಯುತ್ ಬಿಲ್ ಪ್ರಧಾನ ! ಬಾಕಿ ಬಿಲ್‌ಗಳು ನಿಧಾನ!!

– ಎಸ್. ನಾಗರಾಜ, ಮೈಸೂರು.

ರೈಲು ಬಿಡುವ ರೈಲ್ವೇ....!

ಮಾನ್ಯರೆ,

ರೈಲು ಬಂಡಿ ಬರುತ್ತಾ ಇದೆ. ಹಳಿ ದಾಟಬೇಡಿ....

ರೈಲು ಬಂಡಿ ಬರುತ್ತಾ ಇದೆ. ಹಳಿ ದಾಟಬೇಡಿ....

ಎಂಬ ಧ್ವನಿ ಮುದ್ರಿಕೆಯು ಮೈಸೂರಿನ ಜಯನಗರ ಮತ್ತು ಕೆ.ಜಿ. ಕೊಪ್ಪಲ್ ರೈಲ್ವೇ ಕ್ರಾಸಿಂಗ್ ಬಳಿ ಪ್ರಸಾರವಾಗುತ್ತಾ ಇರುತ್ತದೆ.

ವಿಪರ್ಯಾಸವೆಂದರೆ ರೈಲುಗಾಡಿ ಹೊರಟುಹೋದ ನಂತರ ಈ ಧ್ವನಿಮುದ್ರಿಕೆ ಪ್ರಸಾರವಾಗುತ್ತದೆ. ರೈಲು ಬರುವ ಮುನ್ನ ಗೇಟ್ ಮುಚ್ಚುವ ಸಮಯದಲ್ಲಿ ಈ ಧ್ವನಿಮುದ್ರಿಕೆ ಪ್ರಸಾರ ಮಾಡಿದರೆ ಸಾರ್ವಜನಿಕರನ್ನು ಎಚ್ಚರಿಸಿದಂತಾಗುತ್ತದೆ. ರೈಲು ಬಂಡಿ ಹೋದ ನಂತರ ಈ ಧ್ವನಿಮುದ್ರಿಕೆಯನ್ನು ಪ್ರಸಾರ ಮಾಡಿದರೆ ಏನು ಪ್ರಯೋಜನ? ರೈಲು ಹೋದನಂತರ ಟಿಕೆಟ್ ತೆಗೆದುಕೊಂಡ ಹಾಗೆ ರೈಲು ಹೋದ ನಂತರ ಎಚ್ಚರಿಕೆ ನೀಡಿದರೆ ಹೇಗೆ?

– ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

'ಪಾವನ ಪಂಕ್ತಿ'

ಮಾನ್ಯರೆ,

ಡಾ. ಎಚ್.ವಿ. ನಾಗರಾಜರಾವ್ ತಮ್ಮ ಫೆ. 22ರ ಅಂಕಣದ ಬರಹದಲ್ಲಿ ಡಾ. ಎಸ್.ಪಿ. ಯೋಗಣ್ಣನವರ 'ಆಧ್ಯಾತ್ಮಿಕ ಆರೋಗ್ಯ ದರ್ಶನ' ಎಂಬ ಕೃತಿಯನ್ನು ಪರಿಚಯಿಸಿದ್ದಾರಷ್ಟೆ, ನಿಸ್ಸಂದೇಹವಾಗಿ ಅದೊಂದು ವಿಶಿಷ್ಟ ಗ್ರಂಥ. 'ಆಧ್ಯಾತ್ಮಿಕ ಆರೋಗ್ಯ' ಎನ್ನುವುದೇ ಒಂದು ಅಪರೂಪದ ಪರಿಕಲ್ಪನೆ!

ಅದಕ್ಕೂ ಹಿಂದೆ ಡಾ. ನಾಗರಾಜರಾಯರು 'ಪಂಕ್ತಿ ಪಾವನರು' ಎಂಬ ಅಂಕಣ ಬರಹವನ್ನು ಲಿಖಿಸಿದ್ದರು. ಅದುವರೆಗೆ ನಾನು ಆ ಮಾತನ್ನೇ ಕೇಳಿರಲಿಲ್ಲ; ಮಾತ್ರವಲ್ಲ, ಅದರ ಅರ್ಥವೂ ನನಗೆ ಗೊತ್ತಿರಲಿಲ್ಲ. ಏನೇ ಇರಲಿ, ಡಾ. ನಾಗರಾಜರಾಯರು ಮತ್ತು ಶತಾವಧಾನಿ ಆರ್. ಗಣೇಶರು 'ಪಂಕ್ತಿ ಪಾವನ'ರ ಸಾಲಿಗೆ ಸೇರುತ್ತಾರೆ!

ವಿವೇಕ ಸೂಕ್ತಿಗಳು: ಇತ್ತೀಚೆಗೆ ನಗರದಲ್ಲಿ ಶ್ರೀ ರಾಮಕೃಷ್ಣ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ನಡೆಯಿತಷ್ಟೆ. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರ ಎರಡು ಪರಸ್ಪರ ಪೂರಕವಾದ ಹೇಳಿಕೆಗಳನ್ನು ಪರಿಭಾವಿಸಬಹುದು: 1. "ಇತರರಿಗಾಗಿ ಬದುಕತಕ್ಕವರದೆ (ನಿಜವಾದ) ಬದುಕು; ಮಿಕ್ಕವರು ಬದುಕಿಯೂ ಸತ್ತಂತೆ!" 2. ದೀನ ದಲಿತರ ನೋವಿಗೆ ಮರುಗುವವರೇ ಮಹಾತ್ಮರು; ಉಳಿದವರೆಲ್ಲ ದುರಾತ್ಮರು!" ಈ ಕಾಲದಲ್ಲಿ ಮಹಾತ್ಮರು ವಿರಳ; ದುರಾತ್ಮರು ಬಹಳ!"


– ಸಿಪಿಕೆ, ದತ್ತಪೀಠ ಆಸ್ಥಾನ ವಿದ್ವಾನ್, ಮೈಸೂರು.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

ಯಾತ್ರೆ ಮುಗಿಸಿದ ಮಹಾಯಾತ್ರಿಕ ಪ್ರೊ.ಮಲೆಯೂರು ಗುರುಸ್ವಾಮಿ



ಮ.ಗು. ಅವರ ವ್ಯಕ್ತಿತ್ವ ಒಂದು ಮಗುವಿನ ರೀತಿಯೇ ಇತ್ತು. ಯಾವ ಸಾಧಕರನ್ನು ಕಂಡರೂ ಅವರಿಗೆ ಈರ್ಷೆ ಮೂಡುತ್ತಿರಲಿಲ್ಲ. ಹಿರಿಯ ಕಿರಿಯ ಎನ್ನದೇ ಎಲ್ಲರನ್ನೂ ಗರ್ವವಿಲ್ಲದೆ ಸಹಜ ಪ್ರೀತಿವಿಶ್ವಾಸದಿಂದಲೇ ಮಾತನಾಡಿಸುತ್ತಾ ಎಲ್ಲರ ಹೃದಯಕ್ಕೆ ಹತ್ತಿರವಾಗುತ್ತಿದ್ದರು. ಸಾಹಿತ್ಯ ರಾಜಕಾರಣದಿಂದ ಅಂತರ ಕಾಪಾಡಿಕೊಂಡಿದ್ದರು. ಅಧಿಕಾರದ ಮೋಹ ಅವರನ್ನು ಎಂದಿಗೂ ಕಾಡಲಿಲ್ಲ. ಅವರಿಗಿದ್ದ ಜಾತ್ಯತೀತ ನಿಲುವಿನಿಂದ ಅವರನ್ನು ಯಾವಾಗಲೂ ಅನೇಕ ಶಿಷ್ಯರು ಹಾಗೂ ಅಭಿಮಾನಿಗಳು ಸುತ್ತುವರಿಯುತ್ತಿದ್ದರು. 6 ವರ್ಷಗಳ ಹಿಂದೆ ಮೈಸೂರಿನ ಕಲಾಮಂದಿರದಲ್ಲಿ ಅವರ ಅಭಿಮಾನಿ ಬಳಗ ಆಯೋಜಿಸಿದ್ದ 'ಮಲೆಯೂರು ನಮ್ಮವರು 70' ಕಾರ್ಯಕ್ರಮದಲ್ಲಿ ಅಬಾಲವೃದ್ಧರಾಗಿ ಸಾವಿರಾರು ಜನ ಸಿನಿಮಾ ನಾಯಕನ ಕಾರ್ಯಕ್ರಮವೇನೋ ಎಂಬಂತೆ ಭಾಗವಹಿಸಿದ್ದುದು ಅವರ ಜನಪ್ರಿಯತೆಗೆ ಸಾಕ್ಷಿ.

ಮ.ಗು. ಎಂದೇ ಸಾಹಿತ್ಯ ವಲಯದಲ್ಲಿ ಖ್ಯಾತಿ ಹೊಂದಿದ್ದ, ಜನಮೆಚ್ಚಿದ ಸಾಹಿತಿ, ವಾಗ್ಮಿ, ವಿದ್ವಾಂಸರಾಗಿದ್ದ ಪ್ರೊ.ಮಲೆಯೂರು ಗುರುಸ್ವಾಮಿ ಅವರು ಕಳೆದ ವಾರ ಇಹಲೋಕಕ್ಕೆ ಇತಿಶ್ರೀ ಹಾಡಿದರು. ತಮ್ಮ 76ನೇ ವಯಸ್ಸಿನಲ್ಲಿ ತುಸು ಕಾಲದ ಅನಾರೋಗ್ಯ ಅನುಭವಿಸಿ ಭುವಿಗೆ ವಿದಾಯ ಹೇಳಿರುತ್ತಾರೆ. ಅವರ ಆತ್ಮೀಯರು, ಅಭಿಮಾನಿಗಳಷ್ಟೇ ಅಲ್ಲದೆ ಶಿಷ್ಯರಿಗೆ ನೆಚ್ಚಿನ ಮೇಷ್ಟ್ರನ್ನು ಕಳೆದುಕೊಂಡ ನೋವಿನ ಭಾವ ಕಾಡುತ್ತಿದೆ. ಮೈಸೂರು ಹಾಗೂ ಚಾಮರಾಜನಗರದ ಬಹುಪಾಲು ಊರುಗಳ ಇತಿಹಾಸ, ಹಿನ್ನೆಲೆಯನ್ನು ಅರಿತಿದ್ದ ಜ್ಞಾನಗಣಿ ಅವರಾಗಿದ್ದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದರು. 'ಪ್ರಸಾದ' ಸಂಚಿಕೆಯ ಸಂಪಾದಕರಾಗಿ ಬಹಳ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು.

ಮೂಲತಃ ಚಾಮರಾಜನಗರ ತಾಲೂಕು ಮಲೆಯೂರು ಗ್ರಾಮದವರಾಗಿದ್ದ ಮ.ಗು. ಅವರು ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲೊಂದಾದ ಜೆಎಸ್‌ಎಸ್ ಸಂಸ್ಥೆಯಲ್ಲಿ ಸುಮಾರು ಮೂರು ದಶಕಗಳಿಗೂ ಅಧಿಕ ಕಾಲ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ಮ.ಗು. ಅವರು ವಿದ್ಯಾರ್ಥಿಗಳ ಪಾಲಿಗೆ ಕೇವಲ ತರಗತಿ ಕೊಠಡಿಯಲ್ಲಿ ಅಧ್ಯಾಪಕರಾಗದೆ ಅಚ್ಚುಮೆಚ್ಚಿನ ಗುರುಗಳಾಗಿದ್ದರು. ಮೇಷ್ಟ್ರಗಿರಿಗೆ ಸ್ಟಾರ್‌ಗಿರಿ ತಂದುಕೊಟ್ಟ ಕೀರ್ತಿ ಈ ಕನ್ನಡ ಮೇಷ್ಟ್ರಿಗೆ ಸಲ್ಲಬೇಕು. ಕನ್ನಡ ಸಾಹಿತ್ಯದ ಕುರಿತಾಗಿ ಅವರಿಗಿದ್ದ ಅರಿವು ಅಪಾರ. ಅವರ ಜ್ಞಾನದ ಆಳ–ಅಗಲ ಅವರ ಉಪನ್ಯಾಸಗಳಲ್ಲಿ ವ್ಯಕ್ತವಾಗುತ್ತಿತ್ತು. ವಿದ್ಯಾರ್ಥಿಗಳಿಗೆ ಅವರು ಕೇವಲ ಪಠ್ಯ ಬೋಧನೆ ಮಾಡಿ ಹೆಸರಾದವರಲ್ಲ, ಜೀವನ ಪಾಠ ಮಾಡಿದ್ದಕ್ಕೆ ಅವರ ಹೆಸರು ವೃತ್ತಿಯಿಂದ ನಿವೃತ್ತಿಯಾದ ನಂತರವೂ ಚಿರಸ್ಥಾಯಿಯಾಗಿದೆ. ಅವರ ಪಾಠ ಕೇಳಲು ತರಗತಿಗೆ ಸಂಬಂಧಿಸಿದ ವಿದ್ಯಾರ್ಥಿಗಳಲ್ಲದೆ ಬೇರೆ ತರಗತಿಗಳ ವಿದ್ಯಾರ್ಥಿಗಳು ಸಹ ಬರುತ್ತಿದ್ದರು ಎಂಬುದು ಅವರ ಪಾಠ ಬೋಧನೆ ಶೈಲಿಯ ಜನಪ್ರಿಯತೆಗೆ ಸಾಕ್ಷಿಯಾಗಿತ್ತು. ಅವರು ತಮ್ಮ ಜೀವಿತಾವಧಿಯಲ್ಲಿ ಕೋಟಿಗಟ್ಟಲೆ ಆಸ್ತಿಪಾಸ್ತಿ ಮಾಡಲಿಲ್ಲ, ಆದರೆ ಶಿಷ್ಯಕೋಟಿಯನ್ನು ಸಂಪಾದಿಸಿದ್ದರು. ಒಬ್ಬ ಮೇಷ್ಟ್ರಿಗೆ ಇದಕ್ಕಿಂತ ದೊಡ್ಡ ಆಸ್ತಿ ಮತ್ತೊಂದಿಲ್ಲ ಎಂದು ಪ್ರೊಫೆಸರ್ ನಂಬಿದ್ದರು.

ಸಾಹಿತಿಗಳಾಗಿ ತಮ್ಮ ಕೃತಿಗಳ ಮೂಲಕ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಿದ್ದರು. ಅವರ ಕೃತಿಗಳಾದ ಮಹಾಯಾತ್ರಿಕ (ಮಲೆ ಮಹದೇಶ್ವರರನ್ನು ಕುರಿತ ಚಾರಿತ್ರಿಕ ಕಾದಂಬರಿ, 1990ರಲ್ಲಿ ಮೈಸೂರು ವಿ.ವಿ. ಪದವಿ ತರಗತಿಗಳ ಪಠ್ಯವಾಗಿತ್ತು), ಅಪ್ರತಿಮ ವೀರ (ಚಿಕ್ಕದೇವರಾಜ ಒಡೆಯರ ಕಾಲದ ಚಾರಿತ್ರಿಕ ಕಾದಂಬರಿ), ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ (ಸಾಮಾಜಿಕ ಕಾದಂಬರಿ), ಕಪಿಲೆ ಹರಿದಳು ಕಡಲಿಗೆ (ವಿದುಷಿ ಬೆಂಗಳೂರು ನಾಗರತ್ನಮ್ಮ ಅವರ ಜೀವನಾಧಾರಿತ ಕಾದಂಬರಿ), ಸಂಸ (ನಾಟಕಕಾರ ಸಂಸರ ಜೀವನಾಧಾರಿತ ಕಾದಂಬರಿ), ಬಂಗಾರದೊಡ್ಡಿ (ಶ್ರೀರಂಗಪಟ್ಟಣದ ಬಳಿ ಇರುವ 'ಬಂಗಾರ ದೊಡ್ಡಿ' ನಾಲೆಯ ನಿರ್ಮಾಣದ ಹಿನ್ನೆಲೆಯ ಕಾದಂಬರಿ), ಸಾಹಿತ್ಯ ಸುವರ್ಣಾವತಿ (ಚಾಮರಾಜನಗರ ಜಿಲ್ಲೆಯ ಸಾಹಿತ್ಯ ಚರಿತೆ ಬೃಹತ್ ಸಂಪುಟ) ಅಷ್ಟೇ ಅಲ್ಲದೆ ಹತ್ತಾರು ಸಂಪಾದಕ ಕೃತಿಗಳನ್ನು ರಚಿಸಿರುವುದು ಅವರ ಪ್ರತಿಭೆಗೆ ಹಾಗೂ ಸಾಹಿತ್ಯ ಪ್ರೀತಿಗೆ ಹಿಡಿದ ಕೈಗನ್ನಡಿ. ಚಾಮರಾಜನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಒಂಬತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದನ್ನು ಸ್ಮರಿಸಬಹುದು. ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಮಹಾಕವಿ ಷಡಕ್ಷರ ದೇವ ಸ್ಮಾರಕ ಪ್ರಶಸ್ತಿ, 'ಮಹಾಮನೆ' ಅಭಿನಂದನಾ ಗ್ರಂಥ, ಸಪ್ನ ಬುಕ್ ಹೌಸ್ ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ ಅನೇಕ ಪುರಸ್ಕಾರಗಳು ಲಭಿಸಿವೆ. ಅವರಿಗೆ ಸಂದ ಪ್ರಶಸ್ತಿಗಳಿಂದ ಪ್ರಶಸ್ತಿಗಳಿಗೆ ಗೌರವ ಬಂದಿದೆ ಎಂದರೆ ಅತಿಶಯೋಕ್ತಿಯಲ್ಲ.

ಮ.ಗು. ಅವರ ವ್ಯಕ್ತಿತ್ವ ಒಂದು ಮಗುವಿನ ರೀತಿಯೇ ಇತ್ತು. ಯಾವ ಸಾಧಕರನ್ನು ಕಂಡರೂ ಅವರಿಗೆ ಈರ್ಷೆ ಮೂಡುತ್ತಿರಲಿಲ್ಲ. ಹಿರಿಯ ಕಿರಿಯ ಎನ್ನದೇ ಎಲ್ಲರನ್ನೂ ಗರ್ವವಿಲ್ಲದೆ ಸಹಜ ಪ್ರೀತಿ ವಿಶ್ವಾಸದಿಂದಲೇ ಮಾತನಾಡಿಸುತ್ತಾ ಎಲ್ಲರ ಹೃದಯಕ್ಕೆ ಹತ್ತಿರವಾಗುತ್ತಿದ್ದರು. ದ್ವೇಷ ಸಾಧಿಸುವ ಮನುಷ್ಯರೂ ಆಗಿರಲಿಲ್ಲ. ಸಾಹಿತ್ಯ ರಾಜಕಾರಣದಿಂದ ಅಂತರ ಕಾಪಾಡಿಕೊಂಡಿದ್ದರು. ಅಧಿಕಾರದ ಮೋಹ ಅವರನ್ನು ಎಂದಿಗೂ ಕಾಡಲಿಲ್ಲ. ಈ ಭಾಗದ ಪ್ರಭಾವಿ ರಾಜಕಾರಣಿಗಳ ಜೊತೆ ಒಡನಾಟ ವಿದ್ದರೂ ಅವರ ಶಿಫಾರಸ್ಸು ಬಳಸಿ ಅಧಿಕಾರ ಅರಸಿ ಹೋಗದೇ ಉಳಿದ ಸಜ್ಜನರು ಅವರು. ಅವರು ಮನಸ್ಸು ಮಾಡಿದ್ದರೆ ಪ್ರಾಧಿಕಾರದ ಅಧ್ಯಕ್ಷರಾಗಲು ಒಂದು ದೂರವಾಣಿ ಕರೆ ಸಾಕಾಗಿತ್ತು. ಆದರೆ ಯಾವುದನ್ನು ವಾಮಮಾರ್ಗದಲ್ಲಿ ಒಲಿಸಿಕೊಳ್ಳುವ ಮನಸ್ಸನ್ನು ಅವರು ಎಂದಿಗೂ ಮಾಡಲಿಲ್ಲ. ಅವರಿಗಿದ್ದ ಜಾತ್ಯತೀತ ನಿಲುವಿನಿಂದ ಅವರನ್ನು ಯಾವಾಗಲೂ ಅನೇಕ ಶಿಷ್ಯರು ಹಾಗೂ ಅಭಿಮಾನಿಗಳು ಸುತ್ತುವರಿಯುತ್ತಿದ್ದರು. 6 ವರ್ಷಗಳ ಹಿಂದೆ ಮೈಸೂರಿನ ಕಲಾಮಂದಿರದಲ್ಲಿ ಅವರ ಅಭಿಮಾನಿ ಬಳಗ ಆಯೋಜಿಸಿದ್ದ 'ಮಲೆಯೂರು ನಮ್ಮವರು 70' ಕಾರ್ಯಕ್ರಮದಲ್ಲಿ ಅಬಾಲವೃದ್ಧರಾಗಿ ಸಾವಿರಾರು ಜನ ಸಿನಿಮಾ ನಾಯಕನ ಕಾರ್ಯಕ್ರಮವೇನೋ ಎಂಬಂತೆ ಭಾಗವಹಿಸಿದ್ದುದು ಅವರ ಜನಪ್ರಿಯತೆಗೆ ಸಾಕ್ಷಿ.

ಮ.ಗು. ಅವರ ಉಪಸ್ಥಿತಿ ಕಾರ್ಯಕ್ರಮಗಳಿಗೆ ಒಂದು ರೀತಿಯ ವಿಶೇಷವಾದ ಮೆರುಗನ್ನು ತರುತ್ತಿತ್ತು. ಅವರ ಭಾಷಣ ಹಾಗೂ ಉಪನ್ಯಾಸ ಎಂದರೆ ಸಾಹಿತ್ಯ ಪ್ರಿಯರು ಅಷ್ಟೇ ಅಲ್ಲ ಸಾಮಾನ್ಯ ಜನರೂ ಆಕರ್ಷಿತರಾಗುತ್ತಿದ್ದರು. ಅವರ ಭಾಷಣ ಕೇಳುವುದೇ ಒಂದು ಸ್ವಾರಸ್ಯ. ಹಾಸ್ಯಲೇಪಿತ ಮಾತುಗಳಿಂದ ಗಂಭೀರವಾದ ವಿಷಯಗಳನ್ನು ಕೇಳುಗರಿಗೆ ಮನನ ಮಾಡುವ ಕಲೆ ಅವರಿಗೆ ಕರಗತವಾಗಿತ್ತು. ಅವರ ಮಾತುಗಳನ್ನು ಜನರು ಆಸಕ್ತಿಯಿಂದ ಆಲಿಸುವಂತೆಯೇ ಅವರೂ ಸಹ ಜನರ ಮಾತುಗಳನ್ನು ಆಸಕ್ತಿಯಿಂದ ಆಲಿಸುತ್ತಿದ್ದರು. ಯಾವುದಾದರೂ ಮಾಹಿತಿ ತಿಳಿಯಬೇಕಾದರೆ ಮಗುವಿನಂತೆಯೇ ಕುತೂಹಲಕಾರಿಯಾಗಿ, ಮೈಯೆಲ್ಲಾ ಕಣ್ಣಾಗಿ ಶ್ರವಣ ಮಾಡುತ್ತಿದ್ದರು.

ಅವರ ಜೀವನಪ್ರೀತಿಯೇ ಅನೇಕರಿಗೆ ಆದರ್ಶ. ಸರಳ ಸಜ್ಜನಿಕೆಯೇ ಮಾದರಿ. ಪ್ರತಿಕ್ಷಣವನ್ನು ಆನಂದದಿಂದಲೇ ಕಳೆಯುವ ಜಾಯಮಾನದವರು ಅವರು. ಅವರು ಸಾರ್ವಜನಿಕವಾಗಿ ಕೋಪಗೊಂಡು ಮಾತನಾಡಿದ್ದನ್ನೂ ಕಂಡೇ ಇಲ್ಲ. ಸ್ಫುರದ್ರೂಪಿಯಾಗಿದ್ದ ಅವರು ಸದಾ ಹಸನ್ಮುಖಿಗಳಾಗಿಯೇ ಇರುತ್ತಿದ್ದರು. ಕಷ್ಟಕ್ಕೆ ಕುಗ್ಗದೆ ಸುಖಕ್ಕೆ ಹಿಗ್ಗದೆ ಸ್ಥಿತಪ್ರಜ್ಞತೆಯಿಂದ ಇರುತ್ತಿದ್ದ ಅವರನ್ನು ಕಂಡವರಿಗೆ ಇವರೊಬ್ಬರು ಅಪೂರ್ವ ವ್ಯಕ್ತಿತ್ವದ ವ್ಯಕ್ತಿ ಎಂದು ಆಶ್ಚರ್ಯವಾಗದೇ ಇರುತ್ತಿರಲಿಲ್ಲ. ನೇರ ನಡೆನುಡಿಗೆ ಹೆಸರಾಗಿದ್ದ ಪ್ರೊಫೆಸರ್ ಅವರು ಯಾರ ಮುಲಾಜಿಗೂ ಒಳಗಾಗುತ್ತಿರಲಿಲ್ಲ. ಹಲವು ವಿಚಾರಗಳಲ್ಲಿ ಯಾರ ಪ್ರಭಾವಕ್ಕೂ ಒಳಗಾಗದೆ ತಮ್ಮ ನಿಲುವಿಗೆ ಬದ್ಧರಾಗಿರುತ್ತಿದ್ದರು. ಯಾವುದೇ ಇಸಂಗಳಿಗೂ ಕಟ್ಟುಬೀಳದೆ ತಮ್ಮ ಅಭಿಪ್ರಾಯಗಳನ್ನು ನಿರ್ಭೀತಿಯಿಂದ ವ್ಯಕ್ತಪಡಿಸುತ್ತಿದ್ದರು. ಯಾರನ್ನೂ ಓಲೈಕೆ ಮಾಡುವ ಮರ್ಜಿಗೆ ಅವರು ಹೋಗಲೇ ಇಲ್ಲ. ಅವರ ಜನಪ್ರಿಯತೆಯನ್ನು ದುರ್ಬಳಕೆ ಮಾಡಿಕೊಳ್ಳುವ ಮಂದಿಯಿಂದ ದೂರ ಉಳಿಯುತ್ತಿದ್ದರು. ಅವರ ಜೊತೆ ಆತ್ಮೀಯವಾಗಿ ಹತ್ತು ನಿಮಿಷ ಮಾತನಾಡಿದವರು ಅವರ ಮಾತಿನ ವೈಖರಿಗೆ ಮರುಳಾಗಿ ಅವರ ಅಭಿಮಾನಿಯಾಗಿಬಿಡುತ್ತಿದ್ದರು.

ಅವರ ಅಧ್ಯಯನಶೀಲತೆ ಮಾತ್ರ ಆಶ್ಚರ್ಯ ಪಡುವಂತದ್ದು. ಇಳಿವಯಸ್ಸಿನಲ್ಲಿಯೂ ಗಂಟೆಗಟ್ಟಲೆ ಕುಳಿತು ಟಿಪ್ಪಣಿ ಮಾಡಿಕೊಳ್ಳುತ್ತಿದ್ದರು. ಅವರ ಜ್ಞಾನದ ಆಳ ತಿಳಿಯಲು ಅವರ ಕೃತಿಗಳನ್ನು ಓದಬೇಕು. ಅವರ ಚಾರಿತ್ರಿಕ ಕಾದಂಬರಿಗಳು ಅವರ ಅಧ್ಯಯನ ನಿಷ್ಠೆಯನ್ನು ಪ್ರತಿಬಿಂಬಿಸುತ್ತವೆ. ಒಂದು ಕಾದಂಬರಿ ರಚನೆಗೆ ವರ್ಷಗಳ ಕಾಲ ಹತ್ತಾರು ಗ್ರಂಥಗಳನ್ನು ಅಧ್ಯಯನ ಮಾಡಿ, ಸೂಕ್ತ ಸಿದ್ಧತೆ ನಡೆಸಿಕೊಂಡ ನಂತರವೇ ರಚನೆ ಮಾಡಿ ಪ್ರಕಟಿಸುತ್ತಿದ್ದರು. ಅವರ ಮನೆಯ ಮೂರನೇ ಮಹಡಿಯಲ್ಲಿ ಅವರ ಒಂದು ದೊಡ್ಡ ಕೊಠಡಿಯನ್ನು ಗ್ರಂಥಾಲಯಕ್ಕೆ ಮೀಸಲಿಟ್ಟಿದ್ದರು. ಇಂದು ಸಾವಿರಾರು ಪುಸ್ತಕಗಳು ಅವರ ಹಸ್ತಸ್ಪರ್ಶವಿಲ್ಲದೆ ಅನಾಥವಾಗಿವೆ. ಅವರು ಕಿರಿಯ ಬರಹಗಾರರನ್ನು ಬೆನ್ನುತಟ್ಟಿ ಪ್ರೋತ್ಸಾಹಿಸುತ್ತಿದ್ದ ರೀತಿ ಮಾತ್ರ ಮರೆಯಲಾಗದು. ಯುವ ಲೇಖಕರ ಕೃತಿಗಳಿಗೆ ಮುನ್ನುಡಿ ಅಥವಾ ಬೆನ್ನುಡಿ ಬರೆದು ಕೊಡಲು ಎಂದೂ ನಿರಾಕರಿಸಿದವರಲ್ಲ. ಕೃತಿ ಬಿಡುಗಡೆ ಕಾರ್ಯಕ್ರಮಗಳಲ್ಲಿ ಕೃತಿಯ ಓರೆಕೋರೆಗಳನ್ನು, ಒಳ್ಳೆಯ ಅಂಶಗಳನ್ನು ತಮ್ಮದೇ ಧಾಟಿಯಲ್ಲಿ ಹೇಳುತ್ತಿದ್ದರು.

ಸಾಹಿತಿಗಳೆಂದರೆ ಗಂಭೀರ ವದನರು, ಯಾರೊಂದಿಗೂ ಹೆಚ್ಚು ಬೆರೆಯರು, ತಮ್ಮ ಸ್ಥಾನಮಾನವೇ ಬೇರೆ ಎಂದು ಬೀಗುತ್ತಾ ಸಾಮಾನ್ಯ ಜನರಿಂದ ಅಂತರ ಕಾಪಾಡಿಕೊಳ್ಳುವವರು ಎಂಬುದು ಸಾಮಾನ್ಯರಿಗಿರುವ ಭಾವನೆ. ಆದರೆ ಅವೆಲ್ಲವುಗಳನ್ನು ಬದಿಗಿಟ್ಟು 'ಎಲ್ಲರೊಳಗೊಂದಾಗು ಮಂಕುತಿಮ್ಮ' ಎಂಬ ಮಾತಿಗೆ ಅನ್ವರ್ಥದಂತೆ ಅಸಾಮಾನ್ಯರಾದರೂ ಸಾಮಾನ್ಯರಂತೆ ಬಾಳಿಬದುಕಿದವರು ಮ.ಗು. ಅವರು. ಅವರು ಬೇರೆ ಸಾಹಿತಿಗಳಿಗಿಂತ ಭಿನ್ನವಾಗಿ ಕಾಣುತ್ತಿದ್ದುದು ಅವರ ಈ ನಡೆಯಿಂದಲೇ ಅನ್ನಬಹುದು. ಗ್ರಾಮೀಣ ಭಾಗದಿಂದ ಬಂದವರು ಸಿಕ್ಕಾಗ ಹಳ್ಳಿ ಸೊಗಡಿನ ಭಾಷೆಯಲ್ಲಿ ಸೊಗಸಾಗಿ ಹರಟುತ್ತಿದ್ದರು. ಅಷ್ಟೇ ಅಲ್ಲ ಅವರ ಮಾತುಗಳಲ್ಲಿ ಯಾರೂ ಕೇಳದಂತಹ ಗಾದೆ ಮಾತುಗಳು ಕೇಳಿಬರುತ್ತಿದ್ದವು.

ಸುತ್ತೂರು ಮಠದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಮ.ಗು. ಅವರ ನಿಧನಕ್ಕೆ ವ್ಯಕ್ತಪಡಿಸಿರುವ ಸಂತಾಪ ನುಡಿಗಳು ಅರ್ಥಪೂರ್ಣವಾಗಿವೆ. 'ಶ್ರೇಷ್ಠ ವಿದ್ವಾಂಸರಾಗಿದ್ದ ಅವರು ವಿದ್ಯಾರ್ಥಿಗಳ ಪಾಲಿಗೆ ಕೇವಲ ಅಧ್ಯಾಪಕರಾಗಿರಲಿಲ್ಲ, ಅವರ ಬದುಕನ್ನು ರೂಪಿಸುವ ಶಿಲ್ಪಿಗಳಾಗಿದ್ದರು. 'ವಕ್ತಾ ದಶಸಹಸ್ರೇಷು' ಎಂಬ ಮಾತಿನಂತೆ ಅಪೂರ್ವ ವಾಗ್ಮಿಗಳಾಗಿದ್ದರು. ಸಾಹಿತಿಗಳಾಗಿಯೂ ತುಂಬಾ ಹೆಸರು ಗಳಿಸಿದ್ದರು. ಇಂಥ ಬಹುಮುಖ ಪ್ರತಿಭಾಶಾಲಿಗಳ ಅಗಲಿಕೆಯಿಂದ ಮೈಸೂರು ನಗರದ ಸಾರಸ್ವತ ಲೋಕಕ್ಕೆ ಕೊರತೆಯಾಗಿದೆ. ಈ ನಿರ್ವಾತವನ್ನು ತುಂಬುವುದು ಕಷ್ಟಸಾಧ್ಯ" ಎಂದು ಪೂಜ್ಯರು ತಮ್ಮ ಸಂತಾಪ ಸಂದೇಶದಲ್ಲಿ ತಿಳಿಸಿದ್ದಾರೆ. ನಿಜಕ್ಕೂ ಇದು ನಿರ್ವಾತವೇ ಸರಿ.

ಪ್ರೊಫೆಸರ್ ಅವರ ಕಾಯ ಭೂಮಿಯಿಂದ ಮರೆಯಾಗಿರಬಹುದು, ಆದರೆ ಅವರ ಕೃತಿಗಳು ಜನಮಾನಸದಲ್ಲಿ ಉಳಿದು ಅವರನ್ನು ಜೀವಂತವಾಗಿರಿಸುವುದರಲ್ಲಿ ಅನುಮಾನವಿಲ್ಲ. ಅವರ ಅಭಿಮಾನಿಗಳ ಹಾಗೂ ಶಿಷ್ಯರ ಹೃದಯದಲ್ಲಿ ಅವರಿಗೆ ಕೊಟ್ಟ ಗುರುವಿನ ಸ್ಥಾನ ಶಾಶ್ವತವಾಗಿರುತ್ತದೆ. ಎರಡು ದಶಕಗಳ ಕಾಲ ಅವರ ಒಡನಾಟ ನನ್ನಂತ ಲೇಖಕನಿಗೆ ದೊರಕಿದ್ದು ನನ್ನ ಭಾಗ್ಯ ಎಂದು ಭಾವಿಸುತ್ತೇನೆ. ಅವರಿಗೆ ಅಕ್ಷರ ನಮನಗಳನ್ನು ಸಲ್ಲಿಸುತ್ತಾ, ಪ್ರೊಫೆಸರ್ ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ಪ್ರಾರ್ಥಿಸುತ್ತಾ ಹಾಗೂ ಅವರ ಕುಟುಂಬ ವರ್ಗದವರಿಗೆ ಅವರ ಅಗಲಿಕೆ ನೋವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಹಾರೈಸೋಣ.

ಪದ ತಾಂಬೂಲ : 'ಬದುಕನ್ನು ಬಂದಂತೆ ಸ್ವೀಕರಿಸಿ ಆನಂದಿಸು' **–ಮಲೆಯೂರು ಗುರುಸ್ವಾಮಿ**

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ

ಸಾಧಕ ಮಹಿಳೆಯರಿಗೆ ಸನ್ಮಾನ



ಮೈಸೂರು, ಮಾ.12(ಎಂಕೆ)– ಮಾನವ ಹಕ್ಕುಗಳು ಮತ್ತು ಭ್ರಷ್ಟಾಚಾರ ನಿಗ್ರಹ ವೇದಿಕೆ ವತಿಯಿಂದ 'ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ' ಅಂಗವಾಗಿ ಸಾಧಕ ಮಹಿಳೆಯರನ್ನು ಸನ್ಮಾನಿಸಲಾಯಿತು.

ನಗರದ ಬನ್ನಿಮಂಟಪದ ಹೈವೆ ವೃತ್ತದ ಸಮೀಪದಲ್ಲಿರುವ ಕುಮಾರ್ಸ್ ದಿ ವೈಟ್‌ಹೌಸ್ ಹೋಟೆಲ್‌ನಲ್ಲಿ ಆಯೋಜಿಸಿದ್ದ 'ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ' ಹಾಗೂ ಅಭಿನಂದನಾ ಸಮಾರಂಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಶಿಲ್ಪ ಎಸ್.ಹಿರೆಮಠ್, ಡಾ.ಕೆ. ಅಪರ್ಣ ರಾವ್, ಎಂ.ಎಸ್. ಶಶಿಕಲಾ ಗೌಡ, ಅನುಪಮ ಬಿ. ಪಂಡಿತ್, ಕೆ.ಎಸ್. ಇಂದ್ರಮ್ಮ, ಲತಾ ನಾರಾಯಣ್, ಡಿ. ಸುಜಾತ ಹಾಗೂ ಆರ್.ಎಂ. ಕಾಂಚನ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಅಭಿನಂದನೆ ಸ್ವೀಕರಿಸಿದ ಮಹಿಳಾ ಸಾಧಕರು ಪ್ರಸ್ತುತ ಸಮಾಜದಲ್ಲಿ ಮಹಿಳೆಯರು ಎದುರಿಸುತ್ತಿರುವ ಸವಾಲುಗಳ ಬಗ್ಗೆ ತಿಳಿಸಿಕೊಟ್ಟರಲ್ಲದೆ ಕಾನೂನು ಅರಿವು ಮೂಡಿಸಿದರು. ಮಾನವ ಹಕ್ಕುಗಳು ಮತ್ತು ಭ್ರಷ್ಟಾಚಾರ ನಿಗ್ರಹ ವೇದಿಕೆ ರಾಜ್ಯಾಧ್ಯಕ್ಷ ಸಿ.ವಿ. ಶ್ರೀನಾಥ್ ಶೆಟ್ಟಿ, ಮಹಿಳಾ ಅಧ್ಯಕ್ಷೆ ಡಾ.ಸುಜಾತ ಶೆಟ್ಟಿ, ಪಶ್ಚಿಮ ವಿಭಾಗದ ಅಧ್ಯಕ್ಷ ಡಿ.ನರಸಿಂಹ, ಸುಮನ್ ಡಿ.ಗುಪ್ತಾ, ಅಮೃತ, ಸೋಹನ್ ಕುಮಾರ್, ಪ್ರವೀಣ್ ಕುಮಾರ್ ಮತ್ತಿತರರಿದ್ದರು.

ಜಗತ್ತಿನ ಮೊದಲ ಕನ್ನಡದ ಕವಯತ್ರಿ ಅಕ್ಕಮಹಾದೇವಿ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ವಚನ ಗಾಯನ ಕಾರ್ಯಕ್ರಮ

ಮೈಸೂರು, ಮಾ.12(ಎಂಕೆ)– ಮೈಸೂರಿನ ಆಲನಹಳ್ಳಿ ಬಡಾವಣೆಯಲ್ಲಿರುವ ಶ್ರೀ ವಾಸವಿ ಶಾಂತಿಧಾಮದಲ್ಲಿ ಜಿಲ್ಲಾ ಹಾಗೂ ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ 'ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ' ಹಾಗೂ 'ವಚನ ಗಾಯನ' ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಸಹಾಯಕ ಕಾರ್ಮಿಕ ಆಯುಕ್ತೆ ನಾಜಿಯಾ ಸುಲ್ತಾನ್ ಮಾತನಾಡಿ, ಅಕ್ಕ ಮಹಾದೇವಿಯವರು ಈ ಜಗತ್ತಿನ ಮೊದಲ ಕವಯತ್ರಿ ಹಾಗೂ ಕನ್ನಡದವರೆಂಬುದೇ ನಮ್ಮ ಹೆಮ್ಮೆ ಎಂದರಲ್ಲದೆ ಅನುಭವ ಮಂಟಪದಲ್ಲಿದ್ದ ಸಮಾನತೆ ಮತ್ತು ವಿಚಾರಗಳನ್ನು ತಿಳಿಸಿಕೊಟ್ಟರು. ಬಳಿಕ ಚೂಡಾಮಣಿ ಮತ್ತು ಬಾಗಳಿ ಮಹೇಶ್ ಅವರು ವಚನ ಗಾಯನ ಕಾರ್ಯಕ್ರಮ ನೀಡಿ, ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ರಾಜ್ಯಾಧ್ಯಕ್ಷೆ ಯಮುನಾ, ಡಾ.ಹೆಳವರ ಹುಂಡಿ ಸಿದ್ದಪ್ಪ, ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ದೇವರಾಜು ಪಿ. ಚಿಕ್ಕಹಳ್ಳಿ, ಶ್ರೀ ವಾಸವಿ ಶಾಂತಿಧಾಮ ಸಂಘಟಕ ಮೋಹನ್ ರಾಜು ಮತ್ತಿತರರಿದ್ದರು.



ಆಲನಹಳ್ಳಿ ಬಡಾವಣೆಯಲ್ಲಿರುವ ಶ್ರೀ ವಾಸವಿ ಶಾಂತಿಧಾಮದಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ವಚನ ಗಾಯನ ಕಾರ್ಯಕ್ರಮವನ್ನು ಸಹಾಯಕ ಕಾರ್ಮಿಕ ಆಯುಕ್ತೆ ನಾಜಿಯಾ ಸುಲ್ತಾನ್ ಉದ್ಘಾಟಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಪಕ್ಷಿಗಳ ದಾಹ ತಣಿಸಲು ಮುಂದಾದ ಕಾಲೇಜು ವಿದ್ಯಾರ್ಥಿಗಳು

ಹಳೇ ಹೆಲ್ಮೆಟ್ ಬಳಸಿ ನೀರು- ಆಹಾರ ಪೂರೈಕೆ



ಮೈಸೂರು, ಮಾ.12(ಜಿಎ)– ಹಳೆಯ ಹೆಲ್ಮೆಟ್‌ಗಳನ್ನು ಬಳಸಿ ಬಿಸಿಲ ಬೇಗೆಯಿಂದ ನಲುಗುತ್ತಿರುವ ಪಕ್ಷಿಗಳ ದಾಹ ನೀಗಿಸಲು ಮೈಸೂರಿನ ವಿದ್ಯಾರ್ಥಿಗಳು ಮುಂದಾಗಿದ್ದಾರೆ.

ಮೈಸೂರಿನ ಹೆಬ್ಬಾಳದಲ್ಲಿರುವ ಶೇಷಾದ್ರಿಪುರಂ ಕಾಲೇಜಿನ ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಹಳೆ ಹೆಲ್ಮೆಟ್‌ಗಳನ್ನು ಮರು ಬಳಕೆ ಮಾಡುವ ಮೂಲಕ ಬೇಸಿಗೆಯಲ್ಲಿ ಪಕ್ಷಿಗಳಿಗೆ ನೀರು ಮತ್ತು ಆಹಾರ ನೀಡಲು ಸಿದ್ಧತೆ ನಡೆಸಿದ್ದಾರೆ.

ಬೇಸಿಗೆ ಕಾಲ ಆರಂಭವಾಯಿತು ಎಂದರೆ, ನೀರಿಗೆ ಹಾಹಾಕಾರ ಹೆಚ್ಚಾಗಿ ಜನರು ಸೇರಿದಂತೆ ಪ್ರಾಣಿ, ಪಕ್ಷಿಗಳು ಪರದಾಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇಂತಹ ಸಂದರ್ಭದಲ್ಲಿ ಜನರು ಪಾಡು ಹೇಗೋ ಆಗುತ್ತದೆ. ಆದರೆ, ಮೂಕ ಪ್ರಾಣಿ, ಪಕ್ಷಿಗಳು ತಮ್ಮ ನೀರಿನ ಸಮಸ್ಯೆಯನ್ನು ಯಾರ ಬಳಿ ಹೇಳುತ್ತವೆ. ಅದಕ್ಕಾಗಿ ಕೆಲವು ಪ್ರಾಣಿ, ಪಕ್ಷಿ ಪ್ರಿಯರು ಬೇಸಿಗೆಯಲ್ಲಿ ಇವುಗಳಿಗೆ ಅನುಕೂಲವಾಗುವಂತೆ ನೀರು, ಆಹಾರದ ವ್ಯವಸ್ಥೆ ಕಲ್ಪಿಸುತ್ತಾರೆ. ಅದರಂತೆ ವಿದ್ಯಾರ್ಥಿಗಳು ನೂತನ ಉಪಾಯ ಬಳಸಿ ಪಕ್ಷಿಗಳ ನೆರವಿಗೆ ಮುಂದಾಗಿದ್ದಾರೆ.

ಕಾಲೇಜಿನ ಎನ್‌ಎಸ್‌ಎಸ್‌ನ ಕಾರ್ಯಕ್ರಮ ಅಧಿಕಾರಿಯಾದ ರಾಘವೇಂದ್ರ ಅವರಿಗೆ ಹಳೆ ಹೆಲ್ಮೆಟ್ ಬಳಸಿ ಪಕ್ಷಿಗಳಿಗೆ ನೀರು, ಆಹಾರದ ವ್ಯವಸ್ಥೆ ಮಾಡಬಹುದು ಎಂಬ ಆಲೋಚನೆ ಮೂಡಿದ್ದು, ನಂತರ ವಿದ್ಯಾರ್ಥಿಗಳಿಗೆ ಅವರ ಮಾರ್ಗದರ್ಶನದಲ್ಲಿ ಪಕ್ಷಿಗಳಿಗೆ ಅನುಕೂಲವಾಗುವಂತೆ ನೀರಿನ ವ್ಯವಸ್ಥೆ ಮಾಡುತ್ತಿದ್ದಾರೆ.

ಹಳೆ ಹೆಲ್ಮೆಟ್ ಸಂಗ್ರಹ: ಮೊದಲು ಹೊಸ ಪ್ಲಾಸ್ಟಿಕ್ ಡಬ್ಬಗಳನ್ನು ಬಳಸಿ, ಪಕ್ಷಿಗಳಿಗೆ ನೀರು ಒದಗಿಸಲು ಆಲೋಚನೆ ಮಾಡಲಾಗಿತ್ತು. ಆದರೆ, ಅದನ್ನು ಯಾರಾದರೂ ಕಳವು ಮಾಡುತ್ತಾರೆಂಬ ಭೀತಿಯಿಂದ ಪೊಲೀಸ್ ಠಾಣೆ, ಹೆಲ್ಮೆಟ್ ಮಾರಾಟ ಅಂಗಡಿ ಮತ್ತು ರೈಲ್ವೇ ನಿಲ್ದಾಣ ಸೇರಿದಂತೆ ಇತರ ಕಡೆ ಇರುವ ಪಾರ್ಕಿಂಗ್ ಸ್ಥಳಗಳಲ್ಲಿ ಹಳೆ ಹೆಲ್ಮೆಟ್ ಸಂಗ್ರಹ ಮಾಡಿ ಅದನ್ನು ಬಳಸಿಕೊಂಡಿದ್ದಾರೆ.

ಶುಚಿತ್ವಕ್ಕೆ ಪ್ರಾಮುಖ್ಯತೆ: ವಿವಿಧೆಡೆ ಸಂಗ್ರಹಿಸಿದ ಹೆಲ್ಮೆಟ್‌ಗಳನ್ನು ಕಾಲೇಜಿಗೆ ತಂದು ಹೆಲ್ಮೆಟ್ ಒಳಗ ಭಾಗದಲ್ಲಿರುವ ಸ್ಪಂಜ್‌ಗಳನ್ನು ತೆಗೆದು ಅದನ್ನು ಬಟ್ಟಲು ಆಕಾರದಲ್ಲಿ ಕಟ್ ಮಾಡಿ ನಂತರ ಪಕ್ಷಿಗಳಿಗೆ ಯಾವುದೇ ಸಮಸ್ಯೆ ಆಗದಂತೆ ನೀರಿನಿಂದ ಸ್ವಚ್ಛವಾಗಿ ತೊಳೆಯುವ ಮೂಲಕ ಶುಚಿತ್ವಕ್ಕೆ ಪ್ರಾಮುಖ್ಯತೆ ನೀಡಿದ್ದಾರೆ.

ಪಾರ್ಕ್‌ಗಳಲ್ಲಿ ಅಳವಡಿಕೆ: ಕಾಲೇಜಿನ ವತಿಯಿಂದ ಹೆಬ್ಬಾಳಿನ ಲಕ್ಷ್ಮಿಕಾಂತನಗರದಲ್ಲಿರುವ ಕೆಲ ಪಾರ್ಕ್‌ಗಳನ್ನು ದತ್ತು ಪಡೆದುಕೊಂಡು ಅವನ್ನು ನಿರ್ವಹಣೆ ಮಾಡುತ್ತಿದ್ದಾರೆ. ದಾರ ಬಳಸಿಕೊಂಡು ಪಾರ್ಕ್‌ನಲ್ಲಿರುವ ಮರಕ್ಕೆ ಬಟ್ಟಲು ಆಕಾರದಲ್ಲಿರುವ ಹೆಲ್ಮೆಟ್‌ಗಳನ್ನು ಕಟ್ಟಿ ಅದಕ್ಕೆ ನಿತ್ಯವೂ ನೀರು, ಆಹಾರ ಹಾಕುವ ಮೂಲಕ ಕಾಲೇಜಿನ ವಿದ್ಯಾರ್ಥಿಗಳು ಬಿಸಿಲ ಬೇಗೆಗೆ ನಲುಗಿರುವ ಪಕ್ಷಿಗಳ ದಾಹ ನೀಗಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ.

ಗ್ಯಾಸ್ ಸರಬರಾಜು ಶುಲ್ಕ ಆದೇಶ ಮರು ಪರಿಶೀಲನೆ ಒತ್ತಾಯ

ಮೈಸೂರು, ಮಾ.12(ಎಸ್‌ಪಿಎನ್)– ರಾಜ್ಯ ಸರ್ಕಾರ ನಿಗದಿ ಮಾಡಿರುವ ಅಡುಗೆ ಅನಿಲ ಸರಬರಾಜು ವಿತರಣಾ ಶುಲ್ಕ ಪಡೆಯುವಂತೆ ಮೈಸೂರು ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ 28.02.2023 ರಂದು ಹೊರಡಿಸಿರುವ ಆದೇಶವನ್ನು ಮರು ಪರಿಶೀಲಿಸುವಂತೆ ಎಫ್‌ಎಲ್‌ಡಿಐ ಎಲ್‌ಪಿಜಿ ವಿತರಕರ ಹಾಗೂ ಹೆಚ್.ಪಿ.ಗ್ಯಾಸ್ ವಿತರಕರ ಸಂಘದ ರಾಜ್ಯ ಸಂಚಾಲಕ ಮೆಹುಲ್ ಜೆ ಪಟೇಲ್ ಪತ್ರಿಕಾ ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ. ಮೈಸೂರು ಜಿಲ್ಲಾ ಸರ್ಕಾರಿ ಕಛೇರಿಯಿಂದ ಹೊರಡಿಸಲಾದ ಗ್ಯಾಸ್ ಸಿಲಿಂಡರ್ ವಿತರಣಾ ಶುಲ್ಕವನ್ನು ಪಡೆಯುವಂತೆ ಮೈಸೂರು ಜಿಲ್ಲಾಧಿಕಾರಿಗಳ ಕಾರ್ಯಾಲಯ ಆದೇಶ ಹೊರಡಿಸಿದೆ. ಈ ಆದೇಶ 11.10.2022ರಂದು ಹೈಕೋರ್ಟ್ ನೀಡಿರುವ ಮಧ್ಯಂತರ ಆದೇಶಕ್ಕೆ ವಿರುದ್ಧವಾಗಿದ್ದು, ಈ ಕೂಡಲೇ 28.02.2023ರ ಆದೇಶವನ್ನು ಮರು ಪರಿಶೀಲಿಸುವಂತೆ ಮನವಿ ಮಾಡಿದ್ದಾರೆ. ಗ್ಯಾಸ್ ಸಿಲಿಂಡರ್ ವಿತರಣಾ ಕೇಂದ್ರದಿಂದ ಪ್ರತಿ 5 ಕಿ.ಮೀ ಯೊಳಗೆ ಶಾಲೆ ಅಥವಾ ಮನೆಗಳಿಗೆ ಉಚಿತವಾಗಿ ಸಿಲಿಂಡರ್ ಸರಬರಾಜು ಮಾಡಲಾಗುವುದು. 5 ಕಿ.ಮೀ ಮೇಲ್ಪಟ್ಟ ಶಾಲೆ/ಮನೆಗಳಿಗೆ ಕಿ.ಮೀಗೆ 1.60 ರೂ.ನಂತೆ ಗ್ರಾಹಕರಿಂದ ವಿತರಣಾ ಶುಲ್ಕ ಪಡೆಯಲು 06.09.2006 ರಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿತು. ಇದೇ ಆದೇಶವನ್ನು ಮುಂದುವರೆಸುವಂತೆ ಮೈಸೂರಿನ ಎಲ್‌ಪಿಜಿ ವಿತರಕರು, ಹೆಚ್.ಪಿ.ಗ್ಯಾಸ್ ವಿತರಕರು, ಐಪಿಸಿಎಲ್ ಎಲ್‌ಪಿಜಿ ವಿತರಕರ ಸಂಘದ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.



ಮೈಸೂರು ತಾಲೂಕು ಹುಯಿಲಾಳು ಗ್ರಾಮದ ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ಆರ್.ಧ್ರುವನಾರಾಯಣ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ, ಸವಿತಾ ಸಮಾಜ ನಗರಾಧ್ಯಕ್ಷ ಹರೀಶ್ ರೆಡ್ಡಿ, ಸಾಹುಕಾರ ಹುಂಡಿ ಗೋಪಾಲ್ ಗೌಡ, ಸೈಯದ್ ಅಹ್ಮದ್, ಮಂಜು ಉಪಸ್ಥಿತರಿದ್ದರು.



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಕಾನೂನು ಕಾಲೇಜಿನ ವಿದ್ಯಾರ್ಥಿಗಳಾದ ಅಮೂಲ್ಯ ಮತ್ತು ನಿಕಿತಾ, ರೋಹನ್ ವಿ ಗಂಗಾಡ್ಕರ್ ರಾಷ್ಟ್ರೀಯ ಮಟ್ಟದ ಮೂಟ್ ಕೋರ್ಟ್ ಸ್ಪರ್ಧೆಯ ವಿಜೇತರಾಗಿದ್ದಾರೆ. ಇತ್ತೀಚೆಗೆ ಬೆಂಗಳೂರಿನಲ್ಲಿ ರೇವಾ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಲೀಗಲ್ ಸ್ಟಡೀಸ್ ಆಯೋಜಿಸಿದ್ದ ಮೂರು ದಿನಗಳ ಸ್ಪರ್ಧೆಯಲ್ಲಿ ದೇಶದ ವಿವಿಧ ರಾಜ್ಯಗಳ 27 ತಂಡಗಳು ಭಾಗವಹಿಸಿದ್ದವು. ವಿಜೇತರು 20 ಸಾವಿರ ರೂ ನಗದು ಬಹುಮಾನವನ್ನು ಪಡೆದಿದ್ದಾರೆ. ಹೈಕೋರ್ಟ್ ನ್ಯಾಯಾಧೀಶರಾದ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರ್ ಮತ್ತು ನ್ಯಾಯಮೂರ್ತಿ ಇ. ಸೀತಾರಾಮಯ್ಯ ಇಂದಿರೇಶ್ ಅವರು ಬಹುಮಾನ ವಿತರಣೆ ಮಾಡಿದರು. ವಿಜೇತ ವಿದ್ಯಾರ್ಥಿಗಳನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರೊ ಸುರೇಶ್ ಅಭಿನಂದಿಸಿದ್ದಾರೆ.

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ ಸೋಮವಾರ 13 ಮಾರ್ಚ್ 2023

ಶಾಶ್ವತ ನೀರಾವರಿ ಯೋಜನೆಗಳಿಂದ ಸಿಎಸ್‌ಪಿಗೆ ಅಪಾರ ಜನಮನ್ನಣೆ

ಮೇಲುಕೋಟೆ ಯದುಗಿರಿ ಯತಿರಾಜ ಮಠದ ಶ್ರೀಯದುಗಿರಿ ಯತಿರಾಜ ನಾರಾಯಣಜೀಯರ್ ಸ್ವಾಮೀಜಿ





ಚಿನಕುರಳಿ, ಮಾ.12– ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು ಶಾಶ್ವತ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಅಪಾರ ಜನಮನ್ನಣೆ ಗಳಿಸಿದ್ದಾರೆ ಎಂದು ಮೇಲುಕೋಟೆ ಯದುಗಿರಿ ಯತಿರಾಜ ಮಠದ ಶ್ರೀಯದುಗಿರಿ ಯತಿರಾಜ ನಾರಾಯಣ ಜೀಯರ್ ಸ್ವಾಮೀಜಿ ತಿಳಿಸಿದರು.

ಇಲ್ಲಿಗೆ ಸಮೀಪದ ಸಣಬ ಬಳಿ ಬಳಘಟ್ಟ ಏತ ನೀರಾವರಿಯಿಂದ ತೊಣ್ಣೂರು ಕೆರೆಗೆ ಕಾವೇರಿ ಮಾತೆ ಆಗಮಿಸಿದ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಕೆರೆಗೆ ಬಾಗೀನ ಅರ್ಪಣೆ ಹಾಗೂ ಮಹಿಳಾ ಸಮಾವೇಶದಲ್ಲಿ ಅವರು ಮಾತನಾಡಿದರು.

ಶಾಸಕ ಸಿ.ಎಸ್.ಪುಟ್ಟರಾಜು ಸಣ್ಣ ನೀರಾವರಿ ಸಚಿವರಾಗಿದ್ದ ವೇಳೆ ಏತ ನೀರಾವರಿ ಯೋಜನೆ ಅನುಷ್ಠಾನಗೊಳಿಸುವ ಮೂಲಕ ಶ್ರೀರಾಮಾನುಜಾಚಾರ್ಯರ ತಪೋಭೂಮಿಯಾದ ತೊಣ್ಣೂರು ಕೆರೆಗೆ ಕಾವೇರಿ ಮಾತೆಯನ್ನು ತರುವ ಪುಣ್ಯದ ಕೆಲಸ ಮಾಡಿದ್ದಾರೆ. ಹೇಮಾವತಿಯಿಂದ ತುಂಬುತ್ತಿದ್ದ ತೊಣ್ಣೂರು ಕೆರೆಗೆ ಇದೀಗ ಕಾವೇರಿ ನದಿ ನೀರಿನಿಂದ ತುಂಬುವ ಹಾಗೆ ಮಾಡಿ ತ್ರಿವೇಣಿ ಸಂಗಮವನ್ನಾಗಿ ಮಾಡಿದ್ದಾರೆ ಎಂದು ಬಣ್ಣಿಸಿದರು.

ಕೊಡಗಿನ ಭಾಗಮಂಡಲದಲ್ಲಿ ಹುಟ್ಟುವ ಕಾವೇರಿ ಪಶ್ಚಿಮರಂಗ, ಮಧ್ಯರಂಗ ಹಾಗೂ ಆದಿರಂಗನ ಪಾದಸ್ಪರ್ಶ ಮಾಡಿ ಹರಿಯುತ್ತಾಳೆ. ಅಂತಹ ಕಾವೇರಿಯನ್ನು ತೊಣ್ಣೂರು ಕೆರೆಗೆ ತರುವ ಮೂಲಕ ನಂಬಿನಾರಾಯಣನ ಪಾದ ಸ್ಪರ್ಶ ಮಾಡುವಂತಹ ಕೆಲಸವನ್ನು ಪುಟ್ಟರಾಜು ಮಾಡುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ ಎಂದರು.

ಕ್ಷೇತ್ರದ ಜನರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಾ ನಿರಂತರವಾಗಿ ಅಭಿವೃದ್ಧಿ ಹಾಗೂ ಜನಪರ ಕಾರ್ಯ ಮಾಡುವ ಮೂಲಕ ಕ್ಷೇತ್ರವನ್ನು ರಾಜ್ಯದಲ್ಲೇ ಮಾದರಿಯಾಗಿಸಿದ್ದಾರೆ. ಅಭಿವೃದ್ಧಿ ಕಾರ್ಯಗಳು ಹಾಗೂ ಶಾಶ್ವತ ಯೋಜನೆಗಳನ್ನು ಕ್ಷೇತ್ರದಲ್ಲಿ ಜಾರಿಗೊಳಿಸುವ ಮೂಲಕ ಕ್ಷೇತ್ರದಲ್ಲಿ ತಮಗೆ ರಾಜಕೀಯ ಎದುರಾಳಿಗಳೇ ಇಲ್ಲದ ಹಾಗೆ ಕೆಲಸ ಮಾಡಿದ್ದಾರೆ. ಇಂತಹ ಶಾಸಕರ ಅವಶ್ಯಕತೆ ಕ್ಷೇತ್ರಕ್ಕಿದ್ದು, ಅವರು ಮತ್ತೊಮ್ಮೆ ಕ್ಷೇತ್ರದ ಶಾಸಕರಾಗಿ ಮತ್ತಷ್ಟು ಕ್ಷೇತ್ರವನ್ನು ಅಭಿವೃದ್ಧಿ ಪಡಿಸಬೇಕು. ಇದಕ್ಕೆ ನಿಮ್ಮೆಲ್ಲರ ಆಶೀರ್ವಾದ ಬೇಕು ಎಂದು ಮನವಿ ಮಾಡಿದರು.

ಜಾನಪದ ವಿದ್ವಾಂಸೆ ಜಯಲಕ್ಷ್ಮಿ ಸೀತಾಪುರ ಮಾತನಾಡಿ, ಕಾವೇರಿ ನದಿಯಿಂದ ದೂರದ ತೊಣ್ಣೂರುಕೆರೆಗೆ ಕಾವೇರಿ ನದಿ ನೀರನ್ನು ತರುವ ಕೆಲಸ ಅಷ್ಟೊಂದು ಸುಲಭದ ಮಾತಲ್ಲ. ಅಂತಹ ಸಾರ್ಥಕತೆಯ ಕೆಲಸವನ್ನು ಕ್ಷೇತ್ರದ ಶಾಸಕರಾಗಿ ಸಿ.ಎಸ್.ಪುಟ್ಟರಾಜು ಮಾಡುವ ಮೂಲಕ ಜನರ ಬದುಕು ಹಸನಾಗಿದ್ದಾರೆ ಎಂದು ಬಣ್ಣಿಸಿದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಸಚಿವನಾಗಿ ಕೆಲಸ ಮಾಡುವ ವೇಳೆ ಕ್ಷೇತ್ರಕ್ಕೆ ಹಲವಾರು ನೀರಾವರಿ ಯೋಜನೆ ಮಂಜೂರು ಮಾಡಿದ್ದೇನೆ. ಇತ್ತೀಚೆಗಷ್ಟೆ ದುದ್ದ ಏತ ನೀರಾವರಿಗೆ ಚಾಲನೆ ನೀಡಿದ್ದೇವೆ. ಆ ಯೋಜನೆಯಿಂದ ಇನ್ನೂ ಹೆಚ್ಚುವರಿಯಾಗಿ 20 ಕೆರೆ ತುಂಬಿಸುವ ಯೋಜನೆ ಸಚಿವರು ಮಂಜೂರು ಮಾಡಿಕೊಟ್ಟು ಹೋಗಿದ್ದಾರೆ ಎಂದರು.

ಇದಕ್ಕೂ ಮುನ್ನ ಕ್ಷೇತ್ರದ ಮಹಿಳೆಯರು ತೊಣ್ಣೂರುಕೆರೆಗೆ ಹೋಗುವ ಕಾವೇರಿ ಮಾತೆಗೆ ಬಾಗೀನ ಅರ್ಪಿಸಿದರು. ಸಮಾವೇಶದಲ್ಲಿ ಸುಮಾರು 10 ಸಾವಿರಕ್ಕೂ ಅಧಿಕ ಮಹಿಳೆಯರು ಪಾಲ್ಗೊಂಡಿದರು.

ಸಮಾರಂಭದಲ್ಲಿ ಜೆಡಿಎಸ್ ಅಧ್ಯಕ್ಷ ಎಸ್.ಎ.ಮಲ್ಲೇಶ್, ಜಿಪಂ ಮಾಜಿ ಸದಸ್ಯರಾದ ನಾಗಮ್ಮಪುಟ್ಟರಾಜು, ಸಿ.ಅಶೋಕ್, ಜೆಡಿಎಸ್ ಯುವ ಮುಖಂಡ ಸಿ.ಪಿ.ಶಿವರಾಜು, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಸಿ.ಯಶ್ವಂತ್‌ಕುಮಾರ್, ಪುರಸಭೆ ಅಧ್ಯಕ್ಷೆ ಅರ್ಚನಚಂದ್ರು, ಸದಸ್ಯೆ ಸರಸ್ವತಿ ಜಯರಾಮ್, ಸುನೀತ, ತಾಪಂ ಮಾಜಿ ಅಧ್ಯಕ್ಷರಾದ ರಾಧಮ್ಮ, ಗಾಯತ್ರಿ, ನವೀನ, ಮಾಜಿ ಸದಸ್ಯೆ ಸುಶೀಲಮ್ಮ, ನಾರಾಯಣಪುರ ಗ್ರಾಪಂ ಅಧ್ಯಕ್ಷೆ ಪವಿತ್ರ ಲೋಕೇಶ್, ಟಿ.ಎಸ್.ಛತ್ರ ಗ್ರಾಪಂ ಮಾಜಿ ಅಧ್ಯಕ್ಷೆ ಶೃತಿಶ್ರೀನಿವಾಸ್ ಸೇರಿದಂತೆ ಎಲ್ಲಾ ಗ್ರಾಪಂ ಅಧ್ಯಕ್ಷರು, ಸದಸ್ಯರು, ಮುಖಂಡರು ಹಾಜರಿದ್ದರು.

ಧರ್ಮಸ್ಥಳ ಸಂಸ್ಥೆಯಿಂದ ಮಹಿಳಾ ಸಬಲೀಕರಣ



ಭಾರತೀನಗರ, ಮಾ.12– ಮಹಿಳಾ ಸಬಲೀಕರಣಕ್ಕೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಶ್ರಮಿಸುತ್ತಿದೆ ಎಂದು ಶಾಸಕ ಡಿ.ಸಿ.ತಮ್ಮಣ್ಣ ತಿಳಿಸಿದರು.

ಇಲ್ಲಿಗೆ ಸಮೀಪದ ದೊಡ್ಡರಸಿನಕೆರೆಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಆಯೋಜಿಸಿದ್ದ ಸಹಸ್ರ ಬಿಲ್ವಾರ್ಚನೆ ಮತ್ತು ಒಕ್ಕೂಟದ ಪದಗ್ರಹಣ ಹಾಗೂ ಸಾಧನಾ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು. ಶ್ರೀಕ್ಷೇತ್ರದ ಧರ್ಮಾಧಿಕಾರಿ ಡಾ.ವೀರೇಂದ್ರ ಹಗಡೆ ಅವರು ಮಹಿಳೆಯರ ಆರ್ಥಿಕತೆ ಸದೃಢಗೊಳಿಸುವ ಜೊತೆಗೆ ರೈತರಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ, ಕಡಿಮೆ ದರದಲ್ಲಿ ಕೃಷಿ ಯಂತ್ರಧಾರೆ ವಿತರಣೆ, ಮದ್ಯ ವ್ಯಸನಿಗಳಿಗೆ ಕಾರ್ಯಕ್ರಮ, ವಿಮಾ ಕಾರ್ಯಕ್ರಮ, ಮಾಸಾಶನ ಕಾರ್ಯಕ್ರಮ, ಕೃಷಿ ಅನುದಾನ ಕಾರ್ಯಕ್ರಮ, ಸಮುದಾಯ ಅಭಿವೃದ್ಧಿ ಕಾರ್ಯಕ್ರಮ, ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ರಮ, ರೈತರಿಗೆ ಪ್ರಗತಿ ಬಂಧು ಕಾರ್ಯಕ್ರಮ ಸೇರಿದಂತೆ ಹಲವು ಸಮಾಜಮುಖಿ ಕೆಲಸ ನಿರ್ವಹಿಸುತ್ತಿದೆ ಎಂದರು.

ಸುಳ್ಳು, ಮೋಸ, ವಂಚನೆ ಸಮಾಜದಲ್ಲಿ ಹೆಚ್ಚು ಕಾಲ ಉಳಿಯಲ್ಲ. ಸತ್ಯ ಧರ್ಮಕ್ಕೆ ಜಯ ಸಿಗಲಿದೆ. ಮದ್ಯಪಾನ ಮುಕ್ತರನ್ನಾಗಿ ಮಾಡಲು ಶ್ರೀಕ್ಷೇತ್ರ ಬಹಳಷ್ಟು ಶ್ರಮಿಸುತ್ತಿದೆ. ಇದರಿಂದ ಹಲವಾರು ಕುಟುಂಬಗಳು ನೆಮ್ಮದಿಯ ಜೀವನ ಸಾಗಿಸಲು ಸಹಕಾರಿಯಾಗಿದೆ ಎಂದರು.

ಹೆಚ್.ಡಿ.ಕುಮಾರಸ್ವಾಮಿ ತಮ್ಮ ಅಧಿಕಾರಾವಧಿಯಲ್ಲಿ ಸರಾಯಿ, ಲಾಟರಿ ನಿಷೇಧ ಮಾಡಿದರು. ಹಾಗೆಯೇ ಹೆಚ್.ಡಿ.ದೇವೇಗೌಡರು 1995ರಲ್ಲಿ ಮುಖ್ಯಮಂತ್ರಿಯಾಗಿದ್ದ ವೇಳೆ ಮಹಿಳೆಯರ ಅಭಿವೃದ್ಧಿಗಾಗಿ ಮಹಿಳಾ ಮೀಸಲಾತಿ ಜಾರಿಗೆ ತಂದರು. ಇದರಿಂದ ಎಲ್ಲಾ ರಂಗದಲ್ಲೂ ಮಹಿಳೆಯರು ಇಂದು ಅಭಿವೃದ್ಧಿ ಕಂಡಿದ್ದಾರೆ ಎಂದು ವಿವರಿಸಿದರು. ಇದೇ ವೇಳೆ ಗ್ರಾಪಂ ಅಧ್ಯಕ್ಷೆ ಸಮೀನಾಬಾನು, ಶ್ರೀಕ್ಷೇತ್ರ ಜಿಲ್ಲಾ ನಿರ್ದೇಶಕಿ ಎಂ.ಚೇತನ, ತಾಲೂಕು ಯೋಜನಾಧಿಕಾರಿ ಬಿ.ಆರ್.ಯೋಗೇಶ್ ಕನ್ನಾಡಿ, ಮೇಲ್ವಿಚಾರಕಿ ಉಷಾ ಸೇರಿದಂತೆ ಹಲವರಿದ್ದರು.

ಕೆ.ಆರ್.ಪೇಟೆ ಪುರಸಭೆಗೆ 16.96 ಲಕ್ಷ ಉಳಿತಾಯ ಬಜೆಟ್



ಕೆ.ಆರ್.ಪೇಟೆ, ಮಾ.12– ಪಟ್ಟಣದ ಸಮಗ್ರ ಅಭಿವೃದ್ಧಿಗೆ ಪೂರಕವಾದ 2023–24ನೇ ಸಾಲಿನ 16,96,080 ರೂ.ಗಳ ಉಳಿತಾಯ ಬಜೆಟ್ ಅನ್ನು ಪುರಸಭೆ ಅಧ್ಯಕ್ಷೆ ಮಹಾದೇವಿ ಮಂಡಿಸಿದರು.

ಪುರಸಭೆಯ ಸ್ವರ್ಣಜಯಂತಿ ಶಹರಿ ರೋಜ್‌ಗಾರ್ ಯೋಜನಾ ಭವನದಲ್ಲಿ ನಡೆದ ಪುರಸಭೆಯ 2023–24ನೇ ಸಾಲಿನ ಆಯವ್ಯಯ ಮಂಡನಾ ಸಭೆಯಲ್ಲಿ ಪ್ರಸಕ್ತ ಸಾಲಿನ ಆಯವ್ಯಯ ಮಂಡನೆ ಹಾಗೂ 2022–23ನೇ ಸಾಲಿನ ಪರಿಷ್ಕೃತ ಅಂದಾಜು ಪತ್ರವನ್ನು ಮಂಡಿಸಿದರು.

ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಆರಂಭಿಕ ಶಿಲ್ಕು 3,76,96,080 ರೂ.ಗಳಿದ್ದು ಆಸ್ತಿ ತೆರಿಗೆ, ನೀರಿನ ತೆರಿಗೆ, ಉದ್ದಿಮೆ ಪರವಾನಗಿ, ಖಾತಾ ಬದಲಾವಣೆ ಶುಲ್ಕ, ಜಾಹೀರಾತು ಶುಲ್ಕ, ಕಟ್ಟಡ ಪರವಾನಗಿ ಅಭಿವೃದ್ಧಿ ಶುಲ್ಕ, ಮಳಿಗೆಗಳ ಬಾಡಿಗೆ, ಅನುಪಯುಕ್ತ ವಸ್ತುಗಳ ಮಾರಾಟ, ಬ್ಯಾಂಕಿನ ಠೇವಣಿ ಬಡ್ಡಿ, ದಂಡಗಳ ಶಿಲ್ಕು ಹಾಗೂ ಸರ್ಕಾರದ ಅನುದಾನ ಸೇರಿದಂತೆ ಒಟ್ಟು 13,62,28,499 ರೂ. ಆದಾಯ ನಿರೀಕ್ಷಿಸಲಾಗಿದೆ ಎಂದು ವಿವರಿಸಿದರು.

ಸಾರ್ವಜನಿಕ ಆರೋಗ್ಯ ಮತ್ತು ಅನುಕೂಲತೆ, ಕಸ ಸಾಗಾಣಿಕೆ, ರಸ್ತೆ, ಚರಂಡಿ ಮತ್ತಿತರ ಅಭಿವೃದ್ಧಿ ಕಾಮಗಾರಿಗಳು, ವಿದ್ಯುಚ್ಛಕ್ತಿ ಬಿಲ್, ಕುಡಿಯುವ ನೀರಿನ ವ್ಯವಸ್ಥೆ, ಸಾರ್ವಜನಿಕ ಉದ್ದಿಮೆಗಳ ಅಭಿವೃದ್ಧಿ ವೆಚ್ಚ, ನೌಕರರ ವೇತನ ಹಾಗೂ ಇತರೆ ಸಾಮಾನ್ಯ ವೆಚ್ಚಗಳಿಗಾಗಿ 13,45,32,419 ರೂ.ಗಳನ್ನು ಖರ್ಚು ಮಾಡಲು ಅಂದಾಜಿಸಿದೆ. ಪುರಸಭೆಗೆ 16,96,080 ರೂ. ಉಳಿತಾಯವಾಗಲಿದೆ ಎಂದರು.

ಆಡಳಿತ ಪಕ್ಷದ ಸದಸ್ಯರ ಬಹಿಷ್ಕಾರ

ಅಧ್ಯಕ್ಷೆ ಮಹಾದೇವಿ ಅವರ ಸರ್ವಾಧಿಕಾರ, ಕೆಟ್ಟು ಕೆರ ಹಿಡಿದಿರುವ ಆಡಳಿತ, ಭ್ರಷ್ಟಾಚಾರ, ಸ್ವಜನಪಕ್ಷಪಾತ, ಕಳಪೆ ಕಾಮಗಾರಿಗಳಿಂದ ತತ್ತರಿಸಿ ಹೋಗಿರುವ ಪುರಸಭೆಯ ವಿರುದ್ಧ ಸಿಡಿದೆದ್ದಿರುವ ಆಡಳಿತ ಪಕ್ಷದ ಸದಸ್ಯರು ಇಂದಿನ ಬಜೆಟ್ ಮಂಡನಾ ಸಭೆ ಬಹಿಷ್ಕರಿಸಿದ್ದರು. 28 ಸದಸ್ಯ ಬಲದ ಪುರಸಭೆಯಲ್ಲಿ ಕೇವಲ 12 ಸದಸ್ಯರು ಮಾತ್ರ ಇಂದಿನ ಬಜೆಟ್ ಮಂಡನಾ ಸಭೆಯಲ್ಲಿ ಭಾಗವಹಿಸಿದ್ದರು.

ಈ ವೇಳೆ ಸದಸ್ಯರು ಅಧ್ಯಕ್ಷರು ಪಟ್ಟಣದ ಅಭಿವೃದ್ಧಿಗೆ ಪೂರಕವಾದ ಉಳಿತಾಯ ಬಜೆಟ್ ಮಂಡಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಕೆ.ಆರ್.ಪೇಟೆ–ಹೊಸಹೊಳಲು ಅವಳಿ ಪಟ್ಟಣಗಳ ಸಮಗ್ರ ಅಭಿವೃದ್ಧಿಗೆ ಪೂರಕವಾದ ನೀಲನಕ್ಷೆ ತಯಾರಿಸಬೇಕು. ಅಭಿವೃದ್ಧಿ ಕೆಲಸ–ಕಾರ್ಯಗಳನ್ನು ಅನುಷ್ಠಾನ ಮಾಡುವಾಗ ಅಭಿವೃದ್ಧಿಯನ್ನು ಪಟ್ಟಣ ಹೊಸಹೊಳಲು ಎಂದು ಭೇದ ಭಾವ ಮಾಡದೆ ಪಟ್ಟಣದ ಎಲ್ಲಾ 23 ವಾರ್ಡುಗಳಲ್ಲಿಯೂ ಸಮವಾಗಿ ಅಭಿವೃದ್ಧಿ ಕೆಲಸಗಳನ್ನು ಅನುಷ್ಠಾನಗೊಳಿಸಬೇಕು. ಕಾಮಗಾರಿಯಲ್ಲಿ ಗುಣಮಟ್ಟವನ್ನು ಕಾಪಾಡಿಕೊಳ್ಳಬೇಕು. ಕಳಪೆ ಅಧಿಕಾರಿಗಳು ಕೆಲಸ ನಡೆಸಿ ಸರ್ಕಾರದ ಹಣವನ್ನು ಪೋಲು ಮಾಡುತ್ತಿರುವ ಗುತ್ತಿಗೆದಾರರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದು ಪಕ್ಷಾತೀತವಾಗಿ ಸದಸ್ಯರು ಆಗ್ರಹಿಸಿದರು.


ಅವಧಿ ವಿಸ್ತರಣೆ

ಮಂಡ್ಯ, ಮಾ.12– ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1 ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ 2022–23ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನೀಡಲಾಗುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಶುಲ್ಕ ಮರುಪಾವತಿ ವಿದ್ಯಾಸಿರಿ–ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು ಫೆ.28ಕ್ಕೆ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕ ನಿಗದಿಪಡಿಸಲಾಗಿತ್ತು. ಅರ್ಜಿ ಸಲ್ಲಿಸುವ ದಿನಾಂಕ ವಿಸ್ತರಿಸುವಂತೆ ಪೋಷಕರು, ವಿದ್ಯಾರ್ಥಿಗಳು, ಶಿಕ್ಷಣ ಸಂಸ್ಥೆಗಳು ಮನವಿ ಸಲ್ಲಿಸಿದ್ದು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅರ್ಜಿ ಸಲ್ಲಿಸಲು ಮಾ.15 ರವರೆಗೆ ಅವಧಿ ವಿಸ್ತರಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 8050770005 ಅಥವಾ ಆನ್‌ಲೈನ್ ವೆಬ್‌ಸೈಟ್: https://ssp.postmetric.karnataka.gov.in ಅನ್ನು ಸಂಪರ್ಕಿಸಬಹುದು.



ನಾಗಮಂಗಲ ತಾಲೂಕಿನ ಮೈಲಾರಪಟ್ಟಣದಲ್ಲಿ ಭಾರೀ ಮಳೆಯಿಂದಾಗಿ ಮನೆ ಹಾನಿಗೊಳಗಾದ ಸಂತ್ರಸ್ತೆ ಚಿಕ್ಕತಾಯಮ್ಮ ಅವರಿಗೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾ ಟ್ರಸ್‌ನಿಂದ 10 ಸಾವಿರ ರೂ.ಗಳ ಧನಸಹಾಯದ ಚೆಕ್ ವಿತರಿಸಲಾಯಿತು. ಈ ವೇಳೆ ಜಿಲ್ಲಾ ನಿರ್ದೇಶಕಿ ಚೇತನ, ತಾಲೂಕು ಯೋಜನಾಧಿಕಾರಿ ದಿವಾಕರ್.ಕೆ, ಸೇವಾ ಪ್ರತಿನಿಧಿ ಗೋವಿಂದೇಗೌಡ ಸೇರಿದಂತೆ ಇನ್ನಿತರರಿದ್ದರು.

4ನೇ ಟೆಸ್ಟ್: ಕೊಹ್ಲಿ ಶತಕ: 571 ರನ್‌ಗಳಿಗೆ ಭಾರತ ಆಲೌಟ್, 91 ರನ್ ಮುನ್ನಡೆ



ಅಹಮದಾಬಾದ್: ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ 4ನೇ ಟೆಸ್ಟ್ ಪಂದ್ಯದ ನಾಲ್ಕನೇ ದಿನದಾಟದಲ್ಲಿ ಭಾರತ ಅದ್ಭುತ ಪ್ರದರ್ಶನ ನೀಡಿದ್ದು ಮೊದಲ ಇನ್ನಿಂಗ್ಸ್‌ನಲ್ಲಿ 571 ರನ್‌ಗಳಿಗೆ ಆಲೌಟ್ ಆಗಿದೆ.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಅಂತಿಮ ಟೆಸ್ಟ್ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಟೀಂ ಇಂಡಿಯಾ ಪರವಾಗಿ ವಿರಾಟ್ ಕೊಹ್ಲಿ (186) ಶತಕ ಸಿಡಿಸಿದರೆ, ಅಕ್ಷರ್ ಪಟೇಲ್ (79) ಅರ್ಧಶತಕ ಸಿಡಿಸಿ ಭಾರತಕ್ಕೆ ಬಲ ತುಂಬಿದರು. ಈ ಪಂದ್ಯದಲ್ಲಿ ಕಿಂಗ್ ಕೊಹ್ಲಿ ಹೊರತುಪಡಿಸಿ ಕೆ.ಎಸ್. ಭರತ್ (44), ರವೀಂದ್ರ ಜಡೇಜಾ (29) ಅದ್ಭುತ ಜೊತೆಯಾಟ ನೀಡದರು.

ಮೊದಲ ಇನ್ನಿಂಗ್ಸ್‌ನಲ್ಲಿ ಭಾರತ ತಂಡ 571 ರನ್‌ಗಳಿಗೆ ಆಲೌಟ್ ಆಗಿದೆ. ಇದರಲ್ಲಿ ಕಿಂಗ್ ಕೊಹ್ಲಿ 186 ರನ್‌ಗಳ ಬಿರುಗಾಳಿಯ ಇನ್ನಿಂಗ್ಸ್ ಆಡಿದ್ದರೆ, ಶುಭಮನ್ ಗಿಲ್ 128 ರನ್ ಗಳಿಸಿದ್ದಾರೆ. ಅದೇ ಸಮಯದಲ್ಲಿ, ಆಸ್ಟ್ರೇಲಿಯಾ ತಂಡವು ನಾಲ್ಕನೇ ದಿನದ ಆಟಕ್ಕೆ ಎರಡನೇ ಇನಿಂಗ್ಸ್‌ನಲ್ಲಿ 3/0 ಗಳಿಸಿತು.

ಆಸ್ಟ್ರೇಲಿಯಾ ಮೊದಲ ಇನ್ನಿಂಗ್ಸ್‌ನಲ್ಲಿ ಉಸ್ಮಾನ್ ಖವಾಜಾ 180 ಮತ್ತು ಕ್ಯಾಮರೂನ್ ಗ್ರೀನ್ 114 ರನ್ ಗಳಿಸಿ ತಂಡವನ್ನು 480 ರನ್‌ಗಳತ್ತ ಕೊಂಡೊಯ್ದರು. ಕೊನೆಯಲ್ಲಿ ಟಾಡ್ ಮರ್ಫಿ ಉಪಯುಕ್ತ 41 ರನ್ ಗಳಿಸಿ ತಂಡಕ್ಕೆ ನೆರವಾಗಿದ್ದರು.

ಆಸ್ಟ್ರೇಲಿಯಾ ಪರ ಬೌಲಿಂಗ್ ನಲ್ಲಿ ಟಾಡ್ ಮರ್ಫಿ, ನಾಥಮ್ ಲಿಯೋನ್ ತಲಾ 3 ವಿಕೆಟ್ ಮತ್ತು ಮಿಚೆಲ್ ಸ್ಟಾರ್ಕ್ ಮತ್ತು ಕುಹ್ನೆಮನ್ ತಲಾ 1 ವಿಕೆಟ್ ಪಡೆದಿದ್ದಾರೆ.

ಕ್ರಿಯಾಶೀಲ, ಸಂಘಟನಾ ಚತುರ ಆರ್.ಧ್ರುವನಾರಾಯಣ್; ಶ್ರೀನಿವಾಸ ಪ್ರಸಾದ್ ಸ್ಮರಣೆ

ಮೈಸೂರು, ಮಾ.12– ಕ್ರಿಯಾಶೀಲ, ಸಂಘಟನಾ ಚತುರ ರಾಜಕಾರಣಿಯಾಗಿದ್ದ ಆರ್.ಧ್ರುವನಾರಾಯಣ್ ಅವರ ಅಕಾಲಿಕ ಅಗಲಿಕೆಯಿಂದ ಸಮಾಜಕ್ಕೆ ತುಂಬಲಾರದ ನಷ್ಟ ಉಂಟಾಗಿದೆ ಎಂದು ಚಾಮರಾಜನಗರ ಸಂಸದ ವಿ.ಶ್ರೀನಿವಾಸ ಪ್ರಸಾದ್ ಹೇಳಿದ್ದಾರೆ. ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರ ಅಕಾಲಿಕ ಮರಣದಿಂದ ದಿಗ್ಭ್ರಮೆಯಾಗಿದೆ. ಕೃಷಿ ವಿಜ್ಞಾನದಲ್ಲಿ ಎಂಎಸ್ಸಿ ಪದವೀಧರಾದ ಅವರು ಕೆಲಕಾಲ ಸರ್ಕಾರಿ ಕೆಲಸದಲ್ಲಿದ್ದರು. ಕಾಂಗ್ರೆಸ್‌ನಲ್ಲಿ ವಿದ್ಯಾರ್ಥಿ ಘಟಕದ ಪದಾಧಿಕಾರಿಯಾಗಿ ರಾಜಕೀಯ ಕ್ಷೇತ್ರ ಪ್ರವೇಶಿಸಿದ್ದರು. 1999ರಲ್ಲಿ ಸಂತೆಮರಳ್ಳಿ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಆಯ್ಕೆಯಾಗಿದ್ದರು. ಕ್ಷೇತ್ರಗಳ ಪುನರ್ ವಿಂಗಡಣೆಯಿಂದಾಗಿ ಸಂತೆಮರಳ್ಳಿ ಕ್ಷೇತ್ರ ಕೊಳ್ಳೇಗಾಲಕ್ಕೆ ಸೇರ್ಪಡೆಯಾಯಿತು. 2008ರಲ್ಲಿ ಕೊಳ್ಳೇಗಾಲ ಕ್ಷೇತ್ರದಿಂದ ಸ್ಪರ್ಧಿಸಿ ಮತ್ತೆ ವಿಧಾನಸಭೆಗೆ ಆಯ್ಕೆಯಾಗಿದ್ದರು.

ನಂತರ ಅವರು ರಾಜ್ಯ ರಾಜಕಾರಣದಿಂದ ರಾಷ್ಟ್ರ ರಾಜಕಾರಣದತ್ತ ಹೆಜ್ಜೆಹಾಕಿ 2009ರ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ, ಜಯಶಾಲಿಯಾದರು. 2014ರಲ್ಲಿ 2ನೇ ಬಾರಿಯೂ ಅಲ್ಲಿಂದಲೇ ಗೆಲುವು ಸಾಧಿಸಿದರು. ಆದರೆ 2019ರ ಲೋಕಸಭಾ ಚುನಾವಣೆಯಲ್ಲಿ ಅವರು ಪರಾಜಿತರಾದರು. ನಂತರದ ರಾಜಕೀಯ ಬೆಳವಣಿಗೆಯಲ್ಲಿ ಅವರು ಪ್ರದೇಶ ಕಾಂಗ್ರೆಸ್ ಸಮಿತಿ ಕಾರ್ಯಾಧ್ಯಕ್ಷರಾಗಿ ಕೆಲಸ ನಿರ್ವಹಿಸಿದರು. ಹತ್ತಾರು ವರ್ಷ ಅವರು ರಾಜಕೀಯ ರಂಗದಲ್ಲಿ ಜನಪ್ರತಿನಿಧಿಯಾಗಿ ಯಾವುದೇ ಆಪಾದನೆ, ಕಳಂಕವಿಲ್ಲದೆ ಪ್ರಾಮಾಣಿಕತೆಯಿಂದ ಕಾರ್ಯ ನಿರ್ವಹಿಸಿದ ಅವರು ಜನತೆಯ ವಿಶ್ವಾಸ ಗಳಿಸಿದ್ದರು. ಅವರ ಅಕಾಲಿಕ ಮರಣದಿಂದ ರಾಜ್ಯ ಒಬ್ಬ ಕ್ರಿಯಾಶೀಲ ಸಂಘಟನಾ ಚತುರ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ. ಸಮಾಜಕ್ಕೆ ತುಂಬಲಾರದ ಹಾನಿ ಸಂಭವಿಸಿದಂತಾಗಿದೆ. ಅವರ ನಿಧನದಿಂದ ಕುಟುಂಬ ದುಃಖತಪ್ತವಾಗಿದೆ. ಅವರ ಕುಟುಂಬದ ಸದಸ್ಯರಿಗೆ ಈ ದುಃಖ ಸಹಿಸುವ ಶಕ್ತಿ ಪ್ರಾಪ್ತಿಯಾಗಲೆಂದು ಪ್ರಾರ್ಥಿಸುತ್ತೇನೆ ಎಂದು ಸಂತಾಪ ಸೂಚಕ ಪತ್ರದಲ್ಲಿ ತಿಳಿಸಿದ್ದಾರೆ.



ರಾಜಕೀಯ ಕ್ಷೇತ್ರದ 'ಧ್ರುವ'ತಾರೆಯಾಗಿದ್ದರು

ಮೈಸೂರು, ಮಾ.12– ರಾಜಕೀಯ ಕ್ಷೇತ್ರದ ಧ್ರುವತಾರೆಯಾಗಿದ್ದ ಆರ್.ಧ್ರುವನಾರಾಯಣ್ ಅವರ ಅಕಾಲಿಕ ಅಗಲಿಕೆಯಿಂದ ನಾಡಿಗೆ ಅಪಾರ ನಷ್ಟವಾಗಿದೆ ಎಂದು ಉದ್ಯಮಿ ಮೆಹುಲ್ ಜೆ.ಪಟೇಲ್ ಹೇಳಿದ್ದಾರೆ.

ಆರ್.ಧ್ರುವನಾರಾಯಣ್ ಅವರು ಶಾಸಕರಾಗಿ, ಸಂಸದರಾಗಿ ಅತ್ಯಂತ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಿದ್ದರು. ಪಕ್ಷದ ಜವಾಬ್ದಾರಿ ಯನ್ನೂ ತುಂಬಾ ಅಚ್ಚುಕಟ್ಟಾಗಿ ನಿರ್ವಹಿಸುವ ಮೂಲಕ ಪ್ರೇರಣೆಯಾಗಿದ್ದರು. ಅವರು ಜವಾಬ್ದಾರಿ ನಿರ್ವಹಿಸುತ್ತಿದ್ದ ರೀತಿ, ಸಾರ್ವಜನಿಕರೊಂದಿಗಿನ ಒಡನಾಟ ಮಾದರಿಯಾಗಿತ್ತು. ಓರ್ವ ಸರಳ, ಸಜ್ಜನ, ನಿಷ್ಠಾವಂತ ರಾಜಕಾರಣಿಯಾಗಿದ್ದ ಧ್ರುವನಾರಾಯಣ್ ಅವರು ರಾಜಕೀಯ ಕ್ಷೇತ್ರದ ಧ್ರುವತಾರೆಯಂತಿದ್ದರು. ಅವರ ಅಗಲಿಕೆಯಿಂದ ನಾಡಿಗೆ ನಷ್ಟವಾಗಿದೆ ಎಂದು ತಿಳಿಸಿದ್ದಾರೆ.

ತೆಲಂಗಾಣ ಸಿಎಂ ಕೆಸಿಆರ್ ಆಸ್ಪತ್ರೆಗೆ ದಾಖಲು

ಹೈದರಾಬಾದ್: ತೆಲಂಗಾಣ ಮುಖ್ಯಮಂತ್ರಿ ಚಂದ್ರಶೇಖರ ರಾವ್ ಹೊಟ್ಟೆ ಹುಣ್ಣಿನ ಸಮಸ್ಯೆಯಿಂದಾಗಿ ಭಾನುವಾರ ಆಸ್ಪತ್ರೆಗೆ ದಾಖಲಾಗಿದ್ದಾರೆ. ಕೆಸಿಆರ್ ಅವರ ಹೊಟ್ಟೆಯಲ್ಲಿ ಸಣ್ಣ ಹುಣ್ಣು ಕಾಣಿಸಿಕೊಂಡಿದ್ದು, ಚಿಕಿತ್ಸೆ ಪ್ರಾರಂಭಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಮುಖ್ಯಮಂತ್ರಿಯನ್ನು ಎಐಜಿ ಆಸ್ಪತ್ರೆಗೆ ದಾಖಲಿಸ ಲಾಗಿದ್ದು, ಅಲ್ಲಿ ಅವರನ್ನು ಗ್ಯಾಸ್ಟ್ರೋಎಂಟರಾಲಜಿ ಮುಖ್ಯಸ್ಥರೂ ಆಗಿರುವ ಆಸ್ಪತ್ರೆಯ ಅಧ್ಯಕ್ಷ ಡಾ. ಡಿ. ನಾಗೇಶ್ವರ ರೆಡ್ಡಿ ಪರೀಕ್ಷಿಸಿದ ನಂತರ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಅಲ್ಲಿ ಅವರಿಗೆ ಕೆಲವು ವೈದ್ಯಕೀಯ ಪರೀಕ್ಷೆಗಳಿಗೆ ಒಳಪಡಿಸ ಲಾಯಿತು ಎಂದು ಅವರು ಮಾಹಿತಿ ನೀಡಿದ್ದಾರೆ. ಆಸ್ಪತ್ರೆಯಲ್ಲಿ ಅವರಿಗೆ ಸಿಟಿ ಸ್ಕ್ಯಾನ್ ಮತ್ತು ಎಂಡೋಸ್ಕೋಪಿ ನಡೆಯಲಾಗಿದೆ ಎಂದು ಆಸ್ಪತ್ರೆ ಮಾಹಿತಿ ನೀಡಿದೆ. ಕೆಸಿಆರ್ ಅವರ 'ಹೊಟ್ಟೆಯಲ್ಲಿ ಸಣ್ಣ ಹುಣ್ಣು ಕಂಡುಬಂದಿದ್ದು, ಅದನ್ನು ವೈದ್ಯಕೀಯವಾಗಿ ನಿರ್ವಹಿಸಲಾಗುತ್ತಿದೆ. ಅವರ ದೇಹದ ಎಲ್ಲಾ ಅಂಗಗಳು ಸಾಮಾನ್ಯವಾಗಿದ್ದು, ಸೂಕ್ತ ಚಿಕಿತ್ಸೆ ಆರಂಭಿಸಲಾಗಿದೆ ಎಂದು ಆಸ್ಪತ್ರೆ ತಿಳಿಸಿದೆ.

ಮಾಧುರಿ ದೀಕ್ಷಿತ್ ತಾಯಿ ಸ್ನೇಹಲತಾ ನಿಧನ



ಮುಂಬೈ: ಬಾಲಿವುಡ್‌ನ ಖ್ಯಾತ ನಟಿ ಮಾಧುರಿ ದೀಕ್ಷಿತ್ ತಾಯಿ ಸ್ನೇಹಲತಾ ದೀಕ್ಷಿತ್ ಅವರು ನಿಧನರಾಗಿದ್ದಾರೆ. ಇಂದು (ಮಾರ್ಚ್ 12) ಸ್ನೇಹಲತಾ ದೀಕ್ಷಿತ್ ಅವರು ಮುಂಬೈನ ನಿವಾಸದಲ್ಲಿ ಕೊನೆಯುಸಿರೆಳೆದರು. ಅವರಿಗೆ 91 ವರ್ಷ ವಯಸ್ಸಾಗಿತ್ತು. ಮುಂಬೈನಲ್ಲೇ ಅವರ ಅಂತ್ಯಕ್ರಿಯೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ. ತಾಯಿಯನ್ನು ಕಳೆದುಕೊಂಡ ಮಾಧುರಿ ದೀಕ್ಷಿತ್ ಅವರಿಗೆ ಬಾಲಿವುಡ್‌ನ ಅನೇಕ ಗಣ್ಯರು ಸಂತಾಪ ಸೂಚಿಸುತ್ತಿದ್ದಾರೆ. ಸೋಶಿಯಲ್ ಮೀಡಿಯಾ ಮೂಲಕ ಅಭಿಮಾನಿಗಳು ಕೂಡ ಸ್ನೇಹಲತಾ ದೀಕ್ಷಿತ್ ಆತ್ಮಕ್ಕೆ ಶಾಂತಿ ಕೋರುತ್ತಿದ್ದಾರೆ.

ಗಾಯನದಲ್ಲಿ ಸ್ನೇಹಲತಾ ದೀಕ್ಷಿತ್ ಅವರು ಆಸಕ್ತಿ ಹೊಂದಿದ್ದರು. 2013ರಲ್ಲಿ ಮಾಧುರಿ ದೀಕ್ಷಿತ್ ನಟಿಸಿದ್ದ 'ಗುಲಾಬ್ ಗ್ಯಾಂಗ್' ಸಿನಿಮಾದ ಒಂದು ಹಾಡಿಗೆ ಸ್ನೇಹಲತಾ ಧ್ವನಿ ನೀಡಿದ್ದರು. ಸ್ನೇಹಲತಾ ದೀಕ್ಷಿತ್ ಅವರ 90ನೇ ವರ್ಷದ ಹುಟ್ಟುಹಬ್ಬಕ್ಕೆ ಮಾಧುರಿ ದೀಕ್ಷಿತ್ ಭಾವುಕವಾಗಿ ಪೋಸ್ಟ್ ಮಾಡಿದ್ದರು. 'ನೀವು ಕಲಿಸಿದ ಪಾಠಗಳೇ ನನ್ನ ಬದುಕಿಗೆ ದೊಡ್ಡ ಉಡುಗೊರೆ' ಎಂದು ಅವರು ಬರೆದುಕೊಂಡಿದ್ದರು.

ಸಿನಿ ಕ್ಷೇತ್ರದಲ್ಲಿ ಪ್ರತಿಭೆ, ಪರಿಶ್ರಮಕ್ಕೆ ತಕ್ಕ ಫಲ ಸಿಗುತ್ತದೆ

ನಟ, ನಿರ್ಮಾಪಕ ಡಾಲಿ ಧನಂಜಯ



ಮೈಸೂರಿನ ಅಮೃತ ವಿಶ್ವವಿದ್ಯಾಪೀಠಂನಲ್ಲಿ ಆಯೋಜಿಸಿದ್ದ 'ಸಿನಿರಮಾ–2023' ರಾಷ್ಟ್ರೀಯ ಕಿರುಚಿತ್ರೋತ್ಸವ ಸಮಾರೋಪ ಸಮಾರಂಭದಲ್ಲಿ ಸ್ಪರ್ಧಾ ವಿಜೇತರಿಗೆ ನಟ ಡಾಲಿ ಧನಂಜಯ ಪ್ರಶಸ್ತಿ ಪ್ರದಾನ ಮಾಡಿದರು. ಡಿಆರ್‌ಸಿ ಸಿನಿಮಾಸ್ ಮಾಲೀಕರಾದ ಶ್ರೀಮತಿ ವೈಶಾಲಿ ಹನುಮಂತ್ ಹಾಗೂ ಹನುಮಂತ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ಮಾ.12(ಎಸ್‌ಬಿಡಿ)– ಸಿನಿಮಾ ಕ್ಷೇತ್ರದಲ್ಲಿ ಪ್ರತಿಭೆ ಹಾಗೂ ಪರಿಶ್ರಮಕ್ಕೆ ತಕ್ಕ ಅವಕಾಶಗಳು ಸಿಗುತ್ತವೆ ಎಂದು ನಟ, ನಿರ್ಮಾಪಕ ಡಾಲಿ ಧನಂಜಯ ಹೇಳಿದರು.

ಮೈಸೂರಿನ ಅಮೃತ ವಿಶ್ವವಿದ್ಯಾಪೀಠಂನ ದೃಶ್ಯ ಸಂವಹನ ವಿಭಾಗದ ವತಿಯಿಂದ ಆಯೋಜಿಸಿದ್ದ 'ಸಿನಿರಮಾ–2023' ರಾಷ್ಟ್ರೀಯ ಕಿರುಚಿತ್ರೋತ್ಸವದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಸಿನಿಮಾ ಕ್ಷೇತ್ರದಲ್ಲಿ ವಿಪುಲ ಆಯ್ಕೆಗಳಿವೆ. ನಮ್ಮ ಪ್ರತಿಭೆ ಹಾಗೂ ಪರಿಶ್ರಮಕ್ಕೆ ತಕ್ಕಂತೆ ಅವಕಾಶಗಳು ಎದುರಾಗುತ್ತವೆ ಎಂದರು.


ಚಿತ್ರರಂಗದ ಆಸಕ್ತರು ಸಿಗುವ ಅವಕಾಶಗಳನ್ನು ಕೈ ಚೆಲ್ಲಬಾರದು. ಈ ರೀತಿಯ ಪಾತ್ರವೇ ಬೇಕೆಂದು ಕಾಲಹರಣ ಮಾಡಿದರೆ ಸುವರ್ಣಾವಕಾಶಗಳನ್ನೂ ಕಳೆದುಕೊಳ್ಳಬಹುದು. ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಆ ಮೂಲಕವೇ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಬೇಕು. ಪ್ರಸ್ತುತ ತಂತ್ರಜ್ಞಾನದ ಅಭಿವೃದ್ಧಿ ಒಂದು ದೊಡ್ಡ ವರದಾನ. ಇಡೀ ಸಿನಿಮಾವನ್ನು ಮೊಬೈಲ್‌ನಲ್ಲಿಯೇ ಚಿತ್ರೀಕರಿಸಬಹುದಾಗಿದೆ. ಈ ರೀತಿಯ ಪ್ರಯತ್ನಗಳು ದೊಡ್ಡ ಸಿನಿಮಾ ನಿರ್ಮಾಣಕ್ಕೆ ಭದ್ರ ಬುನಾದಿಯಾಗುತ್ತವೆ ಎಂದು ಸಲಹೆ ನೀಡಿದರು. ಮುಂಬೈನ ಫಿಲ್ಮ್ ಕಂಪ್ಯಾನಿಯನ್‌ನ ಸಿನಿಮಾ ಪತ್ರಕರ್ತ ಹಾಗೂ ವಿಮರ್ಶಕ ಸುಚಿನ್ ಮೆಹ್ರೋತ್ರಾ ಫಿಲ್ಮ್ ಕ್ರಿಟಿಸಿಸಂ ಕುರಿತು ಮಾತನಾಡಿದರು. ಇದೇ ವೇಳೆ ಕಿರುಚಿತ್ರೋತ್ಸವದ ತೀರ್ಪುಗಾರರಾದ ಲೆನ್ಸ್ ಬೇಸ್ಡ್ ಛಾಯಾಚಿತ್ರಗ್ರಾಹಕ ಕೆ.ಜೆ.ಪವನ್ ಹಾಗೂ ಪ್ರಾಯೋಜಕರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

'ಸಿನಿರಮಾ' ರಾಷ್ಟ್ರಮಟ್ಟದ ಕಿರುಚಿತ್ರ ಸ್ಪರ್ಧೆಗೆ ನೋಂದಣಿಯಾಗಿದ್ದ 50ಕ್ಕೂ ಹೆಚ್ಚು ಕಿರುಚಿತ್ರಗಳಲ್ಲಿ ಆಯ್ದ 7 ಚಿತ್ರಗಳನ್ನು ಪ್ರದರ್ಶಿಸಲಾಯಿತು. ಅತ್ಯುತ್ತಮ ಕಿರುಚಿತ್ರ ವಿಭಾಗದಲ್ಲಿ 'ಕ್ಯಾನ್‌ವಾಸ್(ತಮಿಳು)' ಪ್ರಥಮ, 'ಅಕ್ರೋಸ್(ಮಲಯಾಳಂ)' ದ್ವಿತೀಯ, 'ಇಲಿಬೋನು (ಕನ್ನಡ)' ತೃತೀಯ ಬಹುಮಾನ, ಅತ್ಯುತ್ತಮ ಮೊಬೈಲ್ ಚಿತ್ರ ವಿಭಾಗದಲ್ಲಿ 'ಟು ಕೊಕನಟ್' ಪ್ರಥಮ, 'ಹೀಲ್ ವಿಥಿನ್' ದ್ವಿತೀಯ ಬಹುಮಾನ ಪಡೆದವು. ಶ್ರೀರಾಮ್ ರಾಮಸ್ವಾಮಿ ಅತ್ಯುತ್ತಮ ಸಂಕಲನಕಾರ, ಸಂಜಯ್ ಚಂದ್ರಶೇಖರನ್ ಅತ್ಯುತ್ತಮ ನಿರ್ದೇಶಕ, ಕಾರ್ತಿಕ್ ಸಿಪ್ಪಿ ಅತ್ಯುತ್ತಮ ಛಾಯಾಗ್ರಾಹಕ, ಆದರ್ಶ್ ಕೃಷ್ಣದಾಸ್ ಉತ್ತಮ ನಟ, ಸ್ನೇಹ ರೆಜಿ ಉತ್ತಮ ನಟಿ ಪ್ರಶಸ್ತಿಗೆ ಪಾತ್ರರಾದರು. ಇವರಿಗೆ ಡಾಲಿ ಧನಂಜಯ ಪ್ರಶಸ್ತಿ ಪ್ರದಾನ ಮಾಡಿದರು. ಕಾರ್ಯಕ್ರಮದಲ್ಲಿ ಡಿಆರ್‌ಸಿ ಸಿನಿಮಾಸ್ ಮಾಲೀಕರಾದ ಶ್ರೀಮತಿ ವೈಶಾಲಿ ಹನುಮಂತ್ ಹಾಗೂ ಹನುಮಂತ್, ಅಮೃತ ಮೈಸೂರು ಕ್ಯಾಂಪಸ್‌ನ ಪ್ರಾಂಶುಪಾಲ ಡಾ.ಜಿ.ರವೀಂದ್ರನಾಥ್, ನಿರ್ದೇಶಕರಾದ ಬ್ರಹ್ಮಚಾರಿ ಅನಂತಾನಂದ ಚೈತನ್ಯ, ದೃಶ್ಯ ಸಂವಹನ ವಿಭಾಗದ ಮುಖ್ಯಸ್ಥ ಡಾ.ಮೌಲ್ಯ ಬಾಲಾಡಿ ಮತ್ತಿತರರು ಉಪಸ್ಥಿತರಿದ್ದರು.

15 ಕೋಟಿ ಆಸೆಗಾಗಿ ನಟ ಸತೀಶ್ ಕೌಶಿಕ್ ಕೊಲೆ

ದೆಹಲಿ ಪೊಲೀಸರಿಗೆ ಮಹಿಳೆ ದೂರು

ನವದೆಹಲಿ: ದಿವಂಗತ ನಟ ಸತೀಶ್ ಕೌಶಿಕ್ ಸಾವಿನ ಬಗ್ಗೆ ಆಘಾತಕಾರಿ ವಿಷಯವೊಂದು ಬಯಲಿಗೆ ಬಂದಿದ್ದು, ನಟನನ್ನು ಕೊಲೆ ಮಾಡಲಾಗಿದೆ ಎಂದು ಮಹಿಳೆಯೊಬ್ಬರು ದೆಹಲಿ ಪೊಲೀಸರಿಗೆ ದೂರು ನೀಡಿದ್ದಾರೆ.



ಈ ಮಹಿಳೆ ಬೇರೆ ಯಾರೂ ಅಲ್ಲ ಸತೀಶ್ ಕೌಶಿಕ್ ಅವರ ಸ್ನೇಹಿತ ಮತ್ತು ಉದ್ಯಮಿ ವಿಕಲ್ ಮಾಲು ಅವರ ಎರಡನೇ ಪತ್ನಿಯಾಗಿದ್ದು ಸಾನ್ವಿ ಮಾಲು. 15 ಕೋಟಿ ರುಪಾಯಿ ವಿವಾದಕ್ಕೆ ಸಂಬಂಧಿಸಿದಂತೆ ತನ್ನ ಪತಿ ವಿಕಲ್ ಮಾಲುನೇ ಸತೀಶ್ ಕೌಶಿಕ್‌ಗೆ ವಿಷ ನೀಡಿ ಕೊಂದಿರುವುದಾಗಿ ಮಹಿಳೆ ಹೇಳಿಕೊಂಡಿದ್ದಾರೆ. ಕೆಲ ವರ್ಷಗಳ ಹಿಂದೆ ತನ್ನ ಪತಿ ಸತೀಶ್ ಕೌಶಿಕ್‌ನಿಂದ 15 ಕೋಟಿ ರೂಪಾಯಿ ಪಡೆದಿದ್ದರು. ಆದರೆ ಗಂಡನ ಬಳಿ ಕೊಡಲು ಹಣ ಇಲ್ಲದ ಕಾರಣ ಕೊಲೆ ಮಾಡಿದ್ದಾನೆ ಎಂದು ಹೇಳಿದ್ದಾರೆ.

ಪೊಲೀಸರಿಗೆ ಕೊಲೆ ಸಂಬಂಧ ಯಾವುದೇ ಪುರಾವೆ ಸಿಕ್ಕಿಲ್ಲ: ಮಾಧ್ಯಮಗಳ ಪ್ರಕಾರ, ದೆಹಲಿ ಪೊಲೀಸರು ಈ ವಿಷಯಕ್ಕೆ ಸಂಬಂಧಿಸಿದಂತೆ ಸತೀಶ್ ಕೌಶಿಕ್ ಅವರ ಅಸಹಜ ಸಾವಿನ ಸಾಧ್ಯತೆಯನ್ನು ನಿರಾಕರಿಸಿದ್ದಾರೆ. ಮಹಿಳೆ ದೆಹಲಿ ಪೊಲೀಸರಿಗೆ ನೀಡಿರುವ ದೂರನ್ನು ಪರಿಶೀಲಿಸಲು ಸಾಧ್ಯವಾಗಿಲ್ಲ ಎಂದು ಮೂಲಗಳು ಬಹಿರಂಗಪಡಿಸಿವೆ. ಆದರೆ ಈ ಆಪಾದಿತ ದೂರಿನ ಕುರಿತು ಅಂತಿಮ ನಿರ್ಧಾರವು ಇನ್ನೂ ಬರಬೇಕಿದೆ. ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳು ದೂರಿನ ಸತ್ಯಾಸತ್ಯತೆಯನ್ನು ಖಚಿತಪಡಿಸುತ್ತಾರೆ ಅಥವಾ ನಿರಾಕರಿಸುತ್ತಾರೆ ಎಂದು ಮೂಲಗಳು ತಿಳಿಸಿವೆ. ಮತ್ತೊಂದು ವರದಿ ಪ್ರಕಾರ, ಹೆಚ್ಚುವರಿ ಉಪ ಪೊಲೀಸ್ ಆಯುಕ್ತ (ನೈರುತ್ಯ–ಪಶ್ಚಿಮ) ರಾಜೀವ್‌ಕುಮಾರ್ ಅವರು, ಸ್ಥಳೀಯ ಪೊಲೀಸರು ಕೌಶಿಕ್ ಅವರ ಕುಟುಂಬದೊಂದಿಗೆ ಸಂಪರ್ಕದಲ್ಲಿದ್ದಾರೆ. ಅವರು ಅವರ ಸಾವಿನ ಬಗ್ಗೆ ಯಾವುದೇ ಅನುಮಾನಗಳನ್ನು ವ್ಯಕ್ತಪಡಿಸಿಲ್ಲ. ಇದುವರೆಗೆ ನಡೆದ ವಿಚಾರಣೆಗಳು ಯಾವುದೇ ಅನುಮಾನಾಸ್ಪದ ಅಥವಾ ಕೊಲೆಗೆ ಪೂರಕವಾದ ವಿಷಯಗಳು ಕಂಡುಬಂದಿಲ್ಲ. ಆದರೆ, ಪೊಲೀಸ್ ಕ್ರಮ ಮುಂದುವರಿದಿದೆ ಎಂದು ತಿಳಿಸಿದ್ದಾರೆ.

ಮೈಸೂರು ಮಿತ್ರ

ಸೋಮವಾರ 13 ಮಾರ್ಚ್ 2023



ಸಾವಿರಾರು ಜನರ ದರ್ಶನ, ಧ್ರುವಗೆ ಕಣ್ಣೀರ ವಿದಾಯ



ಚಾಮರಾಜನಗರದಲ್ಲಿ ಅಂತಿಮ ನಮನ, ಎಲ್ಲೆಡೆ ಶ್ರದ್ಧಾಂಜಲಿ



ಚಾಮರಾಜನಗರ, ಮಾ.12(ಎಸ್‌ಎಸ್)– ಶನಿವಾರ ಬೆಳಗ್ಗೆ ನಿಧನರಾದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ಅವರ ಅಂತಿಮ ದರ್ಶನವನ್ನು ಸಾವಿರಾರು ಜನರು ಪಡೆದರು.

ಮೈಸೂರಿನ ಧ್ರುವನಾರಾಯಣ್ ಅವರ ನಿವಾಸ, ಮೈಸೂರಿನ ಕಾಂಗ್ರೆಸ್ ಭವನ, ನಂಜನಗೂಡು ಹಾಗೂ ಚಾಮರಾಜ ನಗರದಲ್ಲಿ ಮೆರವಣಿಗೆ ಮತ್ತು ಅವರ ಸ್ವಗ್ರಾಮ ಹೆಗ್ಗವಾಡಿ ಗ್ರಾಮದಲ್ಲಿ ಶನಿವಾರ ಮತ್ತು ಭಾನುವಾರ ನೂರಾರು ಗಣ್ಯರು, ನಾಯಕರು ಮತ್ತು ಸಹಸ್ರಾರು ಬೆಂಬಲಿಗರು, ಅಭಿಮಾನಿಗಳು, ಸಂಬಂಧಿಕರು ಮತ್ತು ಗ್ರಾಮಸ್ಥರು ತಮ್ಮ ನೆಚ್ಚಿನ ನಾಯಕನನ್ನು ನೆನೆದು ಕಣ್ಣೀರು ಹಾಕಿದರು. ಹೆಗ್ಗವಾಡಿ ಗ್ರಾಮದಲ್ಲಿ ಶನಿವಾರ ಮಧ್ಯರಾತ್ರಿಯಿಂದ ಭಾನುವಾರ ಮಧ್ಯಾಹ್ನದವರೆಗೆ ಸಹಸ್ರಾರು ಜನರು ಸರತಿ ಸಾಲಿನಲ್ಲಿ ನಿಂತು ಧ್ರುವ ನಾರಾಯಣ್ ಅವರಿಗೆ ನಮನ ಸಲ್ಲಿಸಿದರು.

ಈ ವೇಳೆ ಮೃತದೇಹ ನೋಡುತ್ತಿದ್ದಂತೆಯೇ ಅನೇಕರು ಕಣ್ಣೀರು ಹಾಕಿದರು. ಕೆಲವರು ಬಿಕ್ಕಿ ಬಿಕ್ಕಿ ಅತ್ತರು. ಮತ್ತೆ ಕೆಲವರು ಬಾಸ್ ಬಾಸ್ ಧ್ರುವ ಬಾಸ್ ಎಂದು ಘೋಷಣೆ ಕೂಗುವ ಮೂಲಕ ತಮ್ಮ ನೆಚ್ಚಿನ ನಾಯಕನಿಗೆ ವಿದಾಯ ಹೇಳಿದರು. ಜಾತಿ–ಭೇದವಿಲ್ಲದೇ ಜನರು ಪಾಲ್ಗೊಂಡಿದ್ದು, ಧ್ರುವನಾರಾಯಣ್ ಅವರ ವ್ಯಕ್ತಿತ್ವ ಎಂತಹದು ಎಂಬುದನ್ನು ತೋರಿಸಿತು.

ಧ್ರುವಗೆ ಅಂತಿಮ ನಮನ: ಇದಕ್ಕೂ ಮುನ್ನ ಮಾಜಿ ಸಂಸದ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ಅವರಿಗೆ ಚಾಮರಾಜನಗರದಲ್ಲಿ ಶನಿವಾರ ಮಧ್ಯರಾತ್ರಿ ಅಂತಿಮ ನಮನ ಸಲ್ಲಿಸಲಾಯಿತು.

ಶನಿವಾರ ಮಧ್ಯರಾತ್ರಿ 12.05ಕ್ಕೆ ಧ್ರುವನಾರಾಯಣ್ ಅವರ ಮೃತದೇಹ ಚಾಮರಾಜನಗರದ ನಂಜನಗೂಡು ರಸ್ತೆ ಮೂಲಕ ನಗರದ ಎಲ್‌ಐಸಿ ಕಚೇರಿಗೆ ತಲುಪಿತು. ಈ ವೇಳೆ ಶಾಸಕ ಸಿ. ಪುಟ್ಟರಂಗ ಶೆಟ್ಟಿ, ಮಾಜಿ ಶಾಸಕರಾದ ಎ.ಆರ್. ಕೃಷ್ಣ ಮೂರ್ತಿ, ಎಸ್. ಬಾಲರಾಜು, ಕಾಡಾ ಅಧ್ಯಕ್ಷ ಜಿ. ನಿಜಗುಣರಾಜು, ಕಾಂಗ್ರೆಸ್‌ನ ಜಿಲ್ಲಾಧ್ಯಕ್ಷ ಪಿ. ಮರಿಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷ ಜಿ. ನಾರಾಯಣ್‌ಪ್ರಸಾದ್ ಸೇರಿದಂತೆ ಅನೇಕ ಮುಖಂಡರು ಪುಷ್ಪ ನಮನ ಸಲ್ಲಿಸಿದರು.

ನಂತರ ಮಂಗಳವಾದ್ಯ ಸಮೇತ ಸಂತೇಮರಹಳ್ಳಿ ವೃತ್ತ, ಭುವನೇಶ್ವರಿ ವೃತ್ತ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮೂಲಕ ಸತ್ತಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಗೆ ಧ್ರುವನಾರಾಯಣ್ ಅವರ ಮೃತದೇಹ ತರಲಾಯಿತು. ಅಲ್ಲಿ ಸಾರ್ವಜನಿಕ ದರ್ಶನಕ್ಕೆ ಇಡಲಾಯಿತು. ಈ ವೇಳೆ ಸಾವಿರಾರು ಜನರು ನೆಚ್ಚಿನ ನಾಯಕನ ದರ್ಶನ ಪಡೆದರು.

ಧ್ರುವನಾರಾಯಣ್ ಪಾರ್ಥಿವ ಶರೀರಕ್ಕೆ ಕಾಂಗ್ರೆಸ್ ಧ್ವಜ ಹೊದಿಸಿದ ಡಿಕೆಶಿ

ಚಾಮರಾಜನಗರ, ಮಾ.12– ಆರ್. ಧ್ರುವನಾರಾಯಣ್ ಅವರ ಶವ ಇರಿಸಿದ್ದ ಶವ ಪೆಟ್ಟಿಗೆ ಮೇಲೆ ಕಾಂಗ್ರೆಸ್ ಬಾವುಟ ಹೊದಿಸಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕಣ್ಣೀರು ಹಾಕಿದರು. ಹೆಗ್ಗವಾಡಿ ಗ್ರಾಮದ ಧ್ರುವನಾರಾಯಣ್ ಅವರ ಮನೆಯ ಹಿಂಭಾಗದ ಜಾಗದಲ್ಲಿ ಧ್ರುವನಾರಾಯಣ್



ಅವರ ಮೃತದೇಹವನ್ನು ಸಾರ್ವಜನಿಕ ದರ್ಶನಕ್ಕೆ ಇಡಲಾಗಿತ್ತು. ಈ ವೇಳೆ ಆಗಮಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಶವ ಪೆಟ್ಟಿಗೆ ಮೇಲೆ ಕಾಂಗ್ರೆಸ್ ಬಾವುಟ ಹೊದಿಸುವ ಮೂಲಕ ಗೌರವ ಸೂಚಿಸಿದರು.

ನಂತರ ಕಣ್ಣೀರು ಹಾಕುವ ಮೂಲಕ ಪಕ್ಷದ ನಿಷ್ಠಾವಂತ ಮುಖಂಡನನ್ನು ಕಳೆದುಕೊಂಡಿದ್ದ ದುಃಖವನ್ನು ವ್ಯಕ್ತಪಡಿಸಿದರು. ನಂತರ ಧ್ರುವನಾರಾಯಣ್ ಅಂತ್ಯಕ್ರಿಯೆ ನಡೆಯುವ ಸ್ಥಳದಲ್ಲಿ ಧ್ರುವ ಅವರ ಶವಪೆಟ್ಟಿಗೆಗೆ ಹೆಗಲು ಕೊಟ್ಟು ಭಾವುಕರಾದರು. ಸಿದ್ದರಾಮಯ್ಯ, ರೋಜಿಜಾನ್, ಚೆಲುವನಾರಾಯಣ ಸ್ವಾಮಿ, ದಿನೇಶ್ ಗುಂಡೂರಾವ್, ಸತೀಶ್ ಜಾರಕಿಹೊಳಿ, ಡಾ.ಜಿ. ಪರಮೇಶ್ವರ್, ಎಚ್. ಆಂಜನೇಯ, ಡಿ.ಕೆ. ಸುರೇಶ್, ಯತ್ರೀಂದ್ರ ಸಿದ್ದರಾಮಯ್ಯ, ಎಚ್. ವಿಶ್ವನಾಥ್, ಎಚ್.ಸಿ. ಮಹದೇವಯ್ಯ, ಕೆ.ಎಚ್. ಮುನಿಯಪ್ಪ ಸೇರಿದಂತೆ ಅನೇಕ ಗಣ್ಯರು ಧ್ರುವನಾರಾಯಣ್ ಮೃತದೇಹಕ್ಕೆ ಹೂಗುಚ್ಛ ಇಟ್ಟು ಅಂತಿಮ ನಮನ ಸಲ್ಲಿಸಿದರು.

ಬಳಿಕ ಮಧ್ಯರಾತ್ರಿ 1.30ರಲ್ಲಿ ಚಾಮರಾಜನಗರದಿಂದ ಬದನಗುಪ್ಪೆ ಮಾರ್ಗವಾಗಿ ಅವರ ಸ್ವಗ್ರಾಮ ಹೆಗ್ಗವಾಡಿಗೆ 2.10ಕ್ಕೆ ತರಲಾಯಿತು. ಅಲ್ಲಿ ಧ್ರುವನಾರಾಯಣ್ ಅವರ ಮನೆಯ ಹಿಂಭಾಗದಲ್ಲಿ ಸಾರ್ವಜನಿಕ ದರ್ಶನಕ್ಕೆ ಇಡಲಾಯಿತು. ಜಿಲ್ಲೆಯ ಹಲವೆಡೆ ಧ್ರುವನಾರಾಯಣ್ ಕಟೌಟ್ ಕಂಡು ಬಂತು. ಅಭಿಮಾನಿಗಳು ಮೌನಾಚರಣೆಯ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದರು. ಇದಕ್ಕೂ ಮೊದಲು ನಂಜನಗೂಡಿನಿಂದ ಚಾಮರಾಜನಗರಕ್ಕೆ ಮೃತದೇಹ ತರುವಾಗ ಮುತ್ತಿಗೆ, ಬದನಗುಪ್ಪೆ, ಬೆಂಡರವಾಡಿ ಸೇರಿದಂತೆ ಹಲವೆಡೆ ಗ್ರಾಮಸ್ಥರು ಧ್ರುವನಾರಾಯಣ್‌ಗೆ ಅಂತಿಮ ನಮನ ಸಲ್ಲಿಸಿದರು.

ಧ್ರುವನಾರಾಯಣ್ ಪುತ್ರನಿಗೆ ಟಿಕೇಟ್ ನೀಡಲು ಒತ್ತಾಯಿಸಿ ಘೋಷಣೆ



ಘೋಷಣೆ ಕೂಗುತ್ತಿದ್ದ ಅಭಿಮಾನಿಗಳನ್ನು ಸಮಾಧಾನಪಡಿಸುತ್ತಿರುವ ಸಿದ್ದರಾಮಯ್ಯ

ಚಾಮರಾಜನಗರ, ಮಾ.12– ಆರ್. ಧ್ರುವನಾರಾಯಣ್ ಅವರ ಬೆಂಬಲಿಗರು ಹಾಗೂ ಅಭಿಮಾನಿಗಳು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಧ್ರುವನಾರಾಯಣ್ ಅವರ ಪುತ್ರ ದರ್ಶನ್‌ಗೆ ಟಿಕೇಟ್ ನೀಡುವಂತೆ ಒತ್ತಾಯಿಸಿ ಘೋಷಣೆ ಕೂಗಿದ ಘಟನೆ ತಾಲೂಕಿನ ಹೆಗ್ಗವಾಡಿ ಗ್ರಾಮದಲ್ಲಿ ಭಾನುವಾರ ನಡೆಯಿತು.

ಧ್ರುವನಾರಾಯಣ್ ಅವರ ಅಂತ್ಯಕ್ರಿಯೆ ನಿಗದಿಯಾಗಿದ್ದ ಜಮೀನಿನಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಉಪ ಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್, ಮೈಸೂರು ವಿಭಾಗದ ಉಸ್ತುವಾರಿ ರೋಜಿಜಾನ್, ಮಾಜಿ ಸಚಿವ ದಿನೇಶ್‌ಗುಂಡೂರಾವ್ ಸೇರಿದಂತೆ ಅನೇಕ ಗಣ್ಯರು ಕುಳಿತಿದ್ದರು.

ಈ ವೇಳೆ ಗಣ್ಯರ ಹಿಂಭಾಗ ಕುಳಿತಿದ್ದ ಧ್ರುವನಾರಾಯಣ್ ಅವರ ಅಪಾರ ಅಭಿಮಾನಿಗಳು, ಬೆಂಬಲಿಗರು, ಕಾರ್ಯಕರ್ತರು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಧ್ರುವನಾರಾಯಣ್ ಅವರ ಪುತ್ರ ದರ್ಶನ್ ಅವರಿಗೆ ಟಿಕೆಟ್ ನೀಡಬೇಕೆಂದು ಘೋಷಣೆ ಕೂಗುತ್ತಾ ಒತ್ತಾಯಿಸಲಾರಂಭಿಸಿದರು.

ಏಕಾಏಕಿ ಈ ಘೋಷಣೆಯಿಂದ ಮೊದಲಿಗೆ ಗಣ್ಯರು ವಿಚಲಿತರಾದರು. ನಂತರ ವಿಷಯ ತಿಳಿದು ಸುಮ್ಮನಾದರು. ಅಭಿಮಾನಿಗಳಿಂದ ಘೋಷಣೆ ಹೆಚ್ಚಾದಾಗ ಡಿ.ಕೆ ಶಿವಕುಮಾರ್ ಎದ್ದು ನಿಂತು ಅಭಿಮಾನಿಗಳತ್ತ ಕೈಮುಗಿದು ಸುಮ್ಮನಿರುವಂತೆ ಮನವಿ ಮಾಡಿದರು. ನಂತರ ಸಿದ್ದರಾಮಯ್ಯ, ಡಾ.ಜಿ. ಪರಮೇಶ್ವರ್ ಅವರು ಸಹ ಎದ್ದು ನಿಂತು ಸುಮ್ಮನಿರುವಂತೆ ಮನವಿ ಮಾಡಿದರು. ಇಷ್ಟಾದರೂ ಅಭಿಮಾನಿಗಳು ಘೋಷಣೆ ನಿಲ್ಲಿಸದಿದ್ದಾಗ ಮುಂದಿನ ದಿನಗಳಲ್ಲಿ ನಿರ್ಧಾರ ಕೈಗೊಳ್ಳುವುದಾಗಿ ಗಣ್ಯರು ಭರವಸೆ ನೀಡಿದರು. ಅಂತ್ಯಕ್ರಿಯೆ ಮುಗಿದು ಡಿ.ಕೆ.ಶಿವಕುಮಾರ್ ವಾಪಾಸ್ ತೆರಳುವಾಗಲೂ ಧ್ರುವನಾರಾಯಣ್ ಅಭಿಮಾನಿಗಳು ಘೋಷಣೆ ಕೂಗಿ ದರ್ಶನ್‌ಗೆ ಟಿಕೆಟ್ ನೀಡುವಂತೆ ಮನವಿ ಮಾಡಿದರು.

ಎದೆ ನೋವಿನಿಂದ ಶಾಸಕ ಮಹೇಶ್ ಆಸ್ಪತ್ರೆಗೆ ದಾಖಲು

ನಾನು ಆರೋಗ್ಯವಾಗಿದ್ದೇನೆ, ಸೋಮವಾರ ಡಿಸ್ಚಾರ್ಜ್ ಆಗುತ್ತೇನೆ

ಕೊಳ್ಳೇಗಾಲ, ಮಾ.12– ಕೊಳ್ಳೇಗಾಲದ ಶಾಸಕ ಎನ್. ಮಹೇಶ್ ಅವರನ್ನು ಮೈಸೂರಿನ ಅಪೋಲೋ ಆಸ್ಪತ್ರೆಗೆ ದಾಖಲು ಮಾಡಲಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ.



ಭಾನುವಾರ ಬೆಳಗ್ಗೆ ಇದ್ದಕ್ಕಿದ್ದಂತೆ ಎದೆ ನೋವು ಕಾಣಿಸಿಕೊಂಡ ಅವರಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ನಂತರ ವೈದ್ಯರ ಸಲಹೆ ಮೇರೆಗೆ ಮೈಸೂರಿನ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಸೋಮವಾರ ಆಸ್ಪತ್ರೆಯಿಂದ ಬಿಡುಗಡೆಯಾಗಲಿದ್ದಾರೆ.

ಆರೋಗ್ಯವಾಗಿದ್ದೇನೆ: ಬಂಧುಗಳೇ, ಗೆಳೆಯರೇ ನಿಮ್ಮೆಲ್ಲರ ಹರಕೆ, ಹಾರೈಕೆಗಳಿಂದ ನಾನು ಆರೋಗ್ಯವಾಗಿದ್ದೇನೆ. ವೈದ್ಯರು ಒಂದು ದಿನ ಆಸ್ಪತ್ರೆಯಲ್ಲಿ ವಿಶ್ರಾಂತಿ ಪಡೆಯಲು ಸೂಚಿಸಿದ್ದಾರೆ. ನನಗೆ ಏನು ತೊಂದರೆ ಇಲ್ಲ, ದಯಮಾಡಿ ಯಾರು ಆಸ್ಪತ್ರೆಗೆ ಬರಬೇಡಿ, ಇದರಿಂದ ಬೇರೆ ರೋಗಿಗಳಿಗೂ ತೊಂದರೆ ಆಗುತ್ತೆ ನಾಳೆಯಿಂದ ನಿಮ್ಮ ಮುಂದೆ ಎಂದಿನಂತೆ ನಾನು ಓಡಾಡುತ್ತೇನೆ. ನಾನೇ ಬಂದು ನಿಮ್ಮೆಲ್ಲರನ್ನು ಭೇಟಿ ಮಾಡುವೆ ಎಂದು ಶಾಸಕ ಎನ್. ಮಹೇಶ್ ಅವರು ತಮ್ಮ ಅಭಿಮಾನಿಗಳು, ಹಿತೈಷಿಗಳ ಮತ್ತು ಬಿಜೆಪಿ ಕಾರ್ಯಕರ್ತರಿಗೆ ಜಾಲತಾಣದ ಮೂಲಕ ಸಂದೇಶ ರವಾನಿಸಿದ್ದಾರೆ.

ಧ್ರುವನಾರಾಯಣ್ ಮನೆಗೆ ಅಂಬೇಡ್ಕರ್ ಮೊಮ್ಮಗ ಭೇಟಿ

ಮಾಜಿ ಸಂಸದ ಆರ್. ಧ್ರುವನಾರಾಯಣ್ ಅವರ ಹೆಗ್ಗವಾಡಿ ನಿವಾಸಕ್ಕೆ ಭಾನುವಾರ ಸಂಜೆ ಡಾ.ಬಿ.ಆರ್. ಅಂಬೇಡ್ಕರ್ ಅವರ ಮೊಮ್ಮಗ ಭೀಮರಾವ್ ಯಶವಂತರಾವ್ ಅಂಬೇಡ್ಕರ್ ಭೇಟಿ ನೀಡಿ, ಧ್ರುವನಾರಾಯಣ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ನಂತರ ಧ್ರುವನಾರಾಯಣ್ ಅವರ ಪತ್ನಿ ವೀಣಾ ಧ್ರುವನಾರಾಯಣ್, ಮಕ್ಕಳಾದ ದರ್ಶನ್, ಧೀರೆನ್ ಸೇರಿದಂತೆ ಕುಟುಂಬ ವರ್ಗದವರಿಗೆ ಸಾಂತ್ವನ ಹೇಳಿದರು.



ಧ್ರುವ ನಿಧನಕ್ಕೆ ಗಣ್ಯರ ಕಂಬನಿ

ಚಾಮರಾಜನಗರ, ಮಾ.12– ಮಾಜಿ ಸಂಸದ ಮತ್ತು ಸರಳ ಸಜ್ಜನಿಕೆಯ ಧ್ರುವನಾರಾಯಣ್ ಅವರ ನಿಧನಕ್ಕೆ ಗಣ್ಯರು ಪಕ್ಷಾತೀತವಾಗಿ ಕಂಬನಿ ಮಿಡಿಯುವ ಮೂಲಕ ಸಂತಾಪ ಸೂಚಿಸಿದ್ದಾರೆ.

ಆತ್ಮೀಯ ಸ್ನೇಹಿತರಾಗಿದ್ದರು. ಅವರು ಸರಳ ಸಜ್ಜನಿಕೆ ಆದರ್ಶ ರಾಜಕಾರಣಿಯಾಗಿದ್ದರು. ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದರು.

–ಎಂ. ರುದ್ರೇಶ್, ಅಧ್ಯಕ್ಷರು, ಕೆಆರ್‌ಐಡಿಎಲ್.

ಧೀಮಂತ ನಾಯಕರಾಗಿದ್ದ ಧ್ರುವನಾರಾಯಣ್ ಅವರನ್ನು ಕಳೆದುಕೊಂಡ ನಾವು ಅನಾಥರಾಗಿದ್ದೇವೆ. ಜಿಲ್ಲೆಯ ಅಭಿವೃದ್ಧಿಗೆ ಪಣತೊಟ್ಟು ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದರು. ಅವರ ಅಕಾಲಿಕ ಮರಣದಿಂದ ಜಿಲ್ಲೆಗೆ ಅಪಾರ ನಷ್ಟವಾಗಿದೆ.

– ಪಿ. ಮರಿಸ್ವಾಮಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು.

ಧ್ರುವನಾರಾಯಣ್ ಸರಳ ಸಜ್ಜನಿಕೆಯ ರಾಜಕಾರಣಿ ನಾಡಿನ ಧೀಮಂತ ನಾಯಕರು. ಇವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ಭಗವಂತ ನೀಡಲಿ.

– ನಿಜಗುಣರಾಜು, ಕಾಡಾ ಅಧ್ಯಕ್ಷರು.

ಧ್ರುವನಾರಾಯಣ್ ಸಜ್ಜನ ರಾಜಕಾರಣಿ, ಮೃಧುಭಾಷಿ ಕ್ರೀಯಾಶೀಲ ರಾಜಕಾರಣಿಯಾಗಿದ್ದರು. ಅವರ ನಿಧನಕ್ಕೆ ಸಂತಾಪ ಸೂಚಿಸುತ್ತೇನೆ.

– ಜಿ. ನಾರಾಯಣಪ್ರಸಾದ್, ಜಿಲ್ಲಾ ಬಿಜೆಪಿ ಅಧ್ಯಕ್ಷರು.

ಧ್ರುವನಾರಾಯಣ್ ಅವರು ತಲಾ ಎರಡು ಬಾರಿ ಶಾಸಕರು, ಸಂಸದರು ಆಗಿದ್ದರು. ಸಹ ಯಾವುದೇ ಕಳಂಕ ಹೊತ್ತಿರಲಿಲ್ಲ. ಅವರೊಬ್ಬ ಆದರ್ಶ ರಾಜಕಾರಣಿ ಆಗಿದ್ದರು.

– ಮಹೇಶ್‌ಕುಮಾರ್, ರೈತ ಮುಖಂಡ

ಧ್ರುವನಾರಾಯಣ್ ಶಾಸಕರಾಗಿ, ಸಂಸದರಾಗಿ ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡುವ ಮೂಲಕ ಜನರ ಮನದಲ್ಲಿ ಉಳಿದಿದ್ದಾರೆ. ಅವರ ನಿಧನದಿಂದ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ.

– ಉಮ್ಮತ್ತೂರು ಇಂದುಶೇಖರ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರು.

ನಾನು ಧ್ರುವನಾರಾಯಣ್ 25 ವರ್ಷಗಳ ಒಡನಾಡಿಗಳು. ನಾವು ಅವರನ್ನು ಬೆಳೆಸಿದ್ದೆವು, ಅವರು ನಮ್ಮನ್ನು ಬೆಳೆಸಿದರು. ಸರಳ ಸಜ್ಜನಿಕೆಯಾಗಿದ್ದ ಅವರ ಸಾವು ಪಕ್ಷಕ್ಕೆ ಮಾತ್ರವಲ್ಲದೇ ರಾಜ್ಯಕ್ಕೆ ತುಂಬಲಾರದ ನಷ್ಟ.

– ಕೆ.ಪಿ. ಸದಾಶಿವಮೂರ್ತಿ, ಜಿಪಂ ಮಾಜಿ ಸದಸ್ಯರು.

ಉತ್ತಮ ಸಂಸದೀಯ ಪಟುವಾಗಿದ್ದ ಧ್ರುವ ಜಿಲ್ಲೆಗೆ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದರು. ಸರಳ ಸಜ್ಜನಿಕೆಯ ವ್ಯಕ್ತಿಯಾಗಿದ್ದ ಅವರ ನಿಧನ ತುಂಬಲಾರದ ನಷ್ಟವಾಗಿದೆ.

– ವಾಟಾಳ್ ನಾಗರಾಜು, ಮಾಜಿ ಶಾಸಕರು.

ಧ್ರುವನಾರಾಯಣ್ ಅವರ ನಿಧನಕ್ಕೆ ಸಂತಾಪವನ್ನು ಸೂಚಿಸುತ್ತೇನೆ. ಅವರ ನಿಧನದಿಂದ ಜಿಲ್ಲೆಗೆ ಮಾತ್ರ ನಷ್ಟವಾಗಿಲ್ಲ. ಇಡೀ ರಾಜ್ಯಕ್ಕೆ ನಷ್ಟವಾಗಿದೆ. ಅವರೊಬ್ಬ ಕ್ರೀಯಾಶೀಲ ರಾಜಕಾರಣಿಯಾಗಿದ್ದು ಎಲ್ಲರಿಗೂ ಮಾದರಿಯಾಗಿದ್ದರು.

– ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ, ಮಾಜಿ ಶಾಸಕರು.

ಧ್ರುವನಾರಾಯಣ್ ಅವರ ಜೊತೆ ನನ್ನದು ಮೂವತ್ತು ವರ್ಷದ ಸ್ನೇಹ. ಅಪರೂಪದ ರಾಜಕಾರಣಿ. ಹೇಗೆ ಜನರ ಕೆಲಸ ಮಾಡಬೇಕು ಅಂತ ತೋರಿಸಿದರು. ಇದು ಕಾಂಗ್ರೆಸ್ ಪಾಲಿಗೆ ತುಂಬಲಾರದ ನಷ್ಟ ವಿಧಾನಸಭೆ ಪ್ರವೇಶ ಮಾಡಲು ಅವರಿಗೆ ಅವಕಾಶವಿತ್ತು. ನಾವೂ ಕೂಡ ಅವರ ಕುಟುಂಬದ ಜೊತೆಗೆ ನಿಲ್ಲಬೇಕಾಗುತ್ತದೆ.

–ದಿನೇಶ್ ಗುಂಡೂರಾವ್, ಮಾಜಿ ಸಚಿವರು.

ಧ್ರುವನಾರಾಯಣ್ ಅವರ ನಿಧನ ಕಾಂಗ್ರೆಸ್ ಪಕ್ಷಕ್ಕೆ ಹಾಗೂ ಈ ಭಾಗದ ಜನರಿಗೆ ನಷ್ಟ ಸಂಸದನಾದರೂ ಕೂಡ ಗ್ರಾಮ ಪಂಚಾಯಿತಿ ಸದಸ್ಯರ ರೀತಿ ಕೆಳಮಟ್ಟಕ್ಕಿಳಿದು ಅಭಿವೃದ್ಧಿ ಕೆಲಸ ಮಾಡಿದ್ದರು.

–ಸತೀಶ್ ಜಾರಕಿಹೊಳಿ, ಕೆಪಿಸಿಸಿ ಕಾರ್ಯಾಧ್ಯಕ್ಷರು.

ಧ್ರುವನಾರಾಯಣ್ ಅವರ ನಿಧನದಿಂದ ಅವರ ಕುಟುಂಬಕ್ಕೆ ಮಾತ್ರವಲ್ಲದೇ ಈ ಭಾಗದ ಜನತೆಗೂ ಬಹಳ ನಷ್ಟ ಉಂಟಾಗಿದೆ. ಅವರ ಸಾವಿನ ವಿಚಾರ ಅರಗಿಸಿಕೊಳ್ಳಲು ಬಹಳ ದಿನ ಬೇಕಾದೀತು.

–ಅಮ್ಮನಪುರ ಮಲ್ಲೇಶ್, ಬಿಜೆಪಿ ರೈತ ಮುಖಂಡರು.

ರೆಡ್ಡಿ ನಾಗರಾಜು ನಿಧನ



ಯಳಂದೂರು, ಮಾ.12– ತಾಲೂಕಿನ ಸಮೀಪದ ಇರಸವಾಡಿ ಗ್ರಾಮದ ಉಪ್ಪಾರ ಬಡಾವಣೆಯ ನಿವಾಸಿ ರೆಡ್ಡಿ ನಾಗರಾಜು (50) ಭಾನುವಾರ ಮುಂಜಾನೆ ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೃತರು ಪತ್ನಿ, ಮೂವರು ಪುತ್ರಿಯರು ಮತ್ತು ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ಇರಸವಾಡಿ ಉಪ್ಪಾರ ಜನಾಂಗದ ರುದ್ರಭೂಮಿಯಲ್ಲಿ ನೆರವೇರಿತು.

ಪುಟ್ಟಬಸಮ್ಮ



ಗುಂಡ್ಲುಪೇಟೆ, ಮಾ.12– ತಾಲೂಕಿನ ತೊಂಡವಾಡಿ ಗ್ರಾಮದ ನಿವಾಸಿ ಪುಟ್ಟಬಸಮ್ಮ (68) ಭಾನುವಾರ ನಿಧನರಾದರು. ಮೃತರು ಐವರು ಸಹೋದರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ಸೋಮವಾರ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆನೆ ಕಾಲು ಮೂಳೆ, ಗಜಮುತ್ತು ಮಾರಲೆತ್ನಿಸಿದ ಆರೋಪಿ ಬಂಧನ





ಮಡಿಕೇರಿ, ಮಾ.12– ಮಡಿಕೇರಿಯ ಸಂಪಿಗೆಕಟ್ಟೆ ಬಸ್ ತಂಗುದಾಣವೊಂದರ ಬಳಿ ಆನೆಯ ಕಾಲು ಮೂಳೆ, ಗಜಮುತ್ತುವಿನಂತೆ ಇರುವ ಮೊಟ್ಟೆಯಾಕಾರದ ಮೂರು ವಸ್ತುಗಳನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ಆರೋಪಿಯನ್ನು ಸಿಐಡಿ ಪೊಲೀಸ್ ಅರಣ್ಯ ಘಟಕದ ಅಧಿಕಾರಿಗಳು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದಾಗ ಪೊಲೀಸರು ಮಾಲು ಸಹಿತ ಆರೋಪಿ ನಿಜಾಮುದ್ದಿನ್ ಎಂಬಾತನನ್ನು ವಶಕ್ಕೆ ಪಡೆದರು.

ಸಿಐಡಿ ಪೊಲೀಸ್ ಅರಣ್ಯ ಘಟಕದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಕೆ.ವಿ.ಶರತ್‌ಚಂದ್ರ ಅವರ ನಿರ್ದೇಶನದ ಮೇರೆಗೆ ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಘಟಕದ ಪೊಲೀಸ್ ಅಧೀಕ್ಷಕ ಕೆ.ಬಿ.ವಿಶ್ವನಾಥ್ ಅವರ ಮಾರ್ಗದರ್ಶನದಲ್ಲಿ ಮಡಿಕೇರಿ ಅರಣ್ಯ ಸಂಚಾರಿ ದಳದ ಪಿ.ಎಸ್.ಐ ಸಿ.ಯು. ಸವಿ, ಹೆಡ್ ಕಾನ್‌ಸ್ಟೇಬಲ್‌ಗಳಾದ ಶೇಖರ್, ರಾಘವೇಂದ್ರ, ಯೋಗೇಶ್, ಉಮೇಶ್, ಮೋಹನ, ಕಾನ್ಸ್ಟೇಬಲ್‌ಗಳಾದ ಸ್ವಾಮಿ, ಮಂಜುನಾಥ ಕಾರ್ಯಾಚರಣೆ ನಡೆಸಿದರು.

ಅಗಸ್ತ್ಯೇಶ್ವರ ದೇವಾಲಯದ ವಾರ್ಷಿಕ ಉತ್ಸವ ಸಂಪನ್ನ

ನಾಪೋಕ್ಲು, ಮಾ.12– ಸಮೀಪದ ಬಲಮುರಿಯ ಅಗಸ್ತ್ಯೇಶ್ವರ ದೇವಾಲಯದಲ್ಲಿ ವಾರ್ಷಿಕ ಉತ್ಸವ ವಿಜೃಂಭಣೆಯಿಂದ ಜರುಗಿತು.ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಉತ್ಸವ ಒಂದು ವಾರಗಳ ಕಾಲ ನಡೆಯಿತು.

ಸುತ್ತಮುತ್ತಲಿನ ಊರುಗಳ ಭಕ್ತರು ಪಾಲ್ಗೊಂಡಿದ್ದರು.ಉತ್ಸವಕ್ಕೆಸಂಬಂಧಿಸಿದಂತೆ ದೇವಾಲಯದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಶುಕ್ರವಾರ ಸಂಜೆ ಕಾವೇರಿ ಹೊಳೆಯಲ್ಲಿ ದೇವರ ಅವಭೃತ ಸ್ನಾನ ನೆರವೇರಿ ದೇವಾಲಯದ ಪ್ರಾಂಗಣದಲ್ಲಿ ನಡೆದ ದೇವರ ನೃತ್ಯಬಲಿಯನ್ನು ಅಧಿಕ ಸಂಖ್ಯೆಯ ಭಕ್ತರು ವೀಕ್ಷಿಸಿದರು. ಅರ್ಚಕ ಮಹಾಬಲೇಶ್ವರ ಅವರ ನೇತೃತ್ವದಲ್ಲಿ ಪೂಜಾ ವಿಧಿವಿಧಾನಗಳು ನೆರವೇರಿದವು. ಶನಿವಾರ ಅಜ್ಜಪ್ಪ ಕೋಲ ಹಾಗೂ ಚಾಮುಂಡಿ ಕೋಲಗಳು ಜರುಗಿ ದೇವಾಲಯದಲ್ಲಿ ಜರುಗಿದ ಶುದ್ಧ ಕಲಶದೊಂದಿಗೆ ಉತ್ಸವ ಸಂಪನ್ನಗೊಂಡಿತು. ಈ ಸಂದರ್ಭ ದೇವಾಲಯದ ತಕ್ಕ ಮುಖ್ಯಸ್ಥರು, ಆಡಳಿತ ಮಂಡಳಿ ಪದಾಧಿಕಾರಿಗಳು ಹಾಗೂ ಊರ ಪರ ಊರಿನ ಭಕ್ತಾದಿಗಳು ಅದಕ್ಕೆ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ವಿರಾಜಪೇಟೆ ಪುರಸಭೆ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಗದ್ದಲ, ಧಿಕ್ಕಾರಗಳ ಘೋಷಣೆ

ಬಜೆಟ್ ಬಗ್ಗೆ ಚರ್ಚೆಯೇ ನಡೆಯದೆ ಸಭೆ ಮುಂದೂಡಿಕೆ



ವಿರಾಜಪೇಟೆ, ಮಾ.12– ವಿರಾಜಪೇಟೆ ಪುರಸಭೆಯಲ್ಲಿ ಕರೆದಿದ್ದ ಬಜೆಟ್ ಪೂರ್ವಭಾವಿ ಸಭೆಯಲ್ಲಿ, ವಾಹನ ನಿಲುಗಡೆ ಶುಲ್ಕದ ವಿಚಾರವಾಗಿ ತೀವ್ರ ಗದ್ದಲ ಹಾಗೂ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಪರಸ್ಪರ ದಿಕ್ಕಾರದ ಘೋಷಣೆಯಿಂದ ಬಜೆಟ್ ಬಗ್ಗೆ ಚರ್ಚೆ ನಡೆಯದೆ ಸಭೆ ಮುಂದೂಡಲಾಯಿತು.

ಪುರಸಭೆ ಅಧ್ಯಕ್ಷೆ ಟಿ.ಆರ್. ಸುಶ್ಮಿತಾ ಅವರ ಅಧ್ಯಕ್ಷತೆಯಲ್ಲಿ ಪುರಸಭೆ ಸಭಾಂಗಣದಲ್ಲಿ ಕರೆಯಲಾಗಿದ್ದ ಸಭೆಯಲ್ಲಿ ಮೊದಲಿಗೆ ಸದಸ್ಯ ಮಹಮ್ಮದ್ ರಫಿ ಮಾತನಾಡಿ, ಕಳೆದ ಬಾರಿ ವಾಹನ ನಿಲುಗಡೆ ಶುಲ್ಕ ನಿರ್ಧಾರವನ್ನು ಕೈಬಿಡಲಾಗಿತ್ತು. ಆದರೆ ಇದೀಗ ಅಬ್ದುಲ್ ಕಲಾಂ ರಸ್ತೆಯಿಂದ ಗೋಣಿಕೊಪ್ಪ ಸಂಪರ್ಕ ರಸ್ತೆ, ಕಿತ್ತೂರು ರಾಣಿ ಚೆನ್ನಮ್ಮ ರಸ್ತೆ ಮತ್ತು ಗಾಂಧಿನಗರ ರಸ್ತೆಯಲ್ಲಿ ವಾಹನ ಶುಲ್ಕ ನಿಗದಿ ಮಾಡುತ್ತಿರುವುದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿ ಹಾಲು, ತರಕಾರಿ ತರಲು ಹೋದವರಿಗೆ ಶುಲ್ಕ ವಿಧಿಸುವುದು ಯಾವ ನ್ಯಾಯ. ಇದು ಜನರಿಗೆ ಹೊರೆಯಾಗಲಿದ್ದು ಅದನ್ನು ಕೈ ಬಿಡುವಂತೆ ಒತ್ತಾಯಿಸಿದರು.

ಇದಕ್ಕೆ ಬಿಜೆಪಿಯ ನಾಮಕರಣ ಸದಸ್ಯ ಕೂತಂಡ ಸಚೀನ್ ಪ್ರತಿಕ್ರಿಯಿಸಿ ಇತ್ತೀಚಿನ ದಿನಗಳಲ್ಲಿ ಪಟ್ಟಣದಲ್ಲಿ ವಾಹನ ನಿಲುಗಡೆ ಸಮಸ್ಯೆ ತೀವ್ರವಾಗಿದೆ. ಅಂಗಡಿ ಮಾಲೀಕರೆ ವಾಹನವನ್ನು ಬೆಳಗ್ಗೆಯಿಂದ ಸಂಜೆವರೆಗೆ ರಸ್ತೆಬದಿ ನಿಲ್ಲಿಸುತ್ತಾರೆ, ಇನ್ನು ಕೆಲವರು ಬೆಳಗ್ಗೆ ವಾಹನ ನಿಲ್ಲಿಸಿ ದೂರದ ಊರಿಗೆ, ಕೆಲಸಗಳಿಗೆಂದು ಹೋಗಿ ರಾತ್ರಿ ವಾಪಾಸ್ ಬಂದು ವಾಹನ ತೆಗೆಯುತ್ತಾರೆ. ಇದನ್ನು ತಪ್ಪಿಸಲು ಈ ರೀತಿ ಶುಲ್ಕ ಆಗತ್ಯವಿದೆ ಎಂದರು.

ಕಾಂಗ್ರೆಸ್ ಸದಸ್ಯ ಡಿ.ಪಿ.ರಾಜೇಶ್ ಮಾತನಾಡಿ, ಪಟ್ಟಣದ ಕಿತ್ತೂರುರಾಣಿ ಚೆನ್ನಮ್ಮ ರಸ್ತೆಯಲ್ಲಿ ನ್ಯಾಯಾಲಯ, ಸರಕಾರಿ ಆಸ್ಪತ್ರೆ ಪುರಸಭೆ ಕಛೇರಿ, ತಾಲೂಕು ಕಛೇರಿ, ಸ್ಟೇಟ್ ಬ್ಯಾಂಕ್ ಹಾಗೂ ಅನೇಕ ಕಚೇರಿಗಳು ಇವೆ. ದಿನ ನಿತ್ಯ ಇಲ್ಲಿ ಕೆಲಸಗಳಿಗೆ ಬಂದು ಹೋಗುವ ಜನರಿಗೆ ಸುಂಕದ ಹೊರೆ ಬೇಡ. ಇಂದು ಹತ್ತು ರೂ., ನಾಳೆ ಅದು ದಂದೆಯಾಗಿ ಶುಲ್ಕ ಹೆಚ್ಚಾಗುತ್ತ ಹೋಗುತ್ತದೆ. ಈಗಾಗಲೇ ಜನರು ಬೆಲೆ ಏರಿಕೆ ಇತ್ಯಾದಿ ಅರ್ಥಿಕ ಸಂಕಷ್ಟದಲ್ಲಿದ್ದು, ಅವರಿಗೆ ತೊಂದರೆ ನೀಡುವುದು ಸರಿಯಲ್ಲ ಎಂದಾಗ ಧ್ವನಿಗೂಡಿಸಿದ ಸದಸ್ಯ ಸಿ.ಕೆ.ಪ್ರಥ್ವಿನಾಥ್ ಶಾಸಕರ ಕಚೇರಿಗೆ ಹೋಗುವವರು ಶುಲ್ಕ ನೀಡಿ ತೆರಳುವುದು ಸರಿಯಲ್ಲ. ಸಂವಿಧಾನಕ್ಕೆ ಗೌರವ ನೀಡಿ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಬೇಡಿ ಎಂದರು.

ಸದಸ್ಯರ ವಾದ–ಪ್ರತಿವಾದವನ್ನು ಆಲಿಸಿದ ಎಸ್.ಹೆಚ್. ಮತ್ತೀನ್ ಧ್ವನಿಗೂಡಿಸಿ ವಾಹನ ಶುಲ್ಕದ ವಿಚಾರ ನಿಲ್ಲಿಸುವಂತೆ ಹೇಳಿದರು. ಕಾಂಗ್ರೆಸ್ ಸದಸ್ಯ ರಂಜಿ ಪೂಣಚ್ಚ ಮಾತನಾಡಿ, ವಾಹನ ಶುಲ್ಕ ವಿಚಾರದಲ್ಲಿ ಬಹುಮತದ ಮೂಲಕ ಶುಲ್ಕ ಎತ್ತವಳಿ ಬೇಕೆ ಬೇಡವೇ ಎಂದು ನಿರ್ಧಾರವಾಗಲಿ ಎಂದು ಪಟ್ಟು ಹಿಡಿದರು. ಈ ಸಂದರ್ಭ ಮುಖ್ಯಾಧಿಕಾರಿ ಚಂದ್ರಕುಮಾರ್ ಇದಕ್ಕೆ ತೀವ್ರ ಅಕ್ಷೇಪ ವ್ಯಕ್ತಪಡಿಸಿದರು.

ಆಡಳಿತ ಪಕ್ಷ ಬಿಜೆಪಿ ಸದಸ್ಯರಾದ ಜೂನ, ಅನಿತಾ, ಮಹಾದೇವ, ಸಚೀನ್, ಆಶಾ ಸುಬ್ಬಯ್ಯ ಮತ್ತಿತರರು ವಾಹನ ಶುಲ್ಕ ವಿಧಿಸಿಯೇ ತೀರಬೇಕೆಂದು ಒತ್ತಾಯಿಸಿದಾಗ, ಪ್ರತಿಪಕ್ಷ ಕಾಂಗ್ರೆಸ್ ಸದಸ್ಯರು ಸಭಾಂಗಣದ ಅಧ್ಯಕ್ಷ ಪೀಠದ ಮುಂದೆ ಧರಣಿ ನಡೆಸಿ ದಿಕ್ಕಾರ ಕೂಗಿದರು.

ಇದಕ್ಕೆ ಪ್ರತಿಯಾಗಿ ಸಭಾಂಗಣದ ಮುಂದೆ ಬಿಜೆಪಿ ಸದಸ್ಯರು ಇವರಿಗೆ ಎದುರಾಗಿ ನಿಂತು ದಿಕ್ಕಾರ ಕೂಗಿದಾಗ ಗೊಂದಲದ ವಾತಾವರಣ ಸೃಷ್ಟಿಯಾಯಿತು. ಪರಿಸ್ಥಿತಿ ಕೈ ಮೀರುತ್ತಿರುವುದನ್ನು ಮನಗಂಡ ಅಧ್ಯಕ್ಷೆ ಸುಸ್ಮೀತಾ ಸಭೆಯನ್ನು ಮುಂದೂಡಿರುವುದಾಗಿ ಘೋಷಿಸಿದರು. ಸಭೆಯಲ್ಲಿ ಪುರಸಭೆ ಕಾಮಗಾರಿ ಸ್ಥಾಯಿ ಸಮಿತಿ ಅಧ್ಯಕ್ಷೆ ಟಿ.ಕೆ.ಯಶೋಧ, ಸದಸ್ಯರು, ಅಭಿಯಂತರ ಹೇಮಾಕುಮಾರ್ ಕಛೇರಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

ನೀರಿನ ತೊಟ್ಟಿಗೆ ಬಿದ್ದಿದ್ದ ಕಾಡೆಮ್ಮೆ ರಕ್ಷಣೆ

ಮಡಿಕೇರಿ, ಮಾ.12– ತೋಟದಲ್ಲಿದ್ದ ನೀರು ಸಂಗ್ರಹದ ತೊಟ್ಟಿಗೆ ಆಯತಪ್ಪಿ ಬಿದ್ದ ಕಾಡೆಮ್ಮೆಯನ್ನು ಅರಣ್ಯ ಇಲಾಖೆ ಹಾಗೂ ಸ್ಥಳೀಯರು ರಕ್ಷಿಸಿರುವ ಘಟನೆ ಶನಿವಾರಸಂತೆಯ ಎಳನೀರುಗುಂಡಿ ಬಳಿ ನಡೆದಿದೆ.

ಬಿಸಿಲಿನ ತಾಪಮಾನ ಹೆಚ್ಚಾಗುತ್ತಿರುವಂತೆ ನೀರು ಮತ್ತು ಆಹಾರದ ಕೊರತೆಯನ್ನು ಎದುರಿಸುತ್ತಿರುವ ವನ್ಯಜೀವಿಗಳು ತೋಟದ ಫಸಲು ಮತ್ತು ಕೆರೆಗಳೆಡೆಗೆ ಮುಖ ಮಾಡುತ್ತಿವೆ. ಇಂದು ನೀರು ಕುಡಿಯಲೆಂದು ಎಳನೀರುಗುಂಡಿ ಗ್ರಾಮದ ಎಸ್ಟೇಟ್‌ಗೆ ನುಗ್ಗಿದ ಕಾಡೆಮ್ಮೆ ನೀರು ಸಂಗ್ರಹದ ತೊಟ್ಟಿ ಬಳಿ ಸಾಗಿದೆ. ನೀರು ಕುಡಿಯಲು ಯತ್ನಿಸಿದಾಗ ಆಯತಪ್ಪಿ ತೊಟ್ಟಿಗೆ ಬಿದ್ದಿದೆ. ನೀರಿನಲ್ಲಿ ಕಾಡೆಮ್ಮೆ ಪರದಾಡುತ್ತಿರುವುದನ್ನು ಗಮನಿಸಿದ ಸ್ಥಳೀಯರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು.

ಸ್ಥಳಕ್ಕೆ ಬಂದ ಶನಿವಾರಸಂತೆ ವಲಯ ಅರಣ್ಯಾಧಿಕಾರಿ ಪ್ರಫುಲ್ ಶೆಟ್ಟಿ ನೇತೃತ್ವದ ತಂಡ ತೋಟದ ಮಾಲೀಕರು ಹಾಗೂ ಕಾರ್ಮಿಕರ ಸಹಕಾರದಿಂದ ಕಾರ್ಯಾಚರಣೆ ನಡೆಸಿದರು. ಜೆಸಿಬಿ ಯಂತ್ರದ ಮೂಲಕ ನೀರಿನ ತೊಟ್ಟಿಯ ಒಂದು ಭಾಗದಲ್ಲಿ ಕಾಡೆಮ್ಮೆ ಮೇಲೆ ಬರಲು ದಾರಿ ಮಾಡಿಕೊಡಲಾಯಿತು. ನಂತರ ಮೇಲೆ ಬಂದ ಕಾಡೆಮ್ಮೆಯನ್ನು ಅರಣ್ಯ ಸಿಬ್ಬಂದಿಗಳು ಕಾಡಿಗಟ್ಟುವಲ್ಲಿ ಯಶಸ್ವಿಯಾದರು.



ಟಿಪ್ಪರ್ ಡಿಕ್ಕಿ: ಬೈಕ್ ಸವಾರ ಸಾವು

ಕುಶಾಲನಗರ, ಮಾ.12– ರಸ್ತೆ ಅಪಘಾತವೊಂದರಲ್ಲಿ ಯುವಕನೊರ್ವ ಸ್ಥಳದಲ್ಲಿಯೇ ಮೃತಪಟ್ಟ ಘಟನೆ ಹುದುಗೂರು ಗ್ರಾಮದಲ್ಲಿ ಶನಿವಾರ ನಡೆದಿದೆ.

ಯಡವನಾಡು ಗ್ರಾಮದ ನಿವಾಸಿ ಪ್ರವೀಣ್ (46) ಮೃತ ದುರ್ದೈವಿ. ಸಂಜೆ ಹಾರಂಗಿಯಿಂದ ಹುದುಗೂರು ಮಾರ್ಗವಾಗಿ ತಮ್ಮ ಬೈಕ್‌ನಲ್ಲಿ ಮನೆಗೆ ತೆರಳುತ್ತಿದ್ದ ಸಂದರ್ಭದಲ್ಲಿ ಸೋಮವಾರಪೇಟೆ ಕಡೆಯಿಂದ ವೇಗವಾಗಿ ಬರುತ್ತಿದ್ದ ಟಿಪ್ಪರ್ ವಾಹನ ಡಿಕ್ಕಿ ಹೊಡೆದ ಹಿನ್ನೆಲೆಯಲ್ಲಿ ಬೈಕ್ ಸವಾರನ ತಲೆಗೆ ಗಂಭೀರವಾದ ಪೆಟ್ಟು ಬಿದ್ದು ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾನೆ. ಈ ಸಂಬಂಧ ಟಿಪ್ಪರ್ ವಾಹನ ಚಾಲಕನನ್ನು ವಶಕ್ಕೆ ಪಡೆದಿರುವ ಗ್ರಾಮಾಂತರ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಕೆ.ಜಿ. ಗಿರಿರಾಜು ನಿಧನ



ಗೋಣಿಕೊಪ್ಪ, ಮಾ.12– ಸೀಗೆ ತೋಡುವಿನ ನಿವಾಸಿ ನಿವೃತ್ತ ಸೈನಿಕ ಕೆ.ಜಿ.ಗಿರಿರಾಜು(75) ಅವರು ಶನಿವಾರ ರಾತ್ರಿ ನಿಧನರಾದರು. ಅಂತ್ಯಕ್ರಿಯೆ ಅವರ ಹುಟ್ಟೂರಾದ ಸೋಮವಾರಪೇಟೆಯ ಕರ್ಕಳ್ಳಿಯ ರುದ್ರಭೂಮಿಯಲ್ಲಿ ಭಾನುವಾರ ನಡೆಯಿತು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಮಾಯಮ್ಮ



ನಾಪೋಕ್ಲು, ಮಾ.12– ಕೊಳಕೇರಿ ಗ್ರಾಮದ ಕಾನಂಡ ದಿವಂಗತ ಗಣಪತಿ ಮಾಸ್ಟರ್ ಅವರ ಧರ್ಮಪತ್ನಿ ದಾಟಿ ಮಾಯಮ್ಮ (83) ಶುಕ್ರವಾರ ದೈವಾಧೀನರಾಗಿದ್ದಾರೆ. ಶ್ರೀಯುತರು ನಾಲ್ವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಾಂಧವರನ್ನು ಅಗಲಿದ್ದು, ಅಂತ್ಯಕ್ರಿಯೆ ಶನಿವಾರ ಕೊಳಕೇರಿಯ ಮೃತರ ಸ್ವಗ್ರಾಮದಲ್ಲಿ ನೆರವೇರಿಸಲಾಯಿತು.

ಮೈಸೂರು ಮಿತ್ರ ಸೋಮವಾರ 13 ಮಾರ್ಚ್ 2023

ಓಬಿಸಿ ಸಂಶೋಧನಾ ವಿದ್ಯಾರ್ಥಿಗಳ ವೇದಿಕೆಗೆ ಆಯ್ಕೆ


ಶಿವಶಂಕರ್


ವಿವೇಕ್‌ಗೌಡ


ಪ್ರಸನ್ನ

ಮೈಸೂರು, ಮಾ.12– ಮೈಸೂರು ವಿಶ್ವವಿದ್ಯಾನಿಲಯದ ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾರ್ಥಿಗಳ ವೇದಿಕೆ ಅಧ್ಯಕ್ಷರಾಗಿ ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗದ ಸಂಶೋಧನಾ ವಿದ್ಯಾರ್ಥಿ ಶಿವಶಂಕರ್.ಜಿ, ಉಪಾಧ್ಯಕ್ಷರಾಗಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಕೆ.ವಿವೇಕ್‌ಗೌಡ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಗಾಂಧಿ ಅಧ್ಯಯನ ಕೇಂದ್ರದ ಸಂಶೋಧನಾ ವಿದ್ಯಾರ್ಥಿ ಪ್ರಸನ್ನ ಕುಮಾರ್ ಚಿಕ್ಕೆಲ್ಲಿ ಆಯ್ಕೆಯಾಗಿದ್ದು ಕಾರ್ಯದರ್ಶಿ, ಖಜಾಂಚಿ ಇನ್ನಿತರ ಪದಾಧಿಕಾರಿಗಳನ್ನು ಶೀಘ್ರ ನೇಮಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಸಮೃದ್ಧಿ ಎಕ್ಸ್‌ಪ್ರೆಸ್‌ವೇಯಲ್ಲಿ ಕಾರಿನ ಟೈರ್ ಸ್ಫೋಟಗೊಂಡು ಆರು ಮಂದಿ ಸಾವು

ಬುಲ್ಡಾನ: ಮಹಾರಾಷ್ಟ್ರದ ಬುಲ್ಡಾನಾ ಜಿಲ್ಲೆಯ ಸಮೃದ್ಧಿ ಎಕ್ಸ್‌ಪ್ರೆಸ್‌ವೇಯಲ್ಲಿ ಭಾನುವಾರ ಬೆಳಗ್ಗೆ ಕಾರಿನ ಟೈರ್ ಸ್ಫೋಟಗೊಂಡು ಆರು ಮಂದಿ ಮೃತಪಟ್ಟಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಾರುತಿ ಎರ್ಟಿಗಾ ಕಾರು ಇಲ್ಲಿನ ಔರಂಗಾಬಾದ್‌ನಿಂದ ಶೇಗಾಂವ್‌ಗೆ ತೆರಳುತ್ತಿದ್ದಾಗ ಶಿವನಿ ಪಿಸಾ ಗ್ರಾಮದಲ್ಲಿ ಬೆಳಗ್ಗೆ 8 ಗಂಟೆಗೆ ಅಪಘಾತ ಸಂಭವಿಸಿದೆ ಎಂದು ಅವರು ಹೇಳಿದರು. ಕಾರಿನಲ್ಲಿದ್ದ ಆರು ಪ್ರಯಾಣಿಕರು ಮೃತಪಟ್ಟಿದ್ದಾರೆ. ಪ್ರಾಥಮಿಕವಾಗಿ, ಅಪಘಾತಕ್ಕೆ ಕಾರಣವೆಂದರೆ ಟೈರ್ ಸ್ಫೋಟವಾಗಿದೆ. ಹೆಚ್ಚಿನ ವಿವರಗಳನ್ನು ನಿರೀಕ್ಷಿಸಲಾಗುತ್ತಿದೆ ಎಂದು ಅವರು ಹೇಳಿದರು.

ಪಿಹೆಚ್.ಡಿ



ಮೈಸೂರು, ಮಾ.12– ಗಂಗಾಧರ ಅವರು ಡಾ.ಎನ್.ಸರಸ್ವತಿ ಮಾರ್ಗದರ್ಶನದಲ್ಲಿ ಸಾದರಪಡಿಸಿದ 'ಹೊಯ್ಸಳರು ಮತ್ತು ದಕ್ಷಿಣ ಭಾರತದ ರಾಜಮನೆತನಗಳ ಸಂಬಂಧಗಳು: ಒಂದು ಅಧ್ಯಯನ(ಕ್ರಿ.ಶ.100–ಕ್ರಿ.ಶ.1342)' ಸಂಶೋಧನಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಹೆಚ್.ಡಿಗೆ ಪುರಸ್ಕರಿಸಿದೆ. ಗಂಗಾಧರ ಅವರು ತಿ.ನರಸೀಪುರ ಪ್ರಥಮ ದರ್ಜೆ ಕಾಲೇಜು ಇತಿಹಾಸ ವಿಭಾಗದ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಒಂದನೇ ಪುಟದಿಂದ

ದಶಪಥ ಎಕ್ಸ್ ಪ್ರೆಸ್ ವೇ ಲೋಕಾರ್ಪಣೆ

ನರೇಂದ್ರ ಮೋದಿ ಹೇಳಿದರು. ಬಹಳ ವರ್ಷಗಳಿಂದ ಎರಡೂ ನಗರಗಳ ಜನರು ಸಂಚಾರ ದಟ್ಟಣೆಯಿಂದ ರೋಸಿ ಹೋಗಿದ್ದರು. ಈ ಬಗ್ಗೆ ಹಲವು ಬಾರಿ ದೂರುಗಳು ಸಹ ಕೇಳಿ ಬಂದಿದ್ದವು. ಬೆಂಗಳೂರು–ಮೈಸೂರಿನ ಜನರಿಗೆ ಪ್ರಯಾಣಿಸಲು ನೇರ ಸಂಪರ್ಕ ಕಲ್ಪಿಸುವ ರಸ್ತೆ ಬಹಳ ಅವಶ್ಯಕತೆ ಇದ್ದ ಕಾರಣ ಕೇಂದ್ರ ಸರ್ಕಾರ ಈ ಬಗ್ಗೆ ಹೆಚ್ಚಿನ ಗಮನ ಹರಿಸಿ, ಎರಡು ನಗರಗಳ ಜನರಿಗೆ ದಶಪಥ ಹೆದ್ದಾರಿಯನ್ನು ಉಡುಗೊರೆಯಾಗಿ ನೀಡಿದ್ದು, ಈ ರಸ್ತೆಯಲ್ಲಿ ಕೇವಲ ಒಂದು ಗಂಟೆಯಲ್ಲಿ ಬೆಂಗಳೂರಿನಿಂದ ಮೈಸೂರಿಗೆ ತಲುಪಬಹುದಾಗಿದೆ ಎಂದರು.

ಈ ಮೂಲಕ ಮೈಸೂರು ನಗರದಲ್ಲಿ ಆರ್ಥಿಕಾಭಿವೃದ್ಧಿಗೆ ಒತ್ತು ಕೊಟ್ಟಂತಾಗಿದ್ದು, ಕೈಗಾರಿಕೋದ್ಯಮ ಸಹ ಬಹುಬೇಗ ಸಾಂಸ್ಕೃತಿಕ ನಗರಿಯಲ್ಲಿ ಬೆಳೆಯಲಿದೆ. ಈ ಒಂದು ರಸ್ತೆಯಿಂದ ಕೇವಲ ಮೈಸೂರಿಗರಿಗೆ ಮಾತ್ರ ಅನುಕೂಲವಾಗಿಲ್ಲ. ಬೆಂಗಳೂರು–ಮೈಸೂರು ನಡುವೆ ಬರುವ ಮಂಡ್ಯ ಹಾಗೂ ರಾಮನಗರ ಜಿಲ್ಲೆಗಳು ಪ್ರವಾಸೋದ್ಯಮ ಹಾಗೂ ಐತಿಹಾಸಿಕವಾಗಿ ಅಭಿವೃದ್ಧಿ ಕಾಣಲಿದೆ. ಎರಡು ಜಿಲ್ಲೆಯಲ್ಲಿರುವ ಅನೇಕ ಪ್ರವಾಸಿ ತಾಣಗಳು ಈ ಮೂಲಕ ಅಭಿವೃದ್ಧಿ ಕಾಣುವ ಜೊತೆಗೆ ಕೈಗಾರಿಕೋದ್ಯಮ ಸಹ ಮಂಡ್ಯ, ರಾಮನಗರದಲ್ಲಿ ತಲೆ ಎತ್ತಲಿದೆ ಎಂದರು. ಕಾವೇರಿ ಜನ್ಮಸ್ಥಳವಾದ ಕೊಡಗು ಜಿಲ್ಲೆಗೂ ಬಹು ಬೇಗ ತಲುಪಬಹುದು ಎಂದರು.

ನಾಲ್ವಡಿ, ಸರ್‌ಎಂವಿ ಕೊಡುಗೆ ಅಪಾರ: ಮೈಸೂರು ಭಾಗ ಸಂಪದ್ಭರಿತವಾಗಿ ಅಭಿವೃದ್ಧಿ ಕಂಡಿದೆ ಎಂದರೆ ಅದಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಸರ್ ಎಂ.ವಿಶ್ವೇಶ್ವರಯ್ಯ ಅವರ ಕೊಡುಗೆ ಬಹಳ ಇದೆ. ಈ ಭಾಗಕ್ಕೆ ಮೂಲಸೌಕರ್ಯ ಒದಗಿಸಿದ ಕೀರ್ತಿ ಇವರಿಬ್ಬರಿಗೂ ಸಲ್ಲಬೇಕು. ಮೂಲ ಸೌಕರ್ಯದಿಂದ ಉದ್ಯೋಗ ಸೃಷ್ಟಿಯಾಗುತ್ತದೆ. ಕೃಷಿ ವಲಯಕ್ಕೆ ಲಾಭವಾಗುತ್ತದೆ. ಇನ್ನಷ್ಟು ಕ್ಷೇತ್ರಗಳಲ್ಲಿ ಬಹುದೊಡ್ಡ ಲಾಭವನ್ನು ಮೂಲ ಸೌಕರ್ಯ ಒದಗಿಸಿಕೊಡುತ್ತದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಮೂಲ ಸೌಕರ್ಯ ಅಭಿವೃದ್ಧಿಗೆ 10 ಲಕ್ಷ ಕೋಟಿ ರೂ.ವನ್ನು ಮೀಸಲಿಟ್ಟಿದೆ. ಜೊತೆಗೆ ಕಳೆದ 9 ವರ್ಷದಿಂದ ಅಧಿಕಾರದಲ್ಲಿರುವ ನಮ್ಮ ಸರ್ಕಾರ ಈವರೆಗೆ 1 ಲಕ್ಷ ಕಿಲೋಮೀಟರ್ ಹೈವೇ ರಸ್ತೆಯನ್ನು ನಿರ್ಮಾಣ ಮಾಡಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ನಿತಿನ್ ಗಡ್ಕರಿ ಪ್ರಹ್ಲಾದ ಜೋಶಿ, ಅಬಕಾರಿ ಸಚಿವ ಗೋಪಾಲಯ್ಯ ಕೆ., ಯುವಜನ ಸೇವಾ ಮತ್ತು ಕ್ರೀಡಾ ಸಚಿವ ಡಾ:ಕೆ.ಸಿ.ನಾರಾಯಣಗೌಡ, ಎಸ್.ಟಿ.ಸೋಮಶೇಖರ್, ಸಂಸದರಾದ ಸುಮಲತಾ ಅಂಬರೀಶ್, ಪ್ರತಾಪ್ ಸಿಂಹ ಉಪಸ್ಥಿತರಿದ್ದರು. ಮೋದಿ ಅವರ ಭಾಷಣವನ್ನು ವಿಧಾನ ಪರಿಷತ್ ಸದಸ್ಯ ಪ್ರತಾಪ್ ಸಿಂಹ ನಾಯಕ್ ಕನ್ನಡಕ್ಕೆ ತರ್ಜುಮೆ ಮಾಡಿದರು.

ರೋಡ್ ಶೋ ಮೂಲಕ ಶಕ್ತಿ ಪ್ರದರ್ಶನ

ಅವರಿಗೆ ಸಾಂಸ್ಕೃತಿಕ ಕಲಾತಂಡ ಸ್ವಾಗತ ಕೋರಿತು. ಮೋದಿ ರೋಡ್ ಶೋ ಹಿನ್ನಲೆಯಲ್ಲಿ ಬೆಂಗಳೂರು– ಮೈಸೂರು ಹೆದ್ದಾರಿಗೆ ಕಬ್ಬಿಣ ಬ್ಯಾರಿಕೆಟ್ ಅಳವಡಿಸಲಾಗಿತ್ತು. ಮೂರು ಅಡಿಗೆ ಒಬ್ಬರಂತೆ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿತ್ತು. ಮೋದಿ ರೋಡ್ ಶೋ ನಡೆಸುವಾಗ ಕಾರಿನ ಬಳಿ ಮೂರು ಮಂದಿ ಹಾಗೂ ಸುತ್ತಮುತ್ತ 20ಕ್ಕೂ ಅಧಿಕ ಎಸ್‌ಪಿಜಿ ಅಧಿಕಾರಿಗಳು ಶಸ್ತ್ರ ಸಜ್ಜಿತವಾಗಿ ಕಾವಲಿಗೆ ನಿಂತಿದ್ದರು.

ಭಾರೀ ಬಂದೋಬಸ್ತ್, ಜನರ ಪರದಾಟ: ಭಾರೀ ಬಂದೋಬಸ್ತ್ ಏರ್ಪಡಿಸಿದ್ದರಿಂದ ಮೋದಿ ನೋಡಲು ಕೆಲವರು ರಸ್ತೆ ಬಳಿಗೆ ಬಾರದಂತಾಯಿತು. ಎರಡು ಕಡೆ ಬ್ಯಾರಿಕೆಟ್ ಅಳವಡಿಸಿ, ಪಾರ್ಕಿಂಗ್‌ಗೆ 1 ಕಿಲೋಮೀಟರ್‌ನಷ್ಟು ದೂರದಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿದ್ದರಿಂದ ನೂರಾರು ಜನರು ರೋಡ್ ಶೋ ವೀಕ್ಷಿಸದೇ ನಿರಾಶರಾದರು.

ಜನರಿಗೆ ಮಜ್ಜಿಗೆ, ನೀರು ವ್ಯವಸ್ಥೆ: ಬೆಳಗ್ಗೆ 9 ಗಂಟೆಯಿಂದಲೇ ಮೋದಿ ರೋಡ್ ಶೋಗೆ ಕಾದು ನಿಂತಿದ್ದ ಜನರ ದಣಿವು ನಿವಾರಿಸಲು ಬಿಜೆಪಿ ಮುಖಂಡ ಅಶೋಕ್ ಜಯರಾಂ ನೇತೃತ್ವದಲ್ಲಿ ಜನರಿಗೆ ಮಜ್ಜಿಗೆ, ನೀರಿನ ವ್ಯವಸ್ಥೆ ಕಲ್ಪಿಸಲಾಗಿತ್ತು.

ರೋಡ್ ಶೋನಲ್ಲಿ ಸಿಎಂ, ಕಟೀಲು ಭಾಗಿ: ಪ್ರಧಾನಿ ಮೋದಿ ರೋಡ್ ಶೋ ತೆರಳಿದರೆ ಹಿಂದೆ ಪ್ರಧಾನಿಯನ್ನು ಹಿಂಬಾಲಿಸುತ್ತಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಹ ಜನರತ್ತ ಕೈ ಬೀಸುತ್ತಾ ರೋಡ್ ಶೋನಲ್ಲಿ ಸಾಗಿದರು. ಮತ್ತೊಂದೆಡೆ ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲು, ಟ್ರಾಫಿಕ್‌ನಲ್ಲಿ ಸಿಲುಕಿದ ಪರಿಣಾಮ ಸಂಜಯ ವೃತ್ತದಿಂದ ರೋಡ್ ಶೋ ಆರಂಭಕ್ಕೂ ಮುನ್ನ ರಸ್ತೆಯಲ್ಲೇ ನಡೆದುಕೊಂಡು ಬಂದು ರೈತ ಸಭಾಂಗಣದ ಬಳಿ ಬಿಜೆಪಿ ಮುಖಂಡರಿಗೆಂದೇ ನಿರ್ಮಾಣ ಮಾಡಿದ್ದ ಶೆಡ್ ಬಳಿ ಆಗಮಿಸಿದರು.

ಧ್ರುವನಾರಾಯಣ್ ಅಂತ್ಯಕ್ರಿಯೆ

ಸಾರ್ವಜನಿಕರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ಸಾವಿರಾರು ಜನರು ತಮ್ಮ ನೆಚ್ಚಿನ ನಾಯಕನ ದರ್ಶನ ಪಡೆದು, ಅಂತಿಮ ನಮನ ಸಲ್ಲಿಸಿದರು. ಇದೇ ವೇಳೆ ಧ್ರುವನಾರಾಯಣ್ ಪರ ಜಯ ಘೋಷಣೆ ಕೂಗಿ ಅಭಿಮಾನ ಮೆರೆದರು. ಧ್ರುವನಾರಾಯಣ್ ಅವರ ಪಾರ್ಥಿವ ಶರೀರ ನೋಡಿದ ಹಲವಾರು ನಾಯಕರು ಕಣ್ಣೀರು ಹಾಕುತ್ತ ತೆರಳುತ್ತಿರುವುದು ಸಾಮಾನ್ಯ ದೃಶ್ಯವಾಗಿತ್ತು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಶಾಸಕರಾದ ಜಿ.ಟಿ. ದೇವೆಗೌಡ, ದಿನೇಶ್ ಗೂಂಡುರಾವ್, ಸತೀಶ್ ಜಾರಕಿಹೊಳಿ, ಡಾ.ಯತೀಂದ್ರ ಸಿದ್ದರಾಮಯ್ಯ, ಅನಿಲ್ ಚಿಕ್ಕಮಾಧು, ಸಿ.ಪುಟ್ಟರಂಗಶೆಟ್ಟಿ, ಆರ್. ನರೇಂದ್ರ, ಎಚ್. ವಿಶ್ವನಾಥ್, ಡಾ.ತಿಮ್ಮಯ್ಯ, ರೂಜಿಜಾನ್, ಮಾಜಿ ಸಚಿವರಾದ ಶಾಮನೂರು ಶಿವಶಂಕರಪ್ಪ, ಎಚ್.ಆಂಜನೇಯ, ಡಾ.ಎಚ್.ಸಿ.ಮಹದೇವಪ್ಪ, ಡಾ.ಜಿ. ಪರಮೇಶ್ವರ್, ಸಂಸದ ಡಿ.ಕೆ.ಸುರೇಶ್, ಮಾಜಿ ಸಂಸದರಾದ ಕೆ.ಎಚ್. ಮುನಿಯಪ್ಪ, ಎ.ಸಿದ್ದರಾಜು, ಕಾಗಲವಾಡಿ ಶಿವಣ್ಣ, ಚಂದ್ರಪ್ಪ, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಮ್ಮದ್, ಪ್ರಕಾಶ್ ರಾಥೋಡ್, ಅಶೋಕ್ ಪಟ್ಟಣ್, ಮಾಜಿ ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಸ್.ಬಾಲರಾಜು, ಎಸ್.ಜಯಣ್ಣ, ಭಾರತಿ ಶಂಕರ್, ಚುಡಾ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಜಿಪಂ ಮಾಜಿ ಅಧ್ಯಕ್ಷೆ ನಾಗಶ್ರೀ ಪ್ರತಾಪ್, ಕೆ.ಪಿ.ಸದಾಶಿವಮೂರ್ತಿ, ಕೆರಹಳ್ಳಿ ನವೀನ್, ಕೆ.ಎಸ್.ಮಹೇಶ್, ಬಿ.ಕೆ.ರವಿಕುಮಾರ್, ಮಂಜುನಾಥ್, ಎಸ್.ಮಹದೇವಯ್ಯ, ಗಣೇಶ್‌ಪ್ರಸಾದ್, ಪುಷ್ಪ ಅಮರ್‌ನಾಥ್ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ರೈತ ನಾಯಕಿ ಚುಕ್ಕಿ ನಂಜುಂಡಸ್ವಾಮಿ, ಸಾಲೂರು ಶ್ರೀ, ಜ್ಞಾನಪ್ರಕಾಶ್ ಸ್ವಾಮೀಜಿ, ಸೇರಿದಂತೆ ಪಕ್ಷದ ಮುಖಂಡರು, ವಿವಿಧ ಮಠಗಳ ಮಠಾಧೀಶರು ಧ್ರುವನಾರಾಯಣ್ ಅವರ ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛ ಇಟ್ಟು ಅಂತಿಮ ನಮನ ಸಲ್ಲಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಜಿಲ್ಲಾಡಳಿತದ ಪರವಾಗಿ ಎಡಿಸಿ ಕಾತ್ಯಾಯಿನಿ ದೇವಿ, ತಹಸಿಲ್ದಾರ್ ಬಸವರಾಜು ಇದ್ದರು.

ನಕಾರಾತ್ಮಕ ಚಿಂತನೆಯತ್ತ ಸುಳಿಯದೇ ಸಕಾರಾತ್ಮಕ ಚಿಂತನೆ ಹೊಂದಬೇಕು

ವಿದ್ಯಾರ್ಥಿಗಳಿಗೆ ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತೆ ಸಿ.ಶಿಖಾ ಹಿತವಚನ



ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಭಾನುವಾರ ನಡೆದ ಪದವೀಧರರ ದಿನಾಚರಣೆಯಲ್ಲಿ ಅತಿ ಹೆಚ್ಚು ಅಂಕಗಳೊಂದಿಗೆ ಪದವಿ ಪೂರೈಸಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು.

ಮೈಸೂರು,ಮಾ.12(ಪಿಎಂ)– ಯಾವಾಗಲೂ ಸಕಾರಾತ್ಮಕ ಚಿಂತನೆ ಹೊಂದಬೇಕು. ಯಾವುದೇ ಕಾರಣಕ್ಕೂ ನಕಾರಾತ್ಮಕ ಚಿಂತನೆಯತ್ತ ಸುಳಿಯಬಾರದು. ದೊಡ್ಡ ಕನಸು ಕಾಣುವ ಮೂಲಕ ಅದನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಅಗತ್ಯ ಪರಿಶ್ರಮ ವಿನಿಯೋಗಿಸಬೇಕು ಎಂದು ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತರಾದ ಸಿ.ಶಿಖಾ, ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ವತಿಯಿಂದ ಕಾಲೇಜಿನ ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾಲೇಜಿನ 15ನೇ ಪದವೀಧರರ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಪದವೀಧರರ ದಿನಾಚರಣೆ ತನ್ನದೇ ಆದ ಮಹತ್ವ ಹೊಂದಿದೆ. ಏಕೆಂದರೆ ಇದು ವಿದ್ಯಾರ್ಥಿ ಪರಿಶ್ರಮದಿಂದ ಗಳಿಸಿದ ಅರ್ಹತೆಯು ಸಮಾಜದ ಮುಂದೆ ಅನಾವರಣಗೊಳ್ಳಲಿದೆ. ಹಾಗಾಗಿ ಇದು ಪದವಿ ಪಡೆದ ವಿದ್ಯಾರ್ಥಿಗಳಿಗೆ ಮಹತ್ವದ ದಿನ. ವಿದ್ಯಾರ್ಥಿಗಳು ನಮ್ಮ ದೇಶದ ಭವಿಷ್ಯ, ನಮ್ಮ ಸಮಾಜದ ಶಕ್ತಿ. ವಿದ್ಯಾರ್ಥಿಗಳಾದ ನೀವು ಭವಿಷ್ಯದಲ್ಲಿ ಯಾವುದೇ ವೃತ್ತಿ ಆಯ್ಕೆ ಮಾಡಿಕೊಂಡರೂ ದೊಡ್ಡ ಕನಸುಗಳನ್ನು ಕಾಣಬೇಕು. ಅಷ್ಟು ಮಾತ್ರವಲ್ಲದೆ, ಅದಕ್ಕೆ ಪೂರಕವಾಗಿ ಪರಿಶ್ರಮ ವಿನಿಯೋಗಿಸಬೇಕು ಎಂದು ತಿಳಿಸಿದರು.

ನಿಮ್ಮಲ್ಲಿ ಯುಪಿಎಸ್‌ಸಿ ಪರೀಕ್ಷೆ ಬರೆಯಲು ಆಸಕ್ತರಿದ್ದರೆ ಕನಿಷ್ಠ 14ರಿಂದ 15 ಗಂಟೆ ಕಾಲ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಯುಪಿಎಸ್‌ಸಿ ಉತ್ತೀರ್ಣರಾದ ಬಳಿಕ ನಮ್ಮ ಜೀವನದಲ್ಲಿ ಯಶಸ್ಸು ಗಳಿಸಿದಂತೆ ನಿಜ. ಆದರೆ ಆ ಬಳಿಕ ಪರಿಶ್ರಮ ವಹಿಸಬೇಕಿಲ್ಲ ಎಂದುಕೊಂಡರೆ ಅದು ತಪ್ಪು. ಜೀವನದ ಎಲ್ಲಾ ಹಂತಗಳಲ್ಲಿ ಪರಿಶ್ರಮ ಇರಲೇಬೇಕು ಎಂದರು.

ನಮ್ಮ ವೃತ್ತಿಯಲ್ಲಿ ನಾವು ದೊಡ್ಡ ಸಾಧನೆಯ ಕನಸು ಕಾಣಬೇಕು. ಜೊತೆಗೆ ಅದಕ್ಕೆ ಪೂರಕವಾಗಿ ಶ್ರಮ ವಹಿಸಬೇಕು. ಈ ಸಂದರ್ಭದಲ್ಲಿ ಯಾರು ಏನು ಅಂದುಕೊಳ್ಳುತ್ತಾರೋ ಎಂಬ ಕೀಳರಿಮೆ ಸುಳಿಯಬಾರದು. ಗೆಲುವು ಮತ್ತು ಸೋಲು ಎರಡೂ ನಮ್ಮ ನೆರಳಿನಂತೆ. ನಾವು ಯಾವುದೇ ಕೆಲಸ ಮಾಡಿದರೂ ಅದರಲ್ಲಿ ಸೋಲು ಅಥವಾ ಗೆಲುವು ಇರಲೇಬೇಕು. ಈ ಎರಡರ ಹೊರತಾಗಿ ಮೂರನೆಯ ಮತ್ತೊಂದು ಇರಲು ಸಾಧ್ಯವಿಲ್ಲ. ಹಾಗಾಗಿ ಆತ್ಮವಿಶ್ವಾಸ ಕಾಯ್ದುಕೊಳ್ಳಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳು ನಮ್ಮ ದೇಶ, ರಾಜ್ಯ, ಸಮಾಜಕ್ಕೆ ಕೊಡಬಹುದಾದ ಅತ್ಯುತ್ತಮ ಕೊಡುಗೆಗಳ ಬಗ್ಗೆ ಸದಾ ಚಿಂತಿಸಬೇಕು. ನೀವು ಮಾಡುವ ಪ್ರತಿಯೊಂದು ಕೆಲಸ ಕಾರ್ಯಗಳಲ್ಲಿ ಉತ್ಸಾಹ ಕಾಪಾಡಿಕೊಳ್ಳಬೇಕು. ಕಳೆದ 70 ವರ್ಷಗಳಲ್ಲಿ ತಂತ್ರಜ್ಞಾನ ವೇಗದಲ್ಲಿ ಬೆಳವಣಿಗೆ ಕಂಡಿದೆ. ತಂತ್ರಜ್ಞಾನ ಎಷ್ಟೇ ಬೆಳೆದರೂ ಅದು ಮಾನವ ಮತ್ತು ಮಾನವನ ಮೆದುಳಿಗೆ ಪರ್ಯಾಯ ಆಗಲು ಸಾಧ್ಯವಿಲ್ಲ. ಜೊತೆಗೆ ಸಾಮಾಜಿಕ ಜಾಲತಾಣಗಳ ಬಳಕೆ ಇಂದು ಹೆಚ್ಚಾಗುತ್ತಿದೆ. ಇವುಗಳನ್ನು ಅಗತ್ಯಕ್ಕೆ ಅನುಗುಣವಾಗಿ ಬಳಸುವ ಮೂಲಕ ಸದ್ಬಳಕೆ ಮಾಡಿಕೊಳ್ಳಬೇಕೆ ಹೊರತು, ಗೀಳು ಮಾಡಿಕೊಳ್ಳಬಾರದು ಎಂದು ಸಲಹೆ ನೀಡಿದರು.

ಇಲ್ಲಿ ನೆರೆದಿರುವ ವಿದ್ಯಾರ್ಥಿಗಳಲ್ಲಿ ಶೇ.50ರಷ್ಟು ವಿದ್ಯಾರ್ಥಿನಿಯರೇ ಇರುವುದು ಸಂತಸದ ಸಂಗತಿ. ವಿದ್ಯಾರ್ಥಿನಿಯರು ಪದವಿ ಪೂರ್ಣಗೊಳಿಸಿದ ನಂತರ ಅಷ್ಟಕ್ಕೇ ಸೀಮಿತಗೊಳ್ಳದೇ ಇನ್ನು ಹೆಚ್ಚಿನ ಉನ್ನತ ಶಿಕ್ಷಣ ಪಡೆಯುವ ಜೊತೆಗೆ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಬೇಕು ಎಂದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಸಾನ್ನಿಧ್ಯ ವಹಿಸಿದ್ದರು. ನೂತನ ಪದವೀಧರರಿಗೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ ಪ್ರತಿಜ್ಞಾವಿಧಿ ಬೋಧಿಸಿದರು. ಪದವಿ ಮತ್ತು ಸ್ನಾತಕೋತ್ತರ ಪದವಿ ಸೇರಿದಂತೆ ಒಟ್ಟು 1,054 ವಿದ್ಯಾರ್ಥಿಗಳು ಪದವಿ ಸ್ವೀಕರಿಸಿದರು. ಈ ಪೈಕಿ ಹೆಚ್ಚು ಅಂಕ ಪಡೆದ ಒಟ್ಟು 65 ಮಂದಿಗೆ ಬಹುಮಾನ ಮತ್ತು ಪ್ರಮಾಣ ಪತ್ರ ನೀಡಿ ಪುರಸ್ಕರಿಸಲಾಯಿತು. ಅಲ್ಲದೆ, 10 ಮಂದಿ ವಿವಿಧ ದತ್ತಿ ಪುರಸ್ಕಾರಕ್ಕೆ ಭಾಜನರಾದರು. ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ, ಪ್ರಾಂಶುಪಾಲ ಪ್ರೊ.ಎಂ.ಪಿ. ವಿಜಯೇಂದ್ರ ಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಬಿ.ಪ್ರಭುಸ್ವಾಮಿ ಮತ್ತಿತರರು ಹಾಜರಿದ್ದರು.

ಡಾ.ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ರಕ್ತದಾನ ಶಿಬಿರ

416 ಮಂದಿ ಸ್ವಯಂ ಪ್ರೇರಿತರಾಗಿ ರಕ್ತದಾನ



ಮೈಸೂರು, ಮಾ.12(ಎಸ್‌ಪಿಎನ್)– ಚಿತ್ರನಟ ಡಾ.ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಭಾನುವಾರ ಆಯೋಜಿಸಿದ್ದ ಬೃಹತ್ ರಕ್ತದಾನ ಶಿಬಿರದಲ್ಲಿ ಹಾಸ್ಯನಟ ಚಿಕ್ಕಣ್ಣ ಭಾಗವಹಿಸಿ ನೂರಾರು ಮಂದಿ ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡಲು ಪ್ರೇರಣೆ ನೀಡಿದರು.

ಮೈಸೂರಿನ ಒಂಟಿಕೊಪ್ಪಲ್ ಮತ್ತು ಗೋಕುಲಂ ಗೆಳೆಯರ ಬಳಗ ಹಾಗೂ ಮೈಸೂರು ಬ್ಲಡ್ ಆನ್ ಕಾಲ್ ಕ್ಲಬ್, ಜೀವಧಾರ ರಕ್ತ ನಿಧಿ ಕೇಂದ್ರ ಸಹಯೋಗದೊಂದಿಗೆ ಒಂಟಿಕೊಪ್ಪಲಿನ ಶ್ರೀ ರಾಮ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 416 ಮಂದಿ ಸ್ವಯಂಪ್ರೇರಿತವಾಗಿ ರಕ್ತ ನೀಡಿದರು.

ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ. ಜಯಂತ್ ಮಾತನಾಡಿ, ರಕ್ತದಾನದಿಂದ ತುರ್ತು ಚಿಕಿತ್ಸೆ ಪಡೆಯುವ ರೋಗಿಗಳಿಗೆ ಜೀವದಾನ ಮಾಡಿದಂತೆ. ಅಲ್ಲದೆ, ಈ ರೀತಿಯ ರಕ್ತದಾನ ಶಿಬಿರಗಳು ಹೆಚ್ಚಾಗಿ ನಡೆಯಬೇಕು. ರಕ್ತನಿಧಿ ಕೇಂದ್ರಗಳು ಕೈಗೊಂಡಿರುವ ಈ ಕಾರ್ಯದಿಂದ ಮೈಸೂರಿನಲ್ಲಿ ಅಗತ್ಯವಿರುವ ಎಲ್ಲರಿಗೂ ರಕ್ತದೊರೆಯುತ್ತದೆ ಎಂದು ತಿಳಿಸಿದರು.

ಜೀವಧಾರ ರಕ್ತನಿಧಿ ಕೇಂದ್ರದ ಎಸ್.ಇ. ಗಿರೀಶ್ ಮಾತನಾಡಿ, ಪುನೀತ್ ರಾಜ್‌ಕುಮಾರ್ ಅವರ ಹೆಸರಿನಲ್ಲಿ ಈವರೆಗೆ ನಡೆದಿರುವ ರಕ್ತದಾನ ಶಿಬಿರಗಳೆಲ್ಲವೂ ಯಶಸ್ವಿಯಾಗಿವೆ. ಕರ್ನಾಟಕ ರತ್ನ ಡಾ.ಪುನೀತ್ ರಾಜ್‌ಕುಮಾರ್ ಅವರ ಹೆಸರಿನಲ್ಲಿ ನಡೆದ ರಕ್ತದಾನ ಶಿಬಿರದಲ್ಲಿ 400 ಕ್ಕೂ ಹೆಚ್ಚುಮಂದಿ ರಕ್ತದಾನ ಮಾಡಿರುವುದೇ ಸಾಕ್ಷಿ ಎಂದು ಸ್ಮರಿಸಿದರು.

ಆರೋಗ್ಯವಂತ ಯುವಕರು ರಕ್ತದಾನ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಮೂಲಕ ಆರೋಗ್ಯವಂತ ಸಮಾಜ ಸೃಷ್ಟಿಗೆ ಕೊಡುಗೆ ನೀಡಬೇಕು. ಈ ರೀತಿಯ ಕಾರ್ಯದಲ್ಲಿ ಪಾಲ್ಗೊಂಡ ವ್ಯಕ್ತಿಗೆ ತಾವು ಮಾಡಿದ ಒಳ್ಳೆಯ ಕೆಲಸದಿಂದ ಸಮಾಜದಲ್ಲಿ ಉತ್ತಮ ಗೌರವ ಮಾತ್ರವಲ್ಲದೇ ಜೀವ ಉಳಿಸಲು ಕೈ ಜೋಡಿಸಿದ್ದೇನೆ ಎಂಬ ತೃಪ್ತ ಭಾವನೆ ಮೂಡುತ್ತದೆ ಎಂದರು.

ಈ ವೇಳೆ ಶಾಸಕ ಜಿ.ಟಿ.ದೇವೇಗೌಡ, ಎಲ್‌ನಾಗೇಂದ್ರ ಪಾಲಿಕೆ ಸದಸ್ಯೆ ಭಾಗ್ಯ ಮಾದೇಶ್, ಕಾರ್ತಿಕ್, ಬ್ಲಡ್ ಆನ್ ಕಾಲ್ ಕ್ಲಬ್ ಸಂಸ್ಥಾಪಕ ಆನಂದ್, ದೇವೇಂದರ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಪಾರಂಪರಿಕ ಹೈಟೆಕ್ ಶೌಚಾಲಯ ಉದ್ಘಾಟನೆ



ಮೈಸೂರು, ಮಾ.12(ಆರ್‌ಕೆ)–ಮೈಸೂರಿನ ಪುರಭವನದ ಆವರಣದಲ್ಲಿ 'ನಮ್ಮ ಮೈಸೂರು ಫೌಂಡೇಷನ್' ವತಿಯಿಂದ ನಿರ್ಮಿಸಿರುವ ಪಾರಂಪರಿಕ ಹೈಟೆಕ್ ಶೌಚಾಲಯವನ್ನು ಮೇಯರ್ ಶಿವಕುಮಾರ್ ಹಾಗೂ ಶಾಸಕ ಎಲ್.ನಾಗೇಂದ್ರ ಅವರು ಮಾರ್ಚ್ 15ರಂದು ಉದ್ಘಾಟಿಸುವರು.

ಉಪ ಮೇಯರ್ ಡಾ. ಜಿ.ರೂಪಾ, ಕಾರ್ಪೋರೇಟರ್ ಎಂ.ಡಿ.ನಾಗರಾಜ್, ಪಾಲಿಕೆ ಕಮಿಷ್ನರ್ ಜಿ.ಲಕ್ಷ್ಮೀಕಾಂತ ರೆಡ್ಡಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್, ನಮ್ಮ ಮೈಸೂರು ಫೌಂಡೇಷನ್ (NMF) ಮುಖ್ಯಸ್ಥ ದಶರಥ ಸೇರಿದಂತೆ ಹಲವರು ಶೌಚಾಲಯ ಉದ್ಘಾಟನೆ ವೇಳೆ ಭಾಗವಹಿಸುವರು. 1.5 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಪಾರಂಪರಿಕ ವಿನ್ಯಾಸದ ಹೈಟೆಕ್ ಶೌಚಾಲಯ ಕಟ್ಟಡದಲ್ಲಿ ಮಹಿಳೆಯರು, ಪುರುಷರಿಗೆ ಪ್ರತ್ಯೇಕ ಅತ್ಯಾಧುನಿಕ ಶೌಚಾಲಯಗಳು, ಸ್ನಾನ ಗೃಹಗಳು, ಮಕ್ಕಳಿಗೆ ಹಾಲುಣಿಸಲು ಪ್ರತ್ಯೇಕ ಕೊಠಡಿ, ನೀರಿನ ಸಂಪ್, ಓವರ್‌ಹೆಡ್ ಟ್ಯಾಂಕ್ ಅಂಗವಿಕಲರಿಗಾಗಿ ರ್‍ಯಾಂಪ್, ವಿದ್ಯುತ್ ಸೌಲಭ್ಯ ಹಾಗೂ ದಿನದ 24 ಗಂಟೆಯೂ ಭದ್ರತಾ ಸಿಬ್ಬಂದಿ ನಿಯೋಜನೆ ಮಾಡಲಾಗಿದೆ. ನಮ್ಮ ಮೈಸೂರು ಫೌಂಡೇಷನ್ ಪೇ ಅಂಡ್ ಯೂಸ್ ಮಾದರಿ ಶೌಚಾಲಯವನ್ನು ನಿರ್ವಹಿಸಿ 5 ವರ್ಷದ ನಂತರ ಕಟ್ಟಡವನ್ನು ಯಥಾಸ್ಥಿತಿಯಲ್ಲಿ ಮೈಸೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸುವಂತೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

ಸೀರ್ವಿ ಸಮಾಜದವರಿಗಾಗಿ ಕಥಾ ಪ್ರವಚನ–ಸಪ್ತಾಹ



ಮೈಸೂರು, ಮಾ.12–ಮೈಸೂರಿನ ಕೆ.ಆರ್.ಎಸ್ ರಸ್ತೆಯಲ್ಲಿರುವ ಸೀರ್ವಿ ಸಮಾಜದ ಆವರಣದಲ್ಲಿ ರಾಜಸ್ಥಾನ ಸಮಸ್ತ ಸಂಸ್ಥೆ ವತಿಯಿಂದ ಏಳು ದಿನಗಳ ಶ್ರೀಮದ್ ಭಾಗವತ ಕಥಾ ಪ್ರವಚನ–ಸಪ್ತಾಹ ನಡೆಯುತ್ತಿದೆ.

ಸಪ್ತಾಹವನ್ನು ಸುತ್ತೂರು ಮಠದ ಶ್ರೀಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಅವರು ಶನಿವಾರ ಉದ್ಘಾಟಿಸಿದ್ದು, ರಾಜಸ್ಥಾನದ ಜೋಧ್‌ಪುರ್‌ನ ಶ್ರೀ ಗುರುಕೃಪ ಆಶ್ರಮದ ರಾಜರಾಮ್‌ಜಿ ಮಹಾರಾಜ್ ಅವರು ದಿವ್ಯ ಸಾನ್ನಿಧ್ಯ ವಹಿಸಿದ್ದಾರೆ. ಹಾಗೇ ಸಂತಶ್ರೀ ಕೃಪಾರಾಮ್‌ಜಿ ಮಹಾರಾಜ್ ಶ್ರೀಮದ್ ಭಾಗವತ ಕಥಾ ಪ್ರವಚನ ನೀಡುತ್ತಿದ್ದಾರೆ. ಮೈಸೂರಿನಲ್ಲಿರುವ ರಾಜಸ್ಥಾನದ ನಾಗರಿಕರು ಪ್ರವಚನಕ್ಕೆ ಕೇಳಲು ನಿತ್ಯವೂ ಎರಡು ಸಾವಿರಕ್ಕೂ ಅಧಿಕ ಮಂದಿ ಆಗಮಿಸುತ್ತಿದ್ದು, ಎಲ್ಲರಿಗೂ ಕುಡಿಯುವ ನೀರು ಮತ್ತು ಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಪ್ರವಚನವು ಪ್ರತಿದಿನ ಮಧ್ಯಾಹ್ನ 2 ಗಂಟೆಯಿಂದ ಆರಂಭವಾಗಿ ಸಂಜೆ 5 ಗಂಟೆವರೆಗೂ ನಡೆಯಲಿದೆ.

ವರುಣಾದ ರಾಂಪುರದಲ್ಲಿ ಆರೋಗ್ಯ ಶಿಬಿರ



ಮೈಸೂರು, ಮಾ.12– ಮೈಸೂರಿನ ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ರಾಂಪುರದಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು.

ಕೆ.ಎನ್.ಪುಟ್ಟಬುದ್ಧಿ ಫೌಂಡೇಶನ್, ಡಾ.ಚಂದ್ರಶೇಖರ್ ಮತ್ತು ತಂಡ, ಮಣಿಪಾಲ್ ಆಸ್ಪತ್ರೆ ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ, ಮೈಸೂರು ಲಯನ್ಸ್ ಜೀವಾಧಾರ ಬ್ಲಡ್ ಸೆಂಟರ್, ಮೈಸೂರು ಮೆಡಾಲ್ ಡಯಾಗ್ನಾಸ್ಟಿಕ್ಸ್, ಬಾಲಾಜಿ ಐ ಕೇರ್ ಮತ್ತು ಆಪ್ಟಿಕಲ್ಸ್, ವರುಣಾ 'ಗ್ರಾಮ ಒನ್' ಸಂಯುಕ್ತಾಶ್ರಯದಲ್ಲಿ ರಾಂಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಆಯೋಜಿಸಲಾಗಿದ್ದ ಶಿಬಿರದಲ್ಲಿ 500ಕ್ಕೂ ಮಂದಿ ಭಾಗಿಯಾಗಿ, ಪ್ರಯೋಜನ ಪಡೆದರು.

ರಕ್ತದೊತ್ತಡ(ಬಿಪಿ) ಮತ್ತು ಮಧುಮೇಹ(ಶುಗರ್), ಕಣ್ಣಿನ ತಪಾಸಣೆ, ಇಸಿಜಿ ಸೇರಿದಂತೆ ವಿವಿಧ ಪರೀಕ್ಷೆ ಜೊತೆಗೆ ಅಗತ್ಯ ಔಷಧಿಯನ್ನು ವಿತರಿಸಲಾಯಿತು. ಇದೇ ವೇಳೆ ಹಲವರಿಗೆ ಆಯುಷ್ಮಾನ್ ಭಾರತ ಆರೋಗ್ಯ ಸೇವೆಗೆ ನೋಂದಣಿ ಮಾಡಿಕೊಡಲಾಯಿತು. ಅಲ್ಲದೆ ಮಕ್ಕಳ ರಕ್ತದ ಗುಂಪು ಪರೀಕ್ಷಿಸಿ, ತೂಕ, ಎತ್ತರ ಮಾಹಿತಿಯನ್ನೊಳಗೊಂಡ ಕಾರ್ಡ್ ನೀಡಲಾಯಿತು. ಕ್ಷೇತ್ರದ ಬಿಜೆಪಿ ಮುಖಂಡ ಶರತ್ ಪುಟ್ಟಬುದ್ಧಿ, ಕಿರಾಳು ಮಂಜು, ಕೀಳನಪುರ ನಾಗೇಶ್ ಮತ್ತಿತರರು ರಕ್ತದಾನ ಮಾಡಿ, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ಈ ವೇಳೆ ಶರತ್ ಪುಟ್ಟಬುದ್ಧಿ ಮಾತನಾಡಿದರು. ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಪರಿಷತ್‌ನ ಪ್ರಥಮ ಅಧ್ಯಕ್ಷರಾದ ಕೆಎನ್.ಪುಟ್ಟಬುದ್ಧಿ, ಮುಖಂಡರಾದ ಡಾ.ಚಂದ್ರಶೇಖರ್, ಡಾ.ಸದಾನಂದ್, ಕೃಷ್ಣ, ರಾಂಪುರ ರಾಜಶೇಖರ್, ಗ್ರಾಪಂ ಮಾಜಿ ಸದಸ್ಯ ಚಂದ್ರ ನಾಗರಾಜು, ಸಿದ್ದರಾಜು, ಮಹದೇವಸ್ವಾಮಿ, ಗೌಡರಹುಂಡಿ ಮಂಜೇಶ್, ಹದಿನಾರು ಗುರುಮಲ್ಲಮ್ಮ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಮೈಸೂರಲ್ಲಿ ವಿಶ್ವ ನಲ್ಲಿ ಕೆಲಸಗಾರರ ದಿನಾಚರಣೆ



ಮೈಸೂರು,ಮಾ.12(ಎಂಟಿವೈ)– ಕಾರ್ಮಿಕ ಸಂಘಟನೆಗಳೆಂದರೆ ಹೋರಾಟದ ಚಿತ್ರಣವೇ ನಮ್ಮ ಮುಂದೆ ಬರುವ ಪರಿಸ್ಥಿತಿ ಇರುವಾಗ ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘವು ಸಮಾಜ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡಿರುವುದು ಶ್ಲಾಘನೀಯ ಎಂದು ಚುಟುಕು ಸಾಹಿತ್ಯ ಪರಿಷತ್ ಸಂಸ್ಥಾಪಕ ಡಾ.ಎಂ.ಜಿ.ಆರ್.ಅರಸ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಸರಸ್ವತಿಪುರಂನಲ್ಲಿರುವ ರೋಟರಿ ಪಶ್ಚಿಮ ಶಾಲೆಯ ಸಭಾಂಗಣದಲ್ಲಿ ಭಾನುವಾರ ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ ಆಯೋಜಿಸಿದ್ದ 'ವಿಶ್ವ ನಲ್ಲಿ ಕೆಲಸಗಾರರ ದಿನಾಚರಣೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೈಸೂರು ಸೇರಿದಂತೆ ಯಾವುದೇ ಭಾಗದಲ್ಲೂ ಕಾರ್ಮಿಕ ಸಂಘಟನೆಗಳು ಕೆಂಪು ಬಾವುಟ ಹಿಡಿದುಕೊಂಡು ಅನ್ಯಾಯದ ವಿರುದ್ಧ ಹೋರಾಟ ಮಾಡುವುದನ್ನು ಕಾಣುತ್ತೇವೆ. ಅನ್ಯಾಯದ ವಿರುದ್ಧ ಕಾರ್ಮಿಕ ಸಂಘಟನೆಗಳು ಹೋರಾಟ ಮಾಡುತ್ತಲೇ ಬಂದಿವೆ. ಆದರೆ, ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘವು ಸಾಮಾಜಿಕ ಬದ್ಧತೆಯಿಂದ ಸೇವಾ ಕಾರ್ಯಕ್ರಮವನ್ನು ನಡೆಸುತ್ತಾ ಬರುತ್ತಿರುವುದು ಒಳ್ಳೆಯ ಸಂಕೇತ ಎಂದರು.

ವೃಕ್ಷ ಮಾತೆ ಸಾಲುಮರದ ತಿಮ್ಮಕ್ಕ ಅವರು 'ವಿಶ್ವ ನಲ್ಲಿ ಕೆಲಸಗಾರರ ದಿನ'ವನ್ನು ಉದ್ಘಾಟಿಸಿರುವುದು ಮಹತ್ವ ಪಡೆದುಕೊಂಡಿದೆ. ಸಾಲುಮರದ ತಿಮ್ಮಕ್ಕ ನಿಸ್ವಾರ್ಥವಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ತಮ್ಮ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳಿಗೆ ಆಸ್ತಿ ಮಾಡಬೇಕು. ಮೆಡಿಕಲ್ ಸೀಟ್ ಕೊಡಿಸಬೇಕು. ರಾಜಕೀಯಕ್ಕೆ ಎಂಎಲ್‌ಎ ಸೀಟ್ ಕೊಡಿಸಬೇಕು ಎಂಬ ಆಸೆ ತಿಮ್ಮಕ್ಕ ಅವರಿಗಿಲ್ಲ. ಸರ್ವಜನಾಂಗಕ್ಕೂ ಸಮೃದ್ಧವಾಗಿ ಗಾಳಿ, ಬೆಳಕು ಸಿಗಬೇಕು. ಎಲ್ಲರೂ ಆರೋಗ್ಯವಂತೆ ಜೀವನ ನಡೆಸಬೇಕು ಎಂಬ ಆಶಯದಿಂದ ಸಾಲು ಸಾಲು ಮರ ಬೆಳೆಸಿದ್ದಾರೆ. ಮರಗಳಿಲ್ಲದೆ ಯಾರೂ ಬದುಕಲು ಸಾಧ್ಯವಿಲ್ಲ. ಕೋವಿಡ್ ಸಮಯದಲ್ಲಿ ಆಮ್ಲಜನಕ ಇಲ್ಲದೆ ಸಾಕಷ್ಟು ಜನ ಕಷ್ಟಪಟ್ಟಿದ್ದಾರೆ. ಸಾಲು ಮರ ಇಲ್ಲದಿದ್ದರೆ ಊರೇ ನಾಶವಾದಂತೆ ಭಾಸವಾಗುತ್ತದೆ. ಅಲ್ಲಿ ಯಾರೂ ಜೀವಂತವಾಗಿರಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಮರಗಳನ್ನು ರಕ್ಷಣೆ ಮಾಡಿ, ಗಿಡಗಳನ್ನು ನೆಟ್ಟು ಪೋಷಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಸಾಲು ಮರದ ತಿಮ್ಮಕ್ಕ ಅವರಿಗೆ ನೋಬಲ್ ಪ್ರಶಸ್ತಿಯೂ ಬರಬೇಕು. ಜಗತ್ತು, ನಾಡಿನ ಕಲ್ಯಾಣಕ್ಕಾಗಿ, ನಾಡಿನ ಬಗ್ಗೆ ಚಿಂತನೆ ಮಾಡುವವರ ಸಂಖ್ಯೆ ಕಡಿಮೆ. ಅಂತಹವರಲ್ಲಿ ಸಾಲುಮರದ ತಿಮ್ಮಕ್ಕ ಮುಂಚೂಣಿಯಲ್ಲಿದ್ದಾರೆ. ಮಾತನಾಡುವ ಜನರಿಗಿಂತ, ಮಾತನಾಡದೆ ಇರುವ ಮರಗಳೊಂದಿಗೆ ಒಡನಾಟ ಹೊಂದಿದ್ದಾರೆ. ಈ ಹಿನ್ನೆಲೆಯಲ್ಲಿ ವಾರಕ್ಕೊಮ್ಮೆಯಾದರೂ ಶಾಲೆಗಳಲ್ಲಿ ಸಾಲು ಮರದ ತಿಮ್ಮಕ್ಕರ ಸಾಧನೆ, ಯಶೋಗಾಥೆಯನ್ನು ಪಠಿಸುವಂತಾಗಬೇಕು ಎಂದು ಸಲಹೆ ನೀಡಿದರು.

ಅರಸು ಮಂಡಳಿ ಅಧ್ಯಕ್ಷ ಹೆಚ್.ಎಂ. ಟಿ.ನಾಗರಾಜು ಮಾತನಾಡಿ, ನಲ್ಲಿ ಕೆಲಸದಲ್ಲಿ ಬೆಂಗಳೂರಲ್ಲಿ ಈಗಾಗಲೇ ಹೊಸ ತಂತ್ರಜ್ಞಾನ ಬಳಸುತ್ತಿದ್ದಾರೆ. ಕಾಲ ಬದಲಾದಂತೆ ಕೆಲಸದಲ್ಲೂ ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು. ಮೈಸೂರಲ್ಲೂ ನಲ್ಲಿ ಕೆಲಸಗಾರರು ಹೊಸ ತಂತ್ರಜ್ಞಾನ ಹಾಗೂ ಹೊಸ ಮಾದರಿಯ ವಸ್ತುಗಳನ್ನು ಬಳಸಬೇಕು. ಅದಕ್ಕೆ ಪೂರಕವಾದ ತರಬೇತಿಯನ್ನು ನೀಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಹಿರಿಯ ನಲ್ಲಿ ಕೆಲಸಗಾರರಾದ ಹೆಚ್.ಬಿ.ರಮೇಶ್, ಹೆಚ್.ಕೆಂಪೇಗೌಡ, ಹೆಚ್.ಕೆ.ಚಂದ್ರಪ್ಪ, ಮಹದೇವಪ್ಪ, ಕೆ.ಎಸ್.ಬಸವರಾಜು, ನಂಜುಂಡಸ್ವಾಮಿ, ಪೀರ್‌ಬೇಗ್, ಸ್ವಾಮಿ, ಮಹದೇವ, ವೆಂಕಟೇಶ್, ಎಂ.ಎಸ್.ಶ್ರೀಧರ್, ಸಿ.ಮಹದೇವು ಅವರಿಗೆ 'ನಲ್ಲಿ ಕೆಲಸದ ನಕ್ಷತ್ರ' ಬಿರುದು ನೀಡಿ ಗೌರವಿಸಲಾಯಿತು.

ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಸಾಲುಮರದ ತಿಮ್ಮಕ್ಕ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕಾರ್ಮಿಕ ಇಲಾಖೆಯ ನಿರೀಕ್ಷಕ ರವಿಕುಮಾರ್, ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ ಅಧ್ಯಕ್ಷ ಎಸ್.ಮಹೇಶ್, ಉಪಾಧ್ಯಕ್ಷ ಎಂ.ಎಸ್.ಸುರೇಶ್ ಕುಮಾರ್, ಕಾರ್ಯದರ್ಶಿ ಎಂ.ರವಿಕುಮಾರ್, ಜಂಟಿ ಕಾರ್ಯದರ್ಶಿ ಎಸ್.ಪಳನಿ, ಖಜಾಂಚಿ ಎಂ.ಪ್ರಕಾಶ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ಮಿತ್ರ ಸೋಮವಾರ 13 ಮಾರ್ಚ್ 2023

ನಿಜವಾದ ಧರ್ಮ ತ್ಯಾಗದಲ್ಲಿದೆ ಎಂಬ ಸತ್ಯ ಸಾರಿದ ವಾಲ್ಮೀಕಿ

ರಾಜನಹಳ್ಳಿ ಗುರುಪೀಠದ ಶ್ರೀಪ್ರಸನ್ನಾನಂದಸ್ವಾಮೀಜಿ

ತಿ.ನರಸೀಪುರ, ಮಾ.12– ಮನುಷ್ಯ ಹುಟ್ಟಿನಿಂದ ಸಾಯುವವರೆಗೂ ಅಧಿಕಾರ ಮತ್ತು ಆಸ್ತಿಗಾಗಿ ಹಪಾಹಪಿಸುತ್ತಾನೆ. ಆದರೆ ನಿಜವಾದ ಧರ್ಮ ತ್ಯಾಗದಲ್ಲಿದೆ ಎಂಬ ಪರಮ ಸತ್ಯವನ್ನು ಮಹರ್ಷಿ ವಾಲ್ಮೀಕಿಯವರು ಇಡೀ ಜಗತ್ತಿಗೆ ರಾಮಾಯಣದ ಮೂಲಕ ಸಾರಿದ್ದಾರೆ ಎಂದು ರಾಜನಹಳ್ಳಿ ಗುರುಪೀಠದ ಶ್ರೀಪ್ರಸನ್ನಾನಂದಸ್ವಾಮೀಜಿ ತಿಳಿಸಿದರು.

ತಾಲೂಕಿನ ಕೊಳತ್ತೂರು ಗ್ರಾಮದಲ್ಲಿ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ಸಂಘದಿಂದ ಆಯೋಜಿಸಿದ್ದ ಶ್ರೀಮಹರ್ಷಿ ವಾಲ್ಮೀಕಿ ಪುತ್ಥಳಿ ಅನಾವರಣ ಹಾಗೂ ಶ್ರೀವಾಲ್ಮೀಕಿ ಸಮುದಾಯ ಭವನ ಉದ್ಘಾಟನಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ ಅವರು ಮಾತನಾಡಿದರು.

ಮನುಷ್ಯನ ಜೀವನ ಗಾಳಿಗೆ ಇಟ್ಟ ದೀಪದಂತೆ. ದೇಹದೊಳಗಿರುವ ದೀಪ ಆರುವ ಮುನ್ನ ಭಗವಂತನ ನಾಮಸ್ಮರಣೆ ಮಾಡಬೇಕು. ಆ ಮೂಲಕ ನಮ್ಮ ಬದುಕನ್ನು ಸಾರ್ಥಕ ಪಡಿಸಿಕೊಳ್ಳಬೇಕು. ಭಗವಂತ ನಮಗೆ ಎಲ್ಲವನ್ನು ಕೊಟ್ಟಿದ್ದಾನೆ. ವಾಸ ಮಾಡಲು ಭೂಮಿ, ಮನೆ ಕಟ್ಟಲು ಜಾಗ, ಮಳೆ, ಬೆಳೆ, ಗಾಳಿ ಎಲ್ಲಾ ಕೊಟ್ಟಿರುವ ಭಗವಂತನ ನಾಮಸ್ಮರಣೆ ಮಾಡುವ ಮೂಲಕ ಕೃತಜ್ಞರಾಗಿರಬೇಕು. ಬದುಕಿನ ಸಾರ್ಥಕತೆ ಭಗವಂತನ ನಾಮಸ್ಮರಣೆಯಲ್ಲಿದೆ. ರಾಮತಾರಕ ಮಂತ್ರ ನಿತ್ಯ ಹೇಳುವ ಮೂಲಕ ಆತ್ಮಕಲ್ಯಾಣ ಮಾಡಿಕೊಳ್ಳಬೇಕೆಂದು ಮಹರ್ಷಿ ವಾಲ್ಮೀಕಿ ಹೇಳುತ್ತಾರೆ. ಹಾಗಾಗಿ ನಾವೆಲ್ಲರೂ ಆತ್ಮಕಲ್ಯಾಣ ಮಾಡಿಕೊಳ್ಳಬೇಕಿದೆ ಎಂದರು.



ಮಹರ್ಷಿ ವಾಲ್ಮೀಕಿ ಬರೆದ ರಾಮಾಯಣ ಮಹಾ ಕಾವ್ಯ ನಮ್ಮ ಸಂಸ್ಕೃತಿಯ ತಾಯಿ ಬೇರು. ರಾಮಾಯಣ ಹಾಗೂ ವೇದವ್ಯಾಸ ಮಹರ್ಷಿಗಳು ಬರೆದ ಮಹಾಭಾರತ ದೇಶದ ಸಂಸ್ಕೃತಿಯ 2 ಕಣ್ಣುಗಳಿದ್ದಂತೆ. ರಾಮಾಯಣ, ಮಹಾಭಾರತವನ್ನು ಪ್ರಸ್ತುತ ತುಲನೆ ಮಾಡಿದಾಗ, ಆಸ್ತಿ ಮತ್ತು ಅಧಿಕಾರಕ್ಕಾಗಿ ಅಣ್ಣ-ತಮ್ಮಂದಿರ ತ್ಯಾಗವನ್ನು ರಾಮಾಯಣ ಎಂದು ಕರೆದರೆ, ಆಸ್ತಿ ಮತ್ತು ಅಧಿಕಾರಕ್ಕಾಗಿ ಅಣ್ಣ-ತಮ್ಮಂದಿರ ನಡುವೆ ನಡೆದ ಕಲಹ, ಯುದ್ಧವನ್ನು ಮಹಾಭಾರತ ಎಂದೇ ಅರ್ಥೈಸಬಹುದಾಗಿದೆ ಎಂದರು.

ಶ್ರೀರಾಮನ ಆದರ್ಶವನ್ನು ಅಂಬೇಡ್ಕರ್ ಭಾರತೀಯ ವೈವಾಹಿಕ ಕಾಯ್ದೆಯಡಿ ಎತ್ತಿ ಹಿಡಿದಿದ್ದಾರೆ. ದೇಶದಲ್ಲಿ ವೈವಾಹಿಕ, ಮಾನವೀಯ ಸಂಬಂಧಗಳು ಗಟ್ಟಿಯಾಗಿ ನಿಲ್ಲುತ್ತವೆ. ಹಾಗಾಗಿ ಭಾರತ ಗುರುವಿನ ಸ್ಥಾನದಲ್ಲಿ ನಿಲ್ಲುತ್ತದೆ ಎಂದ ಅವರು ಮನುಷ್ಯರು ಆಸ್ತಿ, ಅಧಿಕಾರಕ್ಕಾಗಿ ಕಲಹ ಮಾಡಿಕೊಳ್ಳದೇ ಭಗವಂತನ ನಾಮಸ್ಮರಣೆ ಮೂಲಕ ಬದುಕನ್ನು ಸಾರ್ಥಕ ಪಡಿಸಿಕೊಳ್ಳಿ ಎಂದರು.

ಇದೇ ವೇಳೆ ವಾಲ್ಮೀಕಿ ಸಮುದಾಯ ಭವನದ ಎದುರು ಸ್ಥಾಪಿಸಿರುವ ಮಹರ್ಷಿ ವಾಲ್ಮೀಕಿ ಪುತ್ಥಳಿಯನ್ನು ಪ್ರಸನ್ನಾನಂದಶ್ರೀಗಳು, ಪುನೀತ್ ರಾಜ್‌ಕುಮಾರ್ ಪುತ್ಥಳಿಯನ್ನು ಶಾಸಕ ಎಂ.ಅಶ್ವಿನ್ ಕುಮಾರ್ ಅನಾವರಣಗೊಳಿಸಿದರು.

ಕ್ಷೇತ್ರ ಬಿಜೆಪಿ ಅಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್, ತಾಲೂಕು ನಾಯಕರ ಸಂಘದ ಅಧ್ಯಕ್ಷ ಚಿಕ್ಕಣ್ಣ, ಮಾಜಿ ಅಧ್ಯಕ್ಷರಾದ ಹೊನ್ನ ನಾಯಕ, ಚಿನ್ನಸ್ವಾಮಿ, ನಾಯಕ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪನಾಯಕ, ಎಪಿಎಂಸಿ ಮಾಜಿ ಸದಸ್ಯ ಉಕ್ಕಲಗೆರೆ ಬಸವಣ್ಣ, ಮಾಜಿ ಜಿಪಂ ಅಧ್ಯಕ್ಷ ಸಿದ್ದಾರ್ಥ, ಗದ್ದೆಮೋಳೆ ಸಿದ್ದರಾಜು, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ಸಂಘದ ಅಧ್ಯಕ್ಷ ಕೊಳತ್ತೂರು ಕೆ.ಎನ್. ಕುಮಾರ್, ಆರ್. ಅಂದಾನಿ, ಕುಮಾರಸ್ವಾಮಿ, ಸಹಕಾರ ಸಂಘದ ಮಾಜಿ ಅಧ್ಯಕ್ಷ ಜಯಪ್ಪ, ಬಾಬು ಜಗಜೀವನ ರಾಮ್ ಸಂಘದ ಅಧ್ಯಕ್ಷ ಪುಟ್ಟಯ್ಯ, ಮುಖಂಡರಾದ ನಾಗರಾಜು, ಶಾಂತರಾಜು, ಉಪನ್ಯಾಸಕ ನಂಜುಂಡಸ್ವಾಮಿ, ನಿವೃತ್ತ ಮುಖ್ಯ ಲೆಕ್ಕಾಧಿಕಾರಿ ಎಂ.ಜಿ. ಶಿವಸ್ವಾಮಿ, ಗ್ರಾಪಂ ಅಧ್ಯಕ್ಷ ರಾಜೇಶ್, ಕೆಎಎಸ್ ಅಧಿಕಾರಿ ಮಹದೇವಸ್ವಾಮಿ, ಮಂಜುನಾಥ್, ರಾಜೇಶ್, ಸಂತೋಷ್, ದೇವರಾಜ ಕಾಟೂರ್, ಗವಿ ನಾಯಕ, ಜೆಡಿಎಸ್ ಮುಖಂಡ ನಂಜುಂಡ ನಾಯಕ, ಬಿಜೆಪಿ ಮುಖಂಡ ಮಹದೇವ ನಾಯಕ ಹಾಗೂ ಕೊಳತ್ತೂರು ಗ್ರಾಮಸ್ಥರು ಹಾಗೂ ಯುವಕರ ಸಂಘದ ಸದಸ್ಯರು ಹಾಜರಿದ್ದರು.

ವೇದಿಕೆ ಕಾರ್ಯಕ್ರಮ ಮೊಟಕು

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅವರು ನಿನ್ನೆ ಅಕಾಲಿಕ ಸಾವಿಗೀಡಾದ ಹಿನ್ನೆಲೆಯಲ್ಲಿ ವೇದಿಕೆ ಕಾರ್ಯಕ್ರಮವನ್ನು ಸ್ವಾಮೀಜಿಗಳ ಆಶೀರ್ವಚನಕ್ಕೆ ಸೀಮಿತಗೊಳಿಸಲಾಯಿತು. ಧ್ರುವನಾರಾಯಣ್ ಸಾವಿನಿಂದ ಕ್ಷೇತ್ರ ಸೂತಕದಲ್ಲಿದೆ. ಹಾಗಾಗಿ ಯಾವುದೇ ಕಾರ್ಯಕ್ರಮ ಮಾಡಬಾರದಿತ್ತು. ಆದರೆ ಗ್ರಾಮಸ್ಥರು ಮೊದಲೇ ಕಾರ್ಯಕ್ರಮ ಆಯೋಜಿಸಿದ್ದರಿಂದ ಕೇವಲ ನಾನು ಆಶೀರ್ವಚನ ಮಾಡಿ ಕಾರ್ಯಕ್ರಮ ಮುಗಿಸುತ್ತೇನೆ ಎಂದು ಪ್ರಸನ್ನಾನಂದಪುರಿ ಸ್ವಾಮಿಗಳು ಪ್ರಕಟಿಸಿದರು. ಕಾರ್ಯಕ್ರಮಕ್ಕೂ ಮೊದಲು ಧ್ರುವನಾರಾಯಣ್ ನಿಧನಕ್ಕೆ ಮೌನಾಚರಣೆ ಮಾಡಲಾಯಿತು.

ಧ್ರುವನಾರಾಯಣ ನಿಧನಕ್ಕೆ ಸಂತಾಪ

ತಿ.ನರಸೀಪುರ, ಮಾ.12– ಶಾಸಕ, ಸಂಸದರಾಗಿ ಉತ್ತಮ ಜನಪ್ರತಿನಿಧಿ ಎನಿಸಿಕೊಂಡಿದ್ದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಜನಸಾಮಾನ್ಯರ ಕೈಗೆ ಸಿಗುವಂತಹ ನಾಯಕರಾಗಿದ್ದರು. ಕೇಂದ್ರ ಪುರಸ್ಕೃತ ಯೋಜನೆಗಳನ್ನು ಪ್ರತಿ ಹಳ್ಳಿಗಳಿಗೂ ತಲುಪಿಸುವ ಮೂಲಕ ಜನಕೊಟ್ಟ ಅಧಿಕಾರವನ್ನು ಪ್ರಾಮಾಣಿಕವಾಗಿ ಅಭಿವೃದ್ಧಿಗೆ ಬಳಸಿದ್ದರು. ಅಂತಹ ಜನನಾಯಕನ ಅಗಲಿಕೆ ರಾಜಕಾರಣಕ್ಕಷ್ಟೇ ಅಲ್ಲ, ಸಮಾಜಕ್ಕೆ ತುಂಬಲಾರದ ನಷ್ಟ ಎಂದು ಮಾಜಿ ಶಾಸಕ ಡಾ.ಎನ್‌ಎಲ್.ಭಾರತಿ ಶಂಕರ್ ಸಂತಾಪ ಸೂಚಿಸಿದ್ದಾರೆ.



ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆರ್.ಧ್ರುವನಾರಾಯಣ ಅಜಾತಶತ್ರುವಾಗಿದ್ದರು. ಸಂಸದರೊಬ್ಬರು ಸಾಮಾನ್ಯ ಜನರ ಕೈಗೆ ಸಿಗುತ್ತಾರೆ ಎಂಬುದನ್ನು ಧ್ರುವ ಅವರು ಸಾಬೀತುಪಡಿಸಿದ್ದರು. ಅವರ ಅಕಾಲಿಕ ಮರಣವನ್ನು ಯಾರೂ ನಿರೀಕ್ಷಿಸಿರಲಿಲ್ಲ. ಅವರ ಅಗಲಿಕೆ ಸಾಮಾನ್ಯ ನಾಗರಿಕರಿಗೂ ನೋವನ್ನು ಉಂಟು ಮಾಡಿದೆ ಎಂದರು.

ಸರಗೂರಲ್ಲಿ ಆರ್.ಧ್ರುವನಾರಾಯಣ್‌ಗೆ ಶ್ರದ್ಧಾಂಜಲಿ

ಸರಗೂರು, ಮಾ.12– ಪಟ್ಟಣದಲ್ಲಿ ಕಾಂಗ್ರೆಸ್, ಪ್ರಗತಿಪರ ಸಂಘಟನೆಗಳು, ವರ್ತಕ ಮಂಡಳಿ, ವಿವಿಧ ಸಂಘಟನೆಗಳ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್‌ಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಧ್ರುವನಾರಾಯಣ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರ ಸರಳತೆ, ನಾಯಕತ್ವ ಗುಣ, ಕಾರ್ಯ ವೈಖರಿಗಳ ಗುಣಗಾನ ಮಾಡಿದರು. ಇನ್ನು ಕೆಲವರು ಭಾವುಕರಾದರು.

ವರ್ತಕರ ಮಂಡಳಿ ಅಧ್ಯಕ್ಷ ಶ್ರೀನಿವಾಸ್ ಮಾತನಾಡಿ, ಸರಗೂರು ತಾಲೂಕು ಕೇಂದ್ರವಾಗಲು ಧ್ರುವನಾರಾಯಣ್ ಅವಿರತವಾಗಿ



ಶ್ರಮಿಸಿದರು. ಪ್ರತಿ ಹಳ್ಳಿಗಳಲ್ಲಿ ಅಂಬೇಡ್ಕರ್ ಭವನ, ವಾಲ್ಮೀಕಿ ಭವನ, ವಿಶ್ವಕರ್ಮ ಸಮುದಾಯ ಭವನ ಸೇರಿದಂತೆ ಹಲವು ಭವನಗಳು ನಿರ್ಮಾಣಗೊಳ್ಳಲು ಧ್ರುವನಾರಾಯಣ್ ಶ್ರಮ ಅಪಾರ ಎಂದರು.

ಲಯನ್ ಬ್ರಹ್ಮದೇವಯ್ಯ ಮಾತನಾಡಿ, ಗ್ರಾಮಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿ ಎಲ್ಲಾ ಸಮುದಾಯಗಳ ಜೊತೆ ಉತ್ತಮ ಬಾಂಧವ್ಯ ಹೊಂದಿದ್ದರು. ಅವರಿಂದ ಸರಗೂರು ತಾಲೂಕು ಮತ್ತಷ್ಟು ಅಭಿವೃದ್ಧಿ ಹೊಂದಬೇಕಿತ್ತು. ಆದರೆ, ಅದೃಷ್ಟವಶಾತ್ ನಮ್ಮನ್ನು ಅಗಲಿದ್ದಾರೆ ಎಂದು ತಿಳಿಸಿದರು.

ಈ ವೇಳೆ ವರ್ತಕರ ಮಂಡಳಿ ಮಾಜಿ ಅಧ್ಯಕ್ಷ ಎಸ್.ಎನ್.ಪ್ರತಾಪ್, ಎಸ್.ನಾರಾಯಣ್, ಕೃಷ್ಣಚಾರ್, ಸುರೇಶ್ ಜೈನ್, ಮೋಹನ್‌ಕುಮಾರ್, ಉಪಾಧ್ಯಕ್ಷ ಎಸ್.ಪಿ. ಪ್ರಸಾದ್, ಕಾರ್ಯದರ್ಶಿ ಎಸ್.ಸಿ.ವೆಂಕಟೇಶ್, ಖಜಾಂಚಿ ಡಗ್ಲಾರಾಮ್, ವಾಸು, ಮುಕುಂದರಾಜ್, ಎಸ್.ಬಿ.ನಾಗರಾಜು, ಭೀಮ್‌ಸಿಂಗ್, ದೇವೇಂದ್ರಯ್ಯ, ನಾರಾಯಣ್, ಪಟ್ಟಣ ವರ್ತಕರ ಮಂಡಳಿ ಪದಾಧಿಕಾರಿಗಳು ಸೇರಿದಂತೆ ಕಾರ್ಯಕರ್ತರು ಹಾಜರಿದ್ದರು.

ಧ್ರುವಗೆ ಕಾಂಗ್ರೆಸ್ ಮುಖಂಡರ ಸಂತಾಪ

ಪಿರಿಯಾಪಟ್ಟಣ, ಮಾ.12– ಓರ್ವ ಸಾಮಾನ್ಯ ಕಾರ್ಯಕರ್ತನಾಗಿ ಕಾಂಗ್ರೆಸ್ ಪಕ್ಷ ಸೇರಿ, ಬಳಿಕ ಪ್ರಮುಖ ಮುಖಂಡನಾಗಿ ಬೆಳೆದ ಮಾಜಿ ಸಂಸದ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ನಿಧನ ರಾಜ್ಯಕ್ಕೆ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ತುಂಬಲಾರದ ನಷ್ಟ ಎಂದು ಪಟ್ಟಣದ ಕಾಂಗ್ರೆಸ್ ಮುಖಂಡರು ಸಂತಾಪ ಸೂಚಿಸಿದ್ದಾರೆ.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸಂತಾಪ ಸಭೆಯಲ್ಲಿ ಮಾತನಾಡಿದ ಮುಖಂಡರು, 2004ರಲ್ಲಿ ಸಂತೇಮರಳ್ಳಿ ಕ್ಷೇತ್ರ ಹಾಗೂ 2008ರಲ್ಲಿ ಕೊಳ್ಳೇಗಾಲ ಕ್ಷೇತ್ರದಿಂದ ಸತತ 2 ಬಾರಿ ಶಾಸಕರಾಗಿ, ಬಳಿಕ ಸಂಸದರಾಗಿ ಆಯ್ಕೆಯಾಗಿದ್ದ ಧ್ರುವನಾರಾಯಣ್ ರಾಜ್ಯ ಕಂಡ ಸಜ್ಜನ ರಾಜಕಾರಣಿ.

ಪಿರಿಯಾಪಟ್ಟಣದ ತಂಬಾಕು ಬೆಳೆಗಾರರ ಸಮಸ್ಯೆಗಳಿಗೆ ಸ್ಪಂದಿಸಿದ್ದ ಅವರು ರಾಜ್ಯದ ಸಂಸದರಲ್ಲಿಯೇ ವಿಶಿಷ್ಟ ಸ್ಥಾನ ಪಡೆದಿದ್ದರು. ಅವರ ಅಗಲಿಕೆ ಕಾಂಗ್ರೆಸ್ ಕಾರ್ಯಕರ್ತರಿಗೆ ನೋವುಂಟು ಮಾಡಿದೆ. ದೇವರು ಅವರ ಆತ್ಮಕ್ಕೆ ಶಾಂತಿ ನೀಡಿ, ಅವರ ಕುಟುಂಬಕ್ಕೆ



ಅವರನ್ನು ಕಳೆದುಕೊಂಡು ನೋವು ಸಹಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸಿದರು.

ಈ ವೇಳೆ ತಾಲೂಕು ಕಾಂಗ್ರೆಸ್ ಅಧ್ಯಕ್ಷ ಡಿ.ಟಿ.ಸ್ವಾಮಿ, ಮುಖಂಡರಾದ ಬಿ.ವಿ.ಜವರೇಗೌಡ, ಈರಯ್ಯ, ಪಿ.ಮಹದೇವ್, ಅಶೋಕ್, ಕುಮಾರ್‌ಗೌಡ, ಮಹದೇವ್ ಸೇರಿದಂತೆ ಇನ್ನಿತರರಿದ್ದರು.



ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಹೋಬಳಿ ರಾಜನ ಬಿಳಗುಲಿ ಗ್ರಾಮದಲ್ಲಿ 1.11 ಕೋಟಿ ರೂ. ವೆಚ್ಚದ ಕಾಮಗಾರಿಗೆ ಶಾಸಕ ಕೆ.ಮಹದೇವ್ ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ಗ್ರಾಪಂ ಅಧ್ಯಕ್ಷೆ ಗೀತಾ, ಉಪಾಧ್ಯಕ್ಷ ಶಫೀರ್ ಅಹಮದ್, ಸದಸ್ಯರಾದ ಸಂತೋಷ್, ಸುರೇಶ್, ರವಿ, ವಿದ್ಯಾಶಂಕರ್, ಮಹದೇವ್, ಪ್ರಸನ್ನ, ಪ್ರವೀಣ್ ಕುಮಾರ್, ಗೋವಿಂದೇಗೌಡ, ಗುತ್ತಿಗೆದಾರ ಸಣ್ಣೇಗೌಡ ಇತರರಿದ್ದರು.

ಇಂದು ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ



ಹೆಚ್.ಡಿ.ಕೋಟೆ, ಮಾ.12– ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಮಾ.13ರಂದು ಬೆಳಗ್ಗೆ 11 ಗಂಟೆಗೆ ರಾಜ್ಯ ರೈತ ಸಂಘ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕು ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಹೆಚ್.ಡಿ.ಕೋಟೆ ತಾಲೂಕು ಅಧ್ಯಕ್ಷ ಮಹದೇವನಾಯಕ ತಿಳಿಸಿದರು.

ಪಟ್ಟಣದ ಪತ್ರಕರ್ತರ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವನ್ಯಪ್ರಾಣಿಗಳ ಹಾವಳಿ ತಡೆಯಲು, ಅರಿಶಿನಕ್ಕೆ ನ್ಯಾಯಯುತ ಬೆಲೆ ನಿಗದಿಗಾಗಿ, ಬಿತ್ತನೆ ಬೀಜ– ಗೊಬ್ಬರ ಪೂರೈಕೆಗಾಗಿ, ಸರ್ಕಾರಿ ಕಚೇರಿಗಳ ಭ್ರಷ್ಟಾಚಾರ ವಿರೋಧಿಸಿ, ದರಖಾಸ್ತು ಮಂಜೂರಿಗಾಗಿ, ಮನೆ ಕುಸಿತ ಪರಿಹಾರಕ್ಕಾಗಿ, ಸಮರ್ಪಕ ವಿದ್ಯುತ್ ಸರಬರಾಜು ಮಾಡುವಂತೆ ಪಟ್ಟಣದ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಎ.ಎಂ. ಮಹೇಶ್ ಪ್ರಭು, ಪ್ರಸನ್ನ ಎನ್. ಭಾಗವಹಿಸಲಿದ್ದಾರೆ ಎಂದರು.

ಗೋಷ್ಠಿಯಲ್ಲಿ ಜೆ.ಕೆ.ರವಿಕುಮಾರ್, ಬೋರೇಗೌಡ, ಸಿಂಗೇಗೌಡ, ಗಣೇಶ್, ಚನ್ನನಾಯಕ, ನಂದೀಶ್ವರ ಸ್ವಾಮಿ, ಬೀರೇಶ್, ಶಿವಲಿಂಗಪ್ಪ ಹೆಚ್.ಎನ್., ನಂದೀಶ್, ವಿ.ಪ್ರಸಾದ್, ಮಹಿಳಾ ಘಟಕ ಅಧ್ಯಕ್ಷೆ ದೇವಮ್ಮ ಇದ್ದರು.

ವೀರ ಮಡಿವಾಳ ಮಾಚಿದೇವರ ಸಂಘಕ್ಕೆ ಬಸವರಾಜು ಅಧ್ಯಕ್ಷ



ತಿ.ನರಸೀಪುರ, ಮಾ.12– ತಾಲೂಕು ವೀರ ಮಡಿವಾಳ ಮಾಚಿದೇವರ ಸಂಘದ ನೂತನ ಅಧ್ಯಕ್ಷರಾಗಿ ಆಲಗೂಡು ಬಿ. ಬಸವರಾಜು ಆಯ್ಕೆಯಾಗಿದ್ದಾರೆ.

ಪಟ್ಟಣದ ಲೋಕೋಪಯೋಗಿ ಇಲಾಖೆ ಅತಿಥಿ ಗೃಹದಲ್ಲಿ ನಡೆದ ಸಭೆಯಲ್ಲಿ ಸಂಘದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಗೌರವಾಧ್ಯಕ್ಷರಾಗಿ ತಲಕಾಡು ಸಿದ್ದಪ್ಪ, ಅಧ್ಯಕ್ಷರಾಗಿ ಆಲಗೂಡು ಬಿ.ಬಸವರಾಜು, ಉಪಾಧ್ಯಕ್ಷರಾಗಿ ಕೆಂಪಯ್ಯನಹುಂಡಿ ಮಹದೇವಣ್ಣ, ಕಾರ್ಯದರ್ಶಿ ರವಿ ಜಿ.ಎನ್., ಖಜಾಂಚಿ ಜಿ.ಗುಂಡಶೆಟ್ಟಿ ಭೈರಾಪುರ, ಸಹ ಕಾರ್ಯದರ್ಶಿ ನಟರಾಜು ಪಿ.ಹಳ್ಳಿ, ಮಹಿಳಾ ಘಟಕದ ಅಧ್ಯಕ್ಷೆ ಸಾಕಮ್ಮ ಭೈರಾಪುರ, ಉಪಾಧ್ಯಕ್ಷೆ ಜ್ಯೋತಿ ಕುಂತನಹಳ್ಳಿ, ತಾಲೂಕು ಸಂಚಾಲಕ ರೇಚಣ್ಣ ಹಿರಿಯೂರು, ಹಾಗೂ ಬನ್ನೂರು ಹೋಬಳಿ ಅಧ್ಯಕ್ಷರಾಗಿ ನಾಗರಾಜು, ಚೆಲುವರಾಜು ಉಪಾಧ್ಯಕ್ಷ, ರಾಮದಾಸ್ ಸಂಚಾಲಕ, ಸೋಸಲೆ ಹೋಬಳಿ ಅಧ್ಯಕ್ಷರಾಗಿ ನಿಂಗರಾಜು ಉಪಾಧ್ಯಕ್ಷರಾಗಿ ಮಹೇಶ್, ತಲಕಾಡು ಹೋಬಳಿ ಅಧ್ಯಕ್ಷರಾಗಿ ಸಿದ್ದರಾಜು ಹೆಮ್ಮಿಗೆ, ಉಪಾಧ್ಯಕ್ಷ ಮಹೇಂದ್ರ, ಸಂಚಾಲಕರು ಸೋಮಣ್ಣ(ವಿಜಿ), ಮೂಗೂರು ಹೋಬಳಿ ಅಧ್ಯಕ್ಷರಾಗಿ ಮಹದೇವಸ್ವಾಮಿ, ಉಪಾಧ್ಯಕ್ಷ ಜಗದೀಶ್, ಸಂಚಾಲಕರಾಗಿ ಸಿದ್ದರಾಜು, ಕಸಬಾ ಹೋಬಳಿ ಅಧ್ಯಕ್ಷರಾಗಿ ಜಿ.ಮಹದೇವ (ಮೆಡಿಕಲ್), ಸಂಚಾಲಕರಾಗಿ ಶಿವಕುಮಾರ್ ಆಯ್ಕೆಯಾಗಿದ್ದಾರೆ.

ನೂತನ ಅಧ್ಯಕ್ಷ ಬಸವರಾಜು ಮಾತನಾಡಿ, ಸಂಘದ ಪದಾಧಿಕಾರಿಗಳ ಸಹಕಾರದೊಂದಿಗೆ ತಾಲೂಕಿನ ಮಡಿವಾಳ ಸಮುದಾಯವನ್ನು ಸಮಾಜದ ಮುಖ್ಯವಾಹಿನಿಗೆ ತರಲು ಶ್ರಮಿಸುತ್ತೇನೆ. ತೀರ ಹಿಂದುಳಿದಿರುವ ನಮ್ಮ ಸಮುದಾಯದ ಹಿತಕ್ಕಾಗಿ ಶ್ರಮಿಸುವ ಮೂಲಕ ಸಮಾಜಕ್ಕೆ ಸೂಕ್ತ ಸ್ಥಾನಮಾನ ಸಿಗಲು ಶ್ರಮಿಸುತ್ತೇನೆ ಎಂದರು.

ಮೋದಿ ಕಾರ್ಯಕ್ರಮಕ್ಕೆ ತೆರಳಿದ ಬಿಜೆಪಿ ಕಾರ್ಯಕರ್ತರು



ಜಯಪುರ, ಮಾ.12– ಮೈಸೂರು–ಬೆಂಗಳೂರು ದಶಪಥ ರಸ್ತೆ ಉದ್ಘಾಟನೆಗೆ ಮಂಡ್ಯದ ಗೆಜ್ಜಲಗೆರೆಗೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಕಾರ್ಯಕ್ರಮಕ್ಕೆ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಿಂದ 32 ಬಸ್‌ಗಳಲ್ಲಿ ಬಿಜೆಪಿ ಕಾರ್ಯರ್ತರು ತೆರಳಿದರು.

ದಾರಿಪುರ, ಜಯಪುರ, ಅರಸನಕೆರೆ, ಹಾರೋಹಳ್ಳಿ, ಮಾರ್ಬಳ್ಳಿ, ಮಾರ್ಬಳ್ಳಿಹುಂಡಿ, ದಾರಿಪುರ, ಉದ್ಬೂರು, ಮುರುಡಗಹಳ್ಳಿ, ದೂರ, ಟಿ.ಕಾಟೂರು, ತಳೂರು, ದೇವಗಹಳ್ಳಿ, ಯಡಹಳ್ಳಿ ಗ್ರಾಮಗಳಿಂದ 8 ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ 500 ಜನ ಬಿಜೆಪಿ ಕಾರ್ಯಕರ್ತರು ಮೋದಿ ಕಾರ್ಯಕ್ರಮಕ್ಕೆ ತೆರಳಿದರು. ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ರಮ್ಮನಹಳ್ಳಿ, ಆಲನಹಳ್ಳಿ, ಚಾಮುಂಡಿಬೆಟ್ಟ, ಶ್ರೀರಾಂಪುರ, ಬಂಡಿಪಾಳ್ಯ, ಹಿನಕಲ್, ಬೆಳವಾಡಿ ಗ್ರಾಮಗಳಿಂದ ಸಾವಿರಾರು ಕಾರ್ಯಕರ್ತರು ಸಮಾವೇಶಕ್ಕೆ ತೆರಳಿದರು. ಹೊರವರ್ತುಲ ರಸ್ತೆಯ ದೇವೇಗೌಡ ವೃತ್ತದ ಬಳಿ ವಿ.ಕವೀಶ್‌ಗೌಡ ಬಸ್‌ಗಳಿಗೆ ಚಾಲನೆ ನೀಡಿದರು.

ಬಿಜೆಪಿ ಮುಖಂಡ ವಿ.ಕವೀಶ್‌ಗೌಡ ಮಾತನಾಡಿ, ಬಿಜೆಪಿಯೇ ಭರವಸೆಯಾಗಿದ್ದು ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ಸ್ವಯಂಪ್ರೇರಿತವಾಗಿ ಮೋದಿಯವರ ಕಾರ್ಯಕ್ರಮಕ್ಕೆ ಆಗಮಿಸುತ್ತಿರುವುದು ಪಕ್ಷ ಸಂಘನೆಗೆ ಸಿಕ್ಕ ಪ್ರತಿಫಲ ಎಂದರು.

ಬಿಜೆಪಿ ಮುಖಂಡ ಆನಂದ್ ಮಾತನಾಡಿ, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಸಮರ್ಥ ಅಭ್ಯರ್ಥಿ ಇಲ್ಲದೆ ಬಿಜೆಪಿ ಪಕ್ಷ ಸಂಘಟನೆ ಸೊರಗಿತ್ತು. ಈ ಹಿಂದೆ ಅನಿವಾರ್ಯವಾಗಿ ಬಿಜೆಪಿಯ ಸಾಂಪ್ರದಾಯಿಕ ಮತಗಳು ಜೆಡಿಎಸ್ ಪಾಲಾಗುತ್ತಿದ್ದವು. ಇತ್ತೀಚೆಗೆ ಬಿಜೆಪಿಗೆ ಸೇರ್ಪಡೆಗೊಂಡ ವಿ.ಕವೀಶ್‌ಗೌಡರು ತಳಮಟ್ಟದಿಂದ ಪಕ್ಷ ಸಂಘಟಿಸುತ್ತಿದ್ದಾರೆ. ಅವರನ್ನು ಬೆಂಬಲಿಸಿ ನಾವೆಲ್ಲರೂ ಮೋದಿಯವರ ಕಾರ್ಯಕ್ರಮಕ್ಕೆ ತೆರಳುತ್ತಿದ್ದೇವೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ಗೆಲ್ಲಿಸುವುದೇ ನಮ್ಮ ಆದ್ಯ ಕರ್ತವ್ಯ ಎಂದರು.



ಹುಣಸೂರು ತಾಲೂಕಿನ ಶ್ಯಾನಭೋಗನಹಳ್ಳಿಯಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ಶಾನಭೋಗನಹಳ್ಳಿಯಿಂದ ಕುಪ್ಪೆ– ಕೊಳಘಟ್ಟ ಗ್ರಾಮ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಪಿ.ಮಂಜುನಾಥ್ ಚಾಲನೆ ನೀಡಿದರು. ಈ ವೇಳೆ ಗ್ರಾಮದ ಮುಖಂಡರು, ಯುವಕರು, ಮಹಿಳೆಯರು ಇತರರಿದ್ದರು.



ನಂಜನಗೂಡು ತಾಲೂಕಿನ ಗಟ್ಟವಾಡಿ ಗ್ರಾಮದಲ್ಲಿ ಕಾಂಗ್ರೆಸ್, ಬಿಜೆಪಿಯ ಹಲವು ಮುಖಂಡರು ಕ್ಷೇತ್ರದ ಜೆಡಿಎಸ್ ಟಿಕೆಟ್ ಆಕಾಂಕ್ಷಿ ಆರ್.ಮಾದೇಶ್ ಸಮ್ಮುಖದಲ್ಲಿ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಗೊಂಡರು. ಈ ವೇಳೆ ತಾಪಂ ಮಾಜಿ ಸದಸ್ಯ ಸುರೇಶ್, ಮುಜಾಯಿದ್ ಪಾಷ, ವಸಂತ್ ಕುಮಾರ್, ಸುನೀಲ್, ಚೇತು, ಬಸವಣ್ಣ, ಮಂಜು, ರಂಜು, ಮಾಧು, ರವಿ, ಲೋಕಿ, ಯೋಗೇಶ್ ಇತರರಿದ್ದರು.

ಕಾಡಾನೆ ದಾಳಿ: ವ್ಯಕ್ತಿಗೆ ತೀವ್ರ ಗಾಯ

ಹುಣಸೂರು, ಮಾ.12– ಕಾಡಾನೆ ದಾಳಿಗೆ ವ್ಯಕ್ತಿಯೋರ್ವ ತೀವ್ರ ಗಾಯಗೊಂಡಿರುವ ಘಟನೆ ತಾಲೂಕಿನ ಗುರುಪುರದಲ್ಲಿ ಶನಿವಾರ ಸಂಜೆ ನಡೆದಿದೆ.

ಟಿಬೆಟ್ ನಿರಾಶ್ರಿತರ ಶಿಬಿರದ ಬಡೆಲಾಮಾ ಕ್ಯಾಂಪ್‌ನ ಲಾಮಾ ಟಿಸಿಲ್ ಟ್ರಿಮ್(58) ಗಾಯಗೊಂಡಿದ್ದು, ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಶನಿವಾರ ಸಂಜೆ ನಾಗರಹೊಳೆ ವೀರನಹೊಸಹಳ್ಳಿ ವಲಯದಿಂದ ಬಂದ ಕಾಡಾನೆಯನ್ನು ರೈತರು ಕಾಡಿನತ್ತ ಅಟ್ಟುತ್ತಿದ್ದರು. ಈ ವೇಳೆ ತನ್ನ ಜಮೀನಿನಲ್ಲಿ ಕೃಷಿ ಚಟುವಟಿಕೆಯಲ್ಲಿ ನಿರತನಾಗಿದ್ದ ಟಿಸಿಲ್ ಟ್ರಿಮ್ ಮೇಲೆ ಕಾಡಾನೆ ದಾಳಿ ನಡೆಸಿ ತೀವ್ರವಾಗಿ ಗಾಯಗೊಳಿಸಿದೆ. ತಕ್ಷಣ ಅವರಿಗೆ ಟಿಬೆಟ್ ಕ್ಯಾಂಪಿನ ಪೆಂಡೆ ಆಸ್ಪತ್ರೆ ಹಾಗೂ ಹುಣಸೂರು ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಅಪೊಲೋ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆ.ಆರ್.ನಗರ ಕ್ಷೇತ್ರಕ್ಕೆ ಅಪ್ಪ, ಮಗನ ಕೊಡುಗೆ ಏನು

ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್ ವಿರುದ್ಧ ಶಾಸಕ ಸಾ.ರಾ.ಮಹೇಶ್ ವಾಗ್ದಾಳಿ

ಚುಂಚನಕಟ್ಟೆ ಮಾ.12– ಈ ಬಾರಿ ನಾನು ಶಾಸಕನಾಗದಿದ್ದರೆ ಮುಳುಗಿ ಹೋಗುತ್ತೇನೆ ಎಂದು ಕ್ಷೇತ್ರದ ಮನೆಮನೆಗೆ ತೆರಳಿ ಕೈ ಮುಗಿಯುತ್ತಿರುವ ಅಪ್ಪ ಮಗ ಕೆ.ಆರ್.ನಗರ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಏನು ಎಂದು ಕಾಂಗ್ರೆಸ್ ಮುಖಂಡ ಡಿ. ರವಿಶಂಕರ್ ವಿರುದ್ಧ ಶಾಸಕ ಸಾ.ರಾ. ಮಹೇಶ್ ವಾಗ್ದಾಳಿ ನಡೆಸಿದರು.

ಸಾಲಿಗ್ರಾಮ ತಾಲೂಕಿನ ಮಾಯಿಗೌಡನಹಳ್ಳಿ ಗ್ರಾಮದಲ್ಲಿ ನಡೆದ ಚುಂಚನಕಟ್ಟೆ ಹೋಬಳಿ ಜೆಡಿಎಸ್ ಕಾರ್ಯಕರ್ತರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ನೀವು ಎಲ್ಲೆ ಹೋದರೂ ಚುಂಚನಕಟ್ಟೆ ಶ್ರೀರಾಮ ಸಕ್ಕರೆ ಕಾರ್ಖಾನೆಯ ಹೆಸರಲ್ಲಿ ರಾಜಕಾರಣ ಮಾಡುತ್ತಿದ್ದೀರಿ ಇದೀಗ ಕಾರ್ಖಾನೆ ಆರಂಭವಾಗಿದ್ದು, ನಿಮಗೆ ಯಾವುದೇ ಅಸ್ತ್ರ ಸಿಗದಂತಾಗಿದೆ. ನಿಮ್ಮಂತೆ ನಾನು ಕೂತಲ್ಲಿ ನಿಂತಲ್ಲಿ ಜಾತಿ ರಾಜಕಾರಣ ಮಾಡುತ್ತಿಲ್ಲ ಎಂದ ಅವರು ಜಿಪಂ ಕ್ಷೇತ್ರದಲ್ಲಿ 2 ಬಾರಿ ಸದಸ್ಯರಾಗಿದ್ದ ನೀವು ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಕ್ಷೇತ್ರಕ್ಕೆ ಎಷ್ಟು ಅನುದಾನ ತಂದು ಅಭಿವೃದ್ಧಿ ಕಾರ್ಯ ಮಾಡಿದ್ದೇರಿ ಎಂದು ಜನತೆಗೆ ತಿಳಿಸಿ ಮತ ಕೇಳಿ ಎಂದರು.

ಕ್ಷೇತ್ರದಲ್ಲಿ ಇಷ್ಟು ದಿನ ಶಾಂತಿಯುತವಾಗಿದ್ದ ಜೆಡಿಎಸ್ ಕಾರ್ಯಕರ್ತರನ್ನು ಕೆಣಕುವ ಕೆಲಸ ಮಾಡುತ್ತಿದ್ದು, ಇಂದಿನ ಸಭೆಯಲ್ಲಿರುವ ಜನಸಾಗರವೇ ನಮ್ಮ ಕಾರ್ಯಕರ್ತರನ್ನು ಕೆಣಕುವವರಿಗೆ ಉತ್ತರವಾಗಿದೆ ಎಂದರು.

ಇದಕ್ಕೂ ಮೊದಲು ಚುಂಚನಕಟ್ಟೆ ಶ್ರೀರಾಮ ದೇವಾಲಯದಲ್ಲಿ ಜೆಡಿಎಸ್ ಕಾರ್ಯಕರ್ತರೊಂದಿಗೆ ಪೂಜೆ ಸಲ್ಲಿಸಿದ ಶಾಸಕ ಸಾ.ರಾ.ಮಹೇಶ್ ನಂತರ ಸಾವಿರ ಬೈಕ್‌ಗಳೊಂದಿಗೆ ರ್‍ಯಾಲಿಯಲ್ಲಿ ಹೊಸೂರು ಮೂಲಕ ಮಾಯಿಗೌಡನಹಳ್ಳಿ ಗ್ರಾಮಕ್ಕೆ ಆಗಮಿಸಿದರು. ಈ ವೇಳೆ ಹೊಸೂರು, ಮಾಯಿಗೌಡನಹಳ್ಳಿ ಗ್ರಾಮಗಳಲ್ಲಿ ಕಾರ್ಯಕರ್ತರು ಕ್ರೇನ್ ಮತ್ತು ಜೆಸಿಬಿ ಮೂಲಕ ಬೃಹತ್ ಗಾತ್ರದ ಮೊಸಂಬಿ, ಸೇಬಿನಹಾರ ಹಾಕಿ ಭರ್ಜರಿಯಾಗಿ ಸ್ವಾಗತಿಸಿದರು. ಸಭೆಯಲ್ಲಿ 3 ಸಾವಿರಕ್ಕೂ ಅಧಿಕ ಜೆಡಿಎಸ್ ಕಾರ್ಯಕರ್ತರು ಭಾಗವಹಿಸಿದ್ದರು.



ಚಾಮುಂಡೇಶ್ವರಿ ಅಭ್ಯರ್ಥಿ ಆಯ್ಕೆ ಸಂಬಂಧ ಸಿದ್ದರಾಮಯ್ಯ ಸಭೆ



ಮೈಸೂರು, ಮಾ.12(ಎಂಕೆ)– ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಆಯ್ಕೆ ಸಂಬಂಧ ಮಾಜಿ ಸಿಎಂ ಸಿದ್ದರಾಮಯ್ಯ, ಆಕಾಂಕ್ಷಿಗಳು ಹಾಗೂ ಸ್ಥಳೀಯ ಶಾಸಕರು, ಮುಖಂಡರೊಂದಿಗೆ ಸಭೆ ನಡೆಸಿದ್ದಾರೆ.

ನಗರದ ಜೆಪಿ ಫಾರ್ಚೂನ್ ಹೋಟೆಲ್‌ನಲ್ಲಿ ಭಾನುವಾರ ಸಭೆ ನಡೆಸಿದ ಅವರು, ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆ ಚಾಮುಂಡೇಶ್ವರಿ ಕ್ಷೇತ್ರದ ಟಿಕೆಟ್ ಆಕಾಂಕ್ಷಿಗಳು ಹಾಗೂ ಸ್ಥಳೀಯ ಮುಖಂಡರಿಂದ ಅಭಿಪ್ರಾಯ ಸಂಗ್ರಹಿಸಿದ್ದಾರೆ. ಮಾ.17 ರ ನಂತರ ಬಿಡುಗಡೆ ಮಾಡುವ ಕಾಂಗ್ರೆಸ್‌ನ ಅಭ್ಯರ್ಥಿಗಳ ಪಟ್ಟಿಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಅಭ್ಯರ್ಥಿ ಯಾರೆಂಬುದನ್ನು ಘೋಷಣೆ ಮಾಡುವ ಸಾಧ್ಯತೆ ಇದೆ ಎಂದು ಆಕಾಂಕ್ಷಿಯೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಗೆಲ್ಲುವ ಅಭ್ಯರ್ಥಿ ಆಯ್ಕೆ ಗೆಲುವಿಗಾಗಿ ಏನೆಲ್ಲಾ ಮಾಡಬೇಕು. ಪಕ್ಷ ಸಂಘಟನೆ ಸೇರಿದಂತೆ ಹಲವು ವಿಚಾರಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು. ಚಾಮುಂಡೇಶ್ವರಿ ಕ್ಷೇತ್ರದಲ್ಲಿರುವ ಟಿಕೆಟ್ ಆಕಾಂಕ್ಷಿಗಳಲ್ಲಿ ಯಾರಿಗೆ ಟಿಕೆಟ್ ನೀಡುವುದು ಸೂಕ್ತ ಎಂಬುದರ ಕುರಿತು ಹಲವರ ಅಭಿಪ್ರಾಯ ಸಂಗ್ರಹಿಸಲಾಯಿತು. ಅಂತಿಮವಾಗಿ ಯಾರನ್ನೇ ಅಭ್ಯರ್ಥಿಯನ್ನಾಗಿ ಘೋಷಣೆ ಮಾಡಿದರೂ ಎಲ್ಲರೂ ಒಗ್ಗಟ್ಟಿನಿಂದ ಅಭ್ಯರ್ಥಿ ಗೆಲುವಿಗೆ ಶ್ರಮಿಸಬೇಕು. ಇದರಲ್ಲಿ ಯಾವುದೇ ಬದಲಾವಣೆಯಾಗಬಾರದು ಎಂದು ಈ ವೇಳೆ ಸಿದ್ದರಾಮಯ್ಯ ಸೂಚಿಸಿದ್ದಾರೆ ಎನ್ನಲಾಗಿದೆ.

ಟಿಕೆಟ್ ಆಕಾಂಕ್ಷಿಗಳಾದ ಕೆ.ಮರೀಗೌಡ, ರಾಕೇಶ್ ಪಾಪಣ್ಣ, ಬೀರಿಹುಂಡಿ ಬಸವಣ್ಣ, ಯರಗನಹಳ್ಳಿ ಮಾದೇಗೌಡ, ಮಾವಿನಹಳ್ಳಿ ಸಿದ್ದೇಗೌಡ, ಕೆಂಪನಾಯ್ಕ, ಹುಣಸೂರು ಶಾಸಕ ಮಂಜುನಾಥ್ ಸೇರಿದಂತೆ ಚಾಮುಂಡೇಶ್ವರಿ ಕ್ಷೇತ್ರ ಜಿಪಂ, ತಾಪಂ, ಗ್ರಾಪಂ ಪದಾಧಿಕಾರಿಗಳು, ಮುಖಂಡರು ಸಭೆಯಲ್ಲಿ ಭಾಗವಹಿಸಿದ್ದರು.

ಸಮಾಜವನ್ನು ಕಟ್ಟಿ ಬೆಳೆಸುವ ಜವಾಬ್ದಾರಿ ಜಂಗಮರಿಗಿದೆ

ಜಪದಕಟ್ಟೆ ಮಠದ ಡಾ.ಮುಮ್ಮಡಿ ಚಂದ್ರಶೇಖರ ಶಿವಚಾರ್ಯ ಸ್ವಾಮೀಜಿ



ನ್ಯಾಯ ನೀತಿ ಧರ್ಮದ ಕಾರ್ಯವನ್ನು ನಡೆಸಿಕೊಂಡು ಬಂದವರು ಶ್ರೀ ರೇಣುಕಾಚಾರ್ಯರು. ಅವರು ನಡೆದು ಬಂದ ದಾರಿಯು ಅನುಸರಿಸಿದ ವೀರಶೈವ ಸಮಾಜವು ಸಮಾಜಕ್ಕೆ ಉತ್ತಮ ಕೊಡುಗೆ ನೀಡುತ್ತಿದೆ. ಸಮಾಜದ ಬೆಳವಣಿಗೆಗೆ ಶ್ರಮಿಸಿ ದೇಶದ ಬೇರೆ ಬೇರೆ ಭಾಗದಲ್ಲಿ ಶಿವಲಿಂಗವನ್ನು ಸ್ಥಾಪಿಸಿ ವೀರಶೈವ ಧರ್ಮದ ಬಗ್ಗೆ ಅಪಾರ ಪ್ರಚಾರ ಮಾಡಿದವರು ಶ್ರೀ ರೇಣುಕಾಚಾರ್ಯರು. ವೀರಶೈವ ಧರ್ಮ ತತ್ವಗಳು ಅವರ ಉಪಾಸನಗಳಿಂದಲೇ ಹೆಚ್ಚಿನ ಪ್ರಭಾವವನ್ನು ಬೀರಿದ್ದರು.

- ಶಾಸಕ ಎಲ್. ನಾಗೇಂದ್ರ

ಮೈಸೂರು, ಮಾ.12(ಎಸ್‌ಪಿಎನ್)– ಜಂಗಮರೆನ್ನಿಸಿಕೊಂಡ ನಮಗೆ ಸಮಾಜವನ್ನು ಕಟ್ಟಿ ಬೆಳೆಸುವ ದೊಡ್ಡ ಜವಾಬ್ದಾರಿ ಇದೆ ಎಂದು ಮೈಸೂರು ಅರಮನೆ ಜಪದಕಟ್ಟೆ ಮಠದ ಡಾ.ಮುಮ್ಮಡಿ ಚಂದ್ರಶೇಖರ್ ಶಿವಚಾರ್ಯ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರದಲ್ಲಿ ಶ್ರೀ ಪಂಚಾಚಾರ್ಯರ ಯುಗಮಾನೋತ್ಸವ ಸಮಿತಿ ಹಾಗೂ ಮೈಸೂರು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿದ್ದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ –2023 ಕಾರ್ಯಕ್ರಮದಲ್ಲಿ ಸಾನ್ನಿಧ್ಯವಹಿಸಿ ಅವರು, ಮಾತನಾಡಿದರು.

ಗ್ರಾಮೀಣ ಪ್ರದೇಶದ ಮಕ್ಕಳು ಪರೀಕ್ಷೆಯಲ್ಲಿ ಅನುತ್ತೀರ್ಣರಾದವರನ್ನು ನಮ್ಮ ಮಠಕ್ಕೆ ಕಳುಹಿಸಿದರೆ, ಅವರಿಗೆ ಬದುಕಿನ ಮಾರ್ಗಗಳನ್ನು ಕಲಿಸಿಕೊಡಲಾಗುವುದು. ಜಂಗಮ ಕುಲಕ್ಕೆ ಜೋಳಿಗೆ ಕಾಯಕ ಕೊಟ್ಟ ಮೂಲಪುರುಷ ಶ್ರೀ ರೇಣುಕಾಚಾರ್ಯರು, ಇವರು ವೀರಶೈವ ಧರ್ಮ ಉದ್ಧಾರಕರು. ಹಾಗಾಗಿ ಜಂಗಮರಿಗೆ ಸಮಾಜ ಕಟ್ಟುವ ಜವಾಬ್ದಾರಿಯಿದೆ ಎಂದು ತಿಳಿಸಿದರು.

ಮೈಸೂರು ಸಂಸ್ಥಾನದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು, ವೀರಶೈವ ಮಠ–ಮಾನ್ಯಗಳಿಗೆ ದತ್ತಿ–ದಾನಗಳನ್ನು ಕೊಟ್ಟು ಆ ಸಮಾಜವನ್ನು ಪೋಷಿಸಿದ್ದರು. ಅಲ್ಲದೆ, ದೇಶದ ವಿವಿಧ ಭಾಗದಲ್ಲಿ 12 ಜ್ಯೋತಿರ್ಲಿಂಗಗಳಿವೆ. ಇದರಲ್ಲಿ ಗುಜರಾತಿನ ಸೌರಾಷ್ಟ್ರದ ಸೋಮನಾಥ, ಉಜ್ಜೈನಿಯ ಮಹಾಕಾಳ, ಹಿಮಾಲಯದ ಕೇದಾರನಾಥ, ಕಾಶಿ ವಿಶ್ವನಾಥ, ಶ್ರೀ ಶೈಲ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಐದು ಜ್ಯೋತಿರ್ಲಿಂಗಗಳು ನಮ್ಮ ಪಂಚಪೀಠದ್ದು ಎಂಬುದು ನಮ್ಮೆಲ್ಲರ ಹೆಮ್ಮೆ ವಿಷಯ ಎಂದು ಅವರು ಹೇಳಿದರು.

ಇಂದಿನ ವೀರಶೈವ ಸಮುದಾಯದವರು ತಮ್ಮ ಎದೆಯ ಮೇಲೆ ಧರಿಸುವ ಶಿವಲಿಂಗಕ್ಕೆ ಪೂಜೆ–ಪುರಸ್ಕಾರ ಮಾಡುವವರ ಸಂಖ್ಯೆ ಕಡಿಮೆಯಾಗಿದೆ. ಸ್ವಾಮೀಜಿಗಳು ಮನೆಗೆ ಭೇಟಿ ಕೊಟ್ಟಾಗ ಇಲ್ಲವೇ ಶಿವರಾತ್ರಿ ವೇಳೆ ಶಿವಲಿಂಗಕ್ಕೆ ಪೂಜೆ ಮಾಡಿ ಗೂಟಕ್ಕೆ ನೇತು ಹಾಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಸಮಾಜದ ಬೆಳವಣಿಗೆ ದೃಷ್ಟಿಯಿದ ಉತ್ತಮ ನಡೆತೆಯಲ್ಲ ಎಂದ ಬೇಸರ ವ್ಯಕ್ತಪಡಿಸಿದ ಶ್ರೀಗಳು, ನಿಮ್ಮ ಮಕ್ಕಳಿಗೆ ಚಿಕ್ಕಂದಿನಿಂದಲೇ ಸಂಸ್ಕಾರ ನೀಡದಿದ್ದರೆ ದೇಶಕ್ಕೆ ಉತ್ತಮ ಪ್ರಜೆಯಾಗಿ ನೀಡಲು ಸಾಧ್ಯವೇ ಎಂದು ಪ್ರಶ್ನಿಸಿದರು.

ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆ ಮೇಯರ್ ಶಿವಕುಮಾರ್, ಮೈಸೂರು ಬಣ್ಣ ಮತ್ತು ಅರಗು ಕಾರ್ಖಾನೆಯ ಅಧ್ಯಕ್ಷ ರಘು ಕೌಟಿಲ್ಯ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ ರಾಜೀವ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ ಎಂ.ಡಿ. ಸುದರ್ಶನ್, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಗೋವಿಂದ ರಾಜು, ನಗರ ಪಾಲಿಕೆಯ ಸದಸ್ಯ ಜಗದೀಶ್, ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ಕಾನ್ಯ ಶಿವಮೂರ್ತಿ, ಕರ್ನಾಟಕ ಮೃಗಾಲಯದ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಕಾಂಗ್ರೆಸ್ ಮುಖಂಡ ಪ್ರದೀಪ್‌ಕುಮಾರ್, ಬೆಂಗಳೂರು ಬಸವೇಶ್ವರ ಪ್ರಥಮ ದರ್ಜೆ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಡಾ.ಸಿ.ಶಿವಕುಮಾರಸ್ವಾಮಿ ಹಾಗೂ ವೀರಶೈವ ಲಿಂಗಾಯಿತ ಸಮಾಜದ ಮುಖಂಡರಾದ ಎಸ್.ಸಿ.ರಾಜೇಶ್, ಎನ್.ಜಿ.ಗಿರೀಶ್, ಪರಮಶಿವಯ್ಯ, ವೇದಮೂರ್ತಿ, ಪ್ರಸನ್ನಕುಮಾರ್ ಉಪಸ್ಥಿತರಿದ್ದರು. ಇದಕ್ಕೂ ವೀರಭದ್ರ ಕುಣಿತ ಮೂಲಕ ರೇಣುಕಾಚಾರ್ಯ ವಿಗ್ರಹವನ್ನು ಮೆರವಣಿಗೆಯಲ್ಲಿ ಕಲಾಮಂದಿರ ವೇದಿಕೆಗೆ ತರಲಾಯಿತು. ವೈಷ್ಣವಿ ಭಜನಾ ಮಂಡಳಿ ಕಲಾವಿದರು ಗೀತಗಾಯನ ನಡೆಸಿಕೊಟ್ಟರು.